# ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಅಧಿನಿಯಮ, 1964

(1964ರ ಅಧಿನಿಯಮ ಸಂಖ್ಯೆ 18)

**[12-6-2003 ರ ಭಾರತ ರಾಜ್ಯಪತ್ರದ IXನೇ ಭಾಗದ, 1ನೇ ವಿಭಾಗದ, 25 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 62 ರಿಂದ 94 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

### ಅಧ್ಯಾಯ - I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು.

### ಅಧ್ಯಾಯ - II
### ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

3. ಭಾರತ ಕೈಗಾರಿಕಾ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.
4. ಅಧಿಕೃತ ಬಂಡವಾಳ
4ಎ. ಕೇಂದ್ರ ಸರ್ಕಾರಕ್ಕೆ ಬಂಡವಾಳದ ವರ್ಗಾವಣೆ
4ಬಿ. ಮೊಬಲಗಿನ ಸಂದಾಯ
4ಸಿ. ಹೊರಡಿಸಲಾದ ಬಂಡವಾಳ
4ಡಿ. ಷೇರು ಬಂಡವಾಳದ ಇಳಿತಾಯ
4ಇ. ಈಕ್ವಿಟಿ ಷೇರುಗಳನ್ನು ವಿಮೋಚನೀಯ ಪ್ರಾಶಸ್ತ್ಯ ಷೇರುಗಳನ್ನಾಗಿ ಪರಿವರ್ತಿಸುವುದು

### ಅಧ್ಯಾಯ - III
### ಅಭಿವೃದ್ಧಿ ಬ್ಯಾಂಕಿನ ವ್ಯವಸ್ಥಾಪನೆ

5. ವ್ಯವಸ್ಥಾಪನೆ
6. ಮಂಡಲಿಯ ರಚನೆ
6ಎ. [ಬಿಟ್ಟು ಬಿಡಲಾಗಿದೆ]
6ಬಿ. ನಿರ್ದೇಶಕನಾಗಿರಲು ಅನರ್ಹತೆಗಳು
6ಸಿ. ನಿರ್ದೇಶಕನ ಪದವು ತೆರವಾಗುವುದು
7. ಕಾರ್ಯ ನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು
8. ನಿರ್ದೇಶಕರ ಮತ್ತು ಸಮಿತಿಗಳ ಸದಸ್ಯರ ಫೀಜುಗಳು ಮತ್ತು ಭತ್ಯಗಳು

## ಅಧ್ಯಾಯ - IV
## ಅಭಿವೃದ್ಧಿ ಬ್ಯಾಂಕಿನ ವ್ಯವಹಾರ


9. ಅಭಿವೃದ್ಧಿ ಬ್ಯಾಂಕಿನ ವ್ಯವಹಾರಗಳು
9ಎ. ನಿಷೇಧಿತ ವ್ಯವಹಾರ
10. ಕೇಂದ್ರ ಸರ್ಕಾರದಿಂದ ಸಾಲಗಳು
11. ಅಭಿವೃದ್ಧಿ ಬ್ಯಾಂಕು ಸಾಲ ತೆಗೆದುಕೊಳ್ಳುವುದು ಮತ್ತು ಠೇವಣಿಗಳನ್ನು ಅಂಗೀಕರಿಸುವುದು.
11ಎ. ಹಕ್ಕುಗಳ ವರ್ಗಾವಣೆ ಅಧಿಕಾರ
11ಬಿ. ಹಕ್ಕುಗಳನ್ನು ಆರ್ಜಿಸುವ ಅಧಿಕಾರ
12. ವಿದೇಶಿ ಕರೆನ್ಸಿಯಲ್ಲಿ ಸಾಲಗಳು
13. ಅಭಿವೃದ್ಧಿ ಬ್ಯಾಂಕಿಗೆ ಅನುದಾನಗಳು, ದೇಣಿಗೆಗಳು, ಇತ್ಯಾದಿ.


## ಅಧ್ಯಾಯ - IV ಎ
## ಷೇರುಗಳು


13ಎ. ಷೇರುಗಳು ಮುಕ್ತವಾಗಿ ವರ್ಗಾವಣೆಯಾಗುವುದು
13ಬಿ. ಷೇರುದಾರರ ರಿಜಿಸ್ಟರು
13ಬಿಎ. ಪ್ರಯೋಜನಕಾರಿ ಒಡೆಯರ ರಿಜಿಸ್ಟರು
13ಸಿ. ಷೇರುದಾರರ ರಿಜಿಸ್ಟರಿನಲ್ಲಿ ನ್ಯಾಸವನ್ನು ನಮೂದಿಸಬಾರದು
13ಡಿ. ಷೇರುಗಳ ವರ್ಗಾವಣೆಯ ನೋಂದಣಿಯನ್ನು ನಿರಾಕರಿಸಲು ಮಂಡಲಿಯ ಹಕ್ಕು
13ಇ. ಭಾರತ ನ್ಯಾಸಗಳ ಅಧಿನಿಯಮ, 1882ರ ಮೇರೆಗೆ ಷೇರುಗಳು ಭದ್ರತೆಗಳಾಗಿರುವುದು.


## ಅಧ್ಯಾಯ - IV ಬಿ
## ಸಭೆಗಳು ಮತ್ತು ನಡವಳಿಗಳು


13ಎಫ್. ವಾರ್ಷಿಕ ಸರ್ವ ಸದಸ್ಯರ ಸಭೆ
13ಜಿ. ಮತದಾನದ ಹಕ್ಕನ್ನು ಚಲಾಯಿಸುವುದರ ಮೇಲೆ ನಿರ್ಬಂಧ
13ಎಚ್. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಮತ್ತು ಕಾರ್ಯವಿಧಾನ.

## ಅಧ್ಯಾಯ – V
## ಅಭಿವೃದ್ಧಿ ಸಹಾಯ ನಿಧಿ


14. ಅಭಿವೃದ್ಧಿ ಸಹಾಯ ನಿಧಿ
15. ಅಭಿವೃದ್ಧಿ ಸಹಾಯ ನಿಧಿಗೆ ಜಮೆಗಳು
16. ಅಭಿವೃದ್ಧಿ ಸಹಾಯ ನಿಧಿಯ ಬಳಕೆ
17. ಅಭಿವೃದ್ಧಿ ಸಹಾಯ ನಿಧಿಗೆ ಖರ್ಚುಗಳು
18. ಅಭಿವೃದ್ಧಿ ಸಹಾಯ ನಿಧಿಯ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ
19. ಅಭಿವೃದ್ಧಿ ಸಹಾಯ ನಿಧಿಯ ಸಮಾಪನ


## ಅಧ್ಯಾಯ – VI
## ಸಾಮಾನ್ಯ ನಿಧಿ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ


20. ಸಾಮಾನ್ಯ ನಿಧಿ
21. ಲೆಕ್ಕಪತ್ರಗಳ ಮತ್ತು ಆಯವ್ಯಯ ಪಟ್ಟಿಯ ತಯಾರಿಕೆ
22. ಸಾಮಾನ್ಯ ನಿಧಿಗೆ ಒದಗಿಬಂದ ಲಾಭಗಳ ವಿಲೆ
23. ಲೆಕ್ಕ ಪರಿಶೋಧನೆ
24. ಉಳಿಸುವಿಕೆ


## ಅಧ್ಯಾಯ – VII
## ಉದ್ಯಮಕ್ಕಾಗಿ ಪುನಃ ಹಣ ಒದಗಿಸುವ ನಿಗಮದ ವ್ಯವಹಾರದ ವರ್ಗಾವಣೆ


25. ಉದ್ಯಮಕ್ಕಾಗಿ ಪುನಃ ಹಣ ಒದಗಿಸುವ ನಿಗಮದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆ.


## ಅಧ್ಯಾಯ – VIII
## ಸಂಕೀರ್ಣ


26. ಅಭಿವೃದ್ಧಿ ಬ್ಯಾಂಕಿನ ಸಿಬ್ಬಂದಿ
27. ಅಧಿಕಾರಗಳ ಪ್ರತ್ಯಾಯೋಜನೆ
28. ವಿವರಪಟ್ಟಿಕೆಗಳು
29. ನಂಬಿಕೆ ಮತ್ತು ರಹಸ್ಯತೆಗೆ ಸಂಬಂಧಪಟ್ಟ ಬಾಧ್ಯತೆ
30. ನೇಮಕಾತಿಗಳಲ್ಲಿನ ದೋಷಗಳು, ಕಾರ್ಯಗಳನ್ನು ಅಸಿಂಧುಗೊಳಿಸತಕ್ಕುದಲ್ಲ, ಇತ್ಯಾದಿ
30ಎ. ನಿರ್ದೇಶಕರ ನೇಮಕಾತಿಯ ಬಗ್ಗೆ ಅಭಿವೃದ್ಧಿ ಬ್ಯಾಂಕಿನೊಂದಿಗಿನ ವ್ಯವಸ್ಥೆಯು ಚಾಲ್ತಿಯಲ್ಲಿರತಕ್ಕುದು
31. ನಿರ್ದೇಶಕರುಗಳ ನಷ್ಟ ಭರ್ತಿ
32. ಈ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಕ್ರಮದ ಸಂರಕ್ಷಣೆ
32ಎ. ಠೇವಣಿಗಳು, ಬಾಂಡುಗಳು, ಇತ್ಯಾದಿಗಳ ಸಂಬಂಧದಲ್ಲಿ ನಾಮ ನಿರ್ದೇಶನ

33. ಅಭಿವೃದ್ಧಿ ಬ್ಯಾಂಕಿಗೆ ಸಂಬಂಧಪಟ್ಟಂತೆ 1891ರ ಅಧಿನಿಯಮ 18 ಅನ್ವಯವಾಗತಕ್ಕುದು
34. ಅಧಿನಿಯಮ 1949ರ 10 ಇದು ಅಭಿವೃದ್ಧಿ ಬ್ಯಾಂಕಿಗೆ ಅನ್ವಯವಾಗದಿರುವುದು
35. [* * * * * ]
36. ಅಭಿವೃದ್ಧಿ ಬ್ಯಾಂಕಿನ ಸಮಾಪನ
37. ವಿನಿಯಮಗಳ ರಚನಾಧಿಕಾರ
38. ಕೆಲವು ಅಧಿನಿಯಮಿತಿಗಳ ತಿದ್ದುಪಡಿ
39. ತೊಂದರೆಯನ್ನು ನಿವಾರಿಸಲು ಅಧಿಕಾರ

ಮೊದಲನೇ ಅನುಸೂಚಿ

ಎರಡನೇ ಅನುಸೂಚಿ

# ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964

(1964ರ ಅಧಿನಿಯಮ ಸಂಖ್ಯೆ 18)

[16ನೇ ಮೇ 1964]

ರಾಷ್ಟ್ರೀಯ ಆದ್ಯತೆಗಳು, ಕೈಗಾರಿಕೆಗಳಿಗೆ ಹಣಕಾಸು ಒದಗಿಸುವುದು, ಅದನ್ನು ಸಂವರ್ಧನಗೊಳಿಸುವ ಅಥವಾ ಅಭಿವೃದ್ಧಿಗೊಳಿಸುವುದರಲ್ಲಿ ತೊಡಗಿರುವ ಸಂಸ್ಥೆಯ ಕಾರ್ಯ ನಿರ್ವಹಣೆಗಳಿಗೆ ಅನುಗುಣವಾಗಿ ಅವುಗಳನ್ನು ಸಮನ್ವಯಗೊಳಿಸುವುದಕ್ಕಾಗಿ ಕೈಗಾರಿಕೆಯ ಅಭಿವೃದ್ಧಿಗಾಗಿ ಸಾಲ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಪ್ರಧಾನ ಹಣಕಾಸಿನ ಸಂಸ್ಥೆಯೆಂದು ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಮತ್ತು ಕೆಲವು ಅಧಿನಿಯಮಿತಿಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿನ ಅಧಿನಿಯಮ.

ಭಾರತ ಗಣರಾಜ್ಯದ ಹದಿನೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ - I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕ ಮಂಡಲಿ;

(ಬಿ) "ಅಭಿವೃದ್ಧಿ ಬ್ಯಾಂಕ್" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್;

(ಸಿ) "ಕೈಗಾರಿಕಾ ಸಂಸ್ಥೆ" ಎಂದರೆ:-

(i) ಸರಕುಗಳ ತಯಾರಿಕೆ, ಪರಿರಕ್ಷಣೆ ಅಥವಾ ಸಂಸ್ಕರಣೆ;

(ii) ಹಡಗು ಸಾಗಣೆ;

(iii) ಗಣಿಗಳ ಅಭಿವೃದ್ಧಿಯನ್ನೊಳಗೊಂಡು ಗಣಿ ಕೆಲಸ;

(iv) ಹೋಟೆಲು ಉದ್ಯಮ;

(v) ರಸ್ತೆ ಮೂಲಕ, ಅಥವಾ ಜಲ ಮಾರ್ಗದ ಮೂಲಕ ಅಥವಾ ವಾಯು ಮಾರ್ಗದ ಮೂಲಕ ಅಥವಾ ಹಗ್ಗದಾರಿ ಮೂಲಕ ಅಥವಾ ಲಿಫ್ಟ್ ಮೂಲಕ ಪ್ರಯಾಣಿಕರ ಅಥವಾ ಸರಕುಗಳ ಸಾಗಣೆ;

(vi) ವಿದ್ಯುಚ್ಛಕ್ತಿ ಅಥವಾ ಯಾವುದೇ ಇತರ ರೂಪದ ಶಕ್ತಿಯನ್ನು ಉತ್ಪಾದಿಸುವುದು, ದಾಸ್ತಾನು ಮಾಡುವುದು ಅಥವಾ ವಿತರಿಸುವುದು;

(vii) ಯಾವುದೇ ವಿವರಣೆಯ ಸಾಮಗ್ರಿ ಅಥವಾ ವಾಹನಗಳು, ನೌಕೆಗಳು ಅಥವಾ ಮೋಟಾರು ದೋಣಿಗಳು ಅಥವಾ ಟ್ರೇಲರುಗಳು ಅಥವಾ ಟ್ರಾಕ್ಟರುಗಳು – ಇವುಗಳನ್ನು ಇಟ್ಟುಕೊಂಡು ಬರುವುದು, ಅವುಗಳ ದುರಸ್ತಿ, ಪರೀಕ್ಷೆ ಅಥವಾ ಉಪಯೋಗಕ್ಕಾಗಿ ಸಜ್ಜುಗೊಳಿಸುವುದು;

(viii) ಯಂತ್ರ ಸಾಮಗ್ರಿ ಅಥವಾ ಶಕ್ತಿಯ ಸಹಾಯದಿಂದ ಯಾವುದೇ ವಸ್ತುವನ್ನು ಕೂಡಿಸುವುದು, ದುರಸ್ತಿ ಮಾಡುವುದು ಅಥವಾ ಪ್ಯಾಕು ಮಾಡುವುದು;

(ix) ಕೈಗಾರಿಕಾ ಪ್ರದೇಶವನ್ನು ಅಥವಾ ಕೈಗಾರಿಕಾ ಎಸ್ಟೇಟನ್ನು ಸ್ಥಾಪಿಸುವುದು ಅಥವಾ ಅಭಿವೃದ್ಧಿಪಡಿಸುವುದು;

(x) ಮೀನುಗಾರಿಕೆ ಅಥವಾ ಅದರ ನಿರ್ವಹಣೆಗಾಗಿ ಸಮುದ್ರ ತೀರ ಸೌಲಭ್ಯಗಳನ್ನು ಒದಗಿಸುವುದು;

(xi) ಕೈಗಾರಿಕಾ ಬೆಳವಣಿಗೆಯನ್ನು ವೃದ್ಧಿಗೊಳಿಸುವುದಕ್ಕಾಗಿ ವಿಶೇಷ ಅಥವಾ ತಾಂತ್ರಿಕ ಜ್ಞಾನ ಅಥವಾ ಇತರ ಸೇವೆಗಳನ್ನು ಒದಗಿಸುವುದು;

(xii) ಕೈಗಾರಿಕೆಗಾಗಿ ಇಂಜಿನಿಯರಿಂಗ್, ತಾಂತ್ರಿಕ, ಹಣಕಾಸು, ವ್ಯವಸ್ಥಾಪನೆ, ಕ್ರಯ ವಿಕ್ರಯ ಅಥವಾ ಇತರ ಸೇವೆಗಳು ಅಥವಾ ಸೌಲಭ್ಯಗಳನ್ನು ಒದಗಿಸುವುದು;

(xiii) ಯಾವುದೇ ವಸ್ತು ಅಥವಾ ಪದಾರ್ಥವನ್ನು ಉಪಯೋಗಿಸುವ, ಮಾರಾಟ ಮಾಡುವ, ಸಾಗಿಸುವ, ತಲುಪಿಸುವ ಅಥವಾ ವಿಲೆ ಮಾಡುವ ದೃಷ್ಟಿಯಿಂದ ಮಾರ್ಪಾಟು ಮಾಡುವುದು, ಅಲಂಕರಿಸುವುದು, ಮೆರಗು ಕೊಡುವುದು, ಅಂತಿಮರೂಪ ಕೊಡುವುದು, ಎಣ್ಣೆ ಹಾಕುವುದು, ತೊಳೆಯುವುದು, ಸ್ವಚ್ಛಗೊಳಿಸುವುದು ಅಥವಾ ಅನ್ಯಥಾ ಸಂಸ್ಕರಿಸುವುದು ಅಥವಾ ಜೋಡಿಸುವುದು ಮೊದಲಾದ ಕೈಗಾರಿಕಾ ಸೇವೆಗಳು;

(xiv) ವೈದ್ಯಕೀಯ ಆರೋಗ್ಯ ಅಥವಾ ಇತರ ಸಂಬಂಧಪಟ್ಟ ಸೇವೆಗಳನ್ನು ಒದಗಿಸುವುದು;

(xv) ವಾರ್ತಾ, ತಂತ್ರಜ್ಞಾನ, ದೂರ ಸಂಪರ್ಕ ಅಥವಾ ಇಲೆಕ್ಟ್ರಾನಿಕ್ಸ್‌ಗೆ ಸಂಬಂಧಪಟ್ಟ ಸೇವೆಗಳನ್ನು ಒದಗಿಸುವುದು;

(xvi) ವಾಹನಗಳು, ನೌಕೆಗಳು ಮತ್ತು ವಿಮಾನಗಳನ್ನೊಳಗೊಂಡು ಕೈಗಾರಿಕಾ ಸ್ಥಾವರಗಳು, ಸಾಧನ ಸಾಮಗ್ರಿ, ಯಂತ್ರ ಸಾಮಗ್ರಿ ಅಥವಾ ಇತರ ಆಸ್ತಿಗಳನ್ನು ಗೇಣಿ, ಒಳಗೇಣಿ ಅಥವಾ ಬಾಡಿಗೆ ಅಥವಾ ಕಂತು ಖರೀದಿಯ ಮೇಲೆ ಕೊಡುವುದು;

(xvii) ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿರಿಸಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಇತರ ಚಟುವಟಿಕೆ;

(xviii) (xvii)ನೇ ಉಪಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಚಟುವಟಿಕೆಗಳನ್ನು ಒಳಗೊಂಡು, ಹಿಂದೆ ಹೇಳಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಯಾವುದೇ ಪರಿಕಲ್ಪನೆಯ ಅಭಿವೃದ್ಧಿ, ತಂತ್ರಜ್ಞಾನ, ವಿನ್ಯಾಸ, ಸಂಸ್ಕರಣ ಅಥವಾ ಉತ್ಪನ್ನ ಅಥವಾ ಯಾವುದೇ ಇತರ ವಿಷಯ;

**ವಿವರಣೆ:-** "ಸರಕುಗಳ ಸಂಸ್ಕರಣ" ಎಂಬ ಪದಾವಳಿಯು, ಯಾವುದೇ ಪದಾರ್ಥವನ್ನು ಶಾರೀರಿಕ, ಯಾಂತ್ರಿಕ, ರಾಸಾಯನಿಕ, ವಿದ್ಯುತ್ ಅಥವಾ ಯಾವುದೇ ಇತರ ಅಂಥದೇ ಕಾರ್ಯಾಚರಣೆಗೆ ಒಳಪಡಿಸುವ ಮೂಲಕ ವಸ್ತುವನ್ನು ಉತ್ಪಾದಿಸುವುದು, ತಯಾರಿಸುವುದು ಅಥವಾ ಮಾಡುವ ಯಾವುದೇ ಕಲೆ ಅಥವಾ ಸಂಸ್ಕರಣವನ್ನು ಒಳಗೊಳ್ಳುತ್ತದೆ;

(ಡಿ) "ಕೈಗಾರಿಕಾ ಹಣಕಾಸು ನಿಗಮ" ಎಂದರೆ, ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ರೂಪಿಸಿದ ಮತ್ತು ನೋಂದಾಯಿಸಿದ ಇಂಡಸ್ಟ್ರಿಯಲ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್;

(ಡಿಎ) "ರಾಷ್ಟ್ರೀಕೃತ ಬ್ಯಾಂಕ್" ಎಂದರೆ, ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಒಂದು ಸಂವಾದಿ ಹೊಸ ಬ್ಯಾಂಕು ಅಥವಾ ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40)ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸಂವಾದಿ ಹೊಸ ಬ್ಯಾಂಕು;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ರಿಸರ್ವ್ ಬ್ಯಾಂಕ್" ಎಂದರೆ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ ಮೇರೆಗೆ ರಚಿಸಿದ ಭಾರತ ರಿಸರ್ವ್ ಬ್ಯಾಂಕ್;

(ಜಿ) "ಅನುಸೂಚಿತ ಬ್ಯಾಂಕ್" ಎಂದರೆ ತತ್ಕಾಲದಲ್ಲಿ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ ಎರಡನೇ ಅನುಸೂಚಿಯಲ್ಲಿ ಸೇರಿಸಲಾದ ಬ್ಯಾಂಕ್;

(ಜಿಎ) "ಸ್ಟೇಟ್ ಬ್ಯಾಂಕ್" ಎಂದರೆ ಭಾರತ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955ರ ಮೇರೆಗೆ ರಚಿಸಿದ ಭಾರತ ಸ್ಟೇಟ್ ಬ್ಯಾಂಕ್;

(ಜಿಬಿ) "ಸಹಾಯಕ ಬ್ಯಾಂಕು" ಭಾರತ ಸ್ಟೇಟ್ ಬ್ಯಾಂಕು (ಸಹಾಯಕ ಬ್ಯಾಂಕುಗಳು) ಅಧಿನಿಯಮ, 1959 ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ;

(ಹೆಚ್) "ರಾಜ್ಯ ಸಹಕಾರಿ ಬ್ಯಾಂಕ್" ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಐ) "ರಾಜ್ಯ ಹಣಕಾಸು ನಿಗಮ" ಎಂದರೆ ರಾಜ್ಯ ಹಣಕಾಸು ನಿಗಮ ಅಧಿನಿಯಮ, 1951 (1951ರ 63)ರ 3ನೇ ಪ್ರಕರಣ ಅಥವಾ 3ಎ ಪ್ರಕರಣದ ಮೇರೆಗೆ ಸ್ಥಾಪಿಸಲಾದ

ಹಣಕಾಸು ನಿಗಮ ಮತ್ತು ಇದು ತಮಿಳುನಾಡು ಕೈಗಾರಿಕಾ ಹೂಡಿಕೆ ನಿಗಮ, ಪರಿಮಿತವನ್ನೂ ಒಳಗೊಳ್ಳುತ್ತದೆ;

(ಜೆ) "ಯೂನಿಟ್ ಟ್ರಸ್ಟ್" ಎಂದರೆ, ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ, 1963ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಯೂನಿಟ್ ಟ್ರಸ್ಟ್.

## ಅಧ್ಯಾಯ - II
## ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಅದರ ಬಂಡವಾಳ

**3. ಭಾರತ ಕೈಗಾರಿಕಾ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.-** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮಗಳ ಉದ್ದೇಶಗಳಿಗಾಗಿ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾಗುವ ಒಂದು ನಿಗಮವನ್ನು ಸ್ಥಾಪಿಸತಕ್ಕುದು.

(2) ಅಭಿವೃದ್ಧಿ ಬ್ಯಾಂಕು ಹಿಂದೆ ಹೇಳಿದ ಹೆಸರಿನಲ್ಲಿ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೇ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರದೊಂದಿಗೆ ಒಂದು ನಿಗಮಿತ ನಿಕಾಯವಾಗಿರತಕ್ಕುದು. ಮತ್ತು ಅದು ಆ ಹೆಸರಿನ ಮೂಲಕ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(3) ಅಭಿವೃದ್ಧಿ ಬ್ಯಾಂಕಿನ ಮುಖ್ಯ ಕಚೇರಿಯು ಮುಂಬಯಿಯಲ್ಲಿ ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿ ಇರತಕ್ಕುದು.

(4) ಅಭಿವೃದ್ಧಿ ಬ್ಯಾಂಕು ಭಾರತದ ಒಳಗೆ ಅಥವಾ ಹೊರಗೆ ಯಾವುದೇ ಸ್ಥಳದಲ್ಲಿ ಕಚೇರಿಗಳು, ಶಾಖೆಗಳು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

**4. ಅಧಿಕೃತ ಬಂಡವಾಳ.-** (1) ಅಭಿವೃದ್ಧಿ ಬ್ಯಾಂಕಿನ ಅಧಿಕೃತ ಬಂಡವಾಳವು ಪ್ರತಿಯೊಂದಕ್ಕೆ ಹತ್ತು ರೂಪಾಯಿಗಳಂತೆ ಪೂರ್ಣವಾಗಿ ಸಂದಾಯವಾದ ಈಕ್ವಿಟಿ ಷೇರುಗಳ ಒಂದು ನೂರಾ ಐವತ್ತು ಕೋಟಿ ರೂಪಾಯಿಗಳಾಗಿ ಮತ್ತು 4ಇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದಕ್ಕೆ ಹತ್ತು ರೂಪಾಯಿಗಳಂತೆ ಪೂರ್ಣವಾಗಿ ಸಂದಾಯವಾದ ಮೊದಲ ಹಕ್ಕಿನ ವಿಮೋಚನೀಯ ಷೇರುಗಳ ಐವತ್ತು ಕೋಟಿ ರೂಪಾಯಿಗಳಾಗಿ ವಿಂಗಡಿತವಾದ ಎರಡು ಸಾವಿರ ಕೋಟಿ ರೂಪಾಯಿಗಳಾಗಿರತಕ್ಕದ್ದು.

(2) ಅಭಿವೃದ್ಧಿ ಬ್ಯಾಂಕು, ಕಾಲಕಾಲಕ್ಕೆ ಸರ್ವ ಸದಸ್ಯರ ಸಭೆಯ ನಿರ್ಣಯದ ಮೂಲಕ, ತಾನು ಸೂಕ್ತವೆಂದು ಭಾವಿಸುವಷ್ಟು ಈಕ್ವಿಟಿ ಷೇರುಗಳನ್ನು ಮತ್ತು ಮೊದಲ ಹಕ್ಕಿನ ವಿಮೋಚನೀಯ ಷೇರುಗಳನ್ನು ಒಳಗೊಂಡಿರುವ ಐದು ಸಾವಿರ ಕೋಟಿ ರೂಪಾಯಿಗಳನ್ನು ಮೀರದ ಮೊತ್ತಕ್ಕೆ ಅಧಿಕೃತ ಬಂಡವಾಳವನ್ನು ಹೆಚ್ಚಿಸಬಹುದು.

**4ಎ.ಕೇಂದ್ರ ಸರ್ಕಾರಕ್ಕೆ ಬಂಡವಾಳದ ವರ್ಗಾವಣೆ.–** (1) ಸಾರ್ವಜನಿಕ ಹಣಕಾಸು ಸಂಸ್ಥೆಗಳ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975ರ 5ನೇ ಪ್ರಕರಣದ ಪ್ರಾರಂಭಕ್ಕೆ ನಿಕಟ ಪೂರ್ವದ ದಿನಾಂಕದಂದು (ಇಲ್ಲಿ ಇನ್ನು ಮುಂದೆ ಗೊತ್ತುಪಡಿಸಿದ ದಿವಸವೆಂದು ಉಲ್ಲೇಖಿಸಲಾಗಿದೆ) ರಿಸರ್ವ್ ಬ್ಯಾಂಕಿನ ಮೂಲಕ ಒದಗಿಸಲಾಗಿರುವಂಥ ಅಭಿವೃದ್ಧಿ ಬ್ಯಾಂಕಿನ ಹೊರಡಿಸಲಾದ ಬಂಡವಾಳವು ಹಾಗೆ ಪ್ರಾರಂಭವಾದ ಮೇಲೆ ಕೇಂದ್ರ ಸರ್ಕಾರಕ್ಕೆ ವರ್ಗಾಯಿತವಾಗತಕ್ಕುದು ಮತ್ತು ಅದರಲ್ಲಿ ನಿಹಿತವಾಗತಕ್ಕುದು.

(2) [ಬಿಟ್ಟು ಬಿಡಲಾಗಿದೆ]

**4ಬಿ.ಮೊಬಲಗಿನ ಸಂದಾಯ.–** ರಿಸರ್ವ್ ಬ್ಯಾಂಕಿನ ಮೂಲಕ ಒದಗಿಸಲಾಗಿರುವಂಥ ಅಭಿವೃದ್ಧಿ ಬ್ಯಾಂಕಿನ ಹೊರಡಿಸಿದ ಬಂಡವಾಳವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾವಣೆ ಮಾಡುವುದಕ್ಕಾಗಿ ಮತ್ತು ಅದರಲ್ಲಿ ನಿಹಿತಗೊಳಿಸುವುದಕ್ಕಾಗಿ, ಒದಗಿಸಲಾದ ಸದರಿ ಬಂಡವಾಳದ ಮುಖಬೆಲೆಗೆ ಸಮಾನವಾದ ಮೊಬಲಗನ್ನು ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕಿಗೆ ನಗದಾಗಿ ಕೊಡತಕ್ಕುದು.

**4ಸಿ. ಹೊರಡಿಸಲಾದ ಬಂಡವಾಳ.–** (1) ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 1995ರ ಪ್ರಾರಂಭದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರದಲ್ಲಿ ಪೂರ್ಣವಾಗಿ ನಿಹಿತವಾಗಿದ್ದ ಮತ್ತು ಕೇಂದ್ರ ಸರ್ಕಾರವು ವಂತಿಗೆ ನೀಡಿದ ಏಳುನೂರಾ ಐವತ್ತು ಮೂರು ಕೋಟಿ ರೂಪಾಯಿಗಳ ಅಭಿವೃದ್ಧಿ ಬ್ಯಾಂಕಿನ ಹೊರಡಿಸಲಾದ ಬಂಡವಾಳವು, ಅಂಥ ಪ್ರಾರಂಭದಂದು ಪ್ರತಿ ಹತ್ತು ರೂಪಾಯಿಗಳ ಎಪ್ಪತ್ತೈದು ಕೋಟಿ ಮೂವತ್ತು ಲಕ್ಷ ಈಕ್ವಿಟಿ ಷೇರುಗಳಾಗಿ ವಿಂಗಡಿತವಾಗಿರತಕ್ಕುದು.

(2) ಮಂಡಲಿಯು, ಕಾಲಕಾಲಕ್ಕೆ, ತಾನು ನಿರ್ಧರಿಸಬಹುದಾದಂಥ ವ್ಯಕ್ತಿಗಳಿಗೆ ಮತ್ತು ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಷೇರುಗಳನ್ನು ಹಂಚಿಕೆ ಮಾಡುವ ಮೂಲಕ ಅಭಿವೃದ್ಧಿ ಬ್ಯಾಂಕಿನ ಹೊರಡಿಸಲಾದ ಈಕ್ವಿಟಿ ಷೇರು ಬಂಡವಾಳವನ್ನು ಹೆಚ್ಚಿಸಬಹುದು:

ಪರಂತು, ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ, ಅಭಿವೃದ್ಧಿ ಬ್ಯಾಂಕಿನ ಹೊರಡಿಸಲಾದ ಈಕ್ವಿಟಿ ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತಲೂ ಕಡಿಮೆ ಬಂಡವಾಳವನ್ನು ಹೊಂದಿರುವಂಥ ರೀತಿಯಲ್ಲಿ, ಹೊರಡಿಸಲಾದ ಈಕ್ವಿಟಿ ಬಂಡವಾಳದಲ್ಲಿ ಯಾವ ಹೆಚ್ಚಳವನ್ನೂ ಮಾಡತಕ್ಕದ್ದಲ್ಲ.

**4ಡಿ.ಷೇರು ಬಂಡವಾಳದ ಇಳಿತಾಯ.–** (1) ಅಭಿವೃದ್ಧಿ ಬ್ಯಾಂಕು, ಷೇರುದಾರರ ಸರ್ವ ಸದಸ್ಯರ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ, ಯಾವುದೇ ರೀತಿಯಲ್ಲಿ ತನ್ನ ಷೇರು ಬಂಡವಾಳವನ್ನು ಕಡಿಮೆ ಮಾಡಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಷೇರು ಬಂಡವಾಳವನ್ನು,–

(ಎ)ಸಂದಾಯವಾಗಿಲ್ಲದ ಷೇರು ಬಂಡವಾಳಕ್ಕೆ ಸಂಬಂಧಿಸಿದಂತೆ, ತನ್ನ ಯಾವುದೇ ಈಕ್ವಿಟಿ ಷೇರುಗಳ ಮೇಲಿನ ಹೊಣೆಗಾರಿಕೆಯನ್ನು ಅಂತ್ಯಗೊಳಿಸುವ ಅಥವಾ ಕಡಿಮೆ ಮಾಡುವ ಮೂಲಕ;

(ಬಿ)ತನ್ನ ಯಾವುವೇ ಈಕ್ವಿಟಿ ಷೇರುಗಳ ಮೇಲಿನ ಹೊಣೆಗಾರಿಕೆಯನ್ನು ಅಂತ್ಯಗೊಳಿಸುವ ಅಥವಾ ಅಂತ್ಯಗೊಳಿಸದ ಮೂಲಕವಾಗಲಿ ಅಥವಾ ಕಡಿಮೆ ಮಾಡುವ ಅಥವಾ ಕಡಿಮೆ ಮಾಡದ ಮೂಲಕವಾಗಲಿ, ನಷ್ಟವಾದ ಅಥವಾ ಲಭ್ಯವಿರುವ ಆಸ್ತಿಗಳಿಂದ ಪ್ರತಿಬಿಂಬಿತವಾಗಿರದ ಯಾವುದೇ ಸಂದಾಯಿತ ಷೇರು ಬಂಡವಾಳವನ್ನು ರದ್ದುಗೊಳಿಸುವ ಮೂಲಕ; ಅಥವಾ

(ಸಿ) ತನ್ನ ಯಾವುದೇ ಈಕ್ವಿಟಿ ಷೇರುಗಳ ಮೇಲಿನ ಹೊಣೆಗಾರಿಕೆಯನ್ನು ಅಂತ್ಯಗೊಳಿಸುವ ಅಥವಾ ಅಂತ್ಯಗೊಳಿಸದ ಮೂಲಕವಾಗಲಿ ಅಥವಾ ಕಡಿಮೆಮಾಡುವ ಅಥವಾ ಕಡಿಮೆಮಾಡದ ಮೂಲಕವಾಗಲೀ, ಅಭಿವೃದ್ಧಿ ಬ್ಯಾಂಕಿನ ಅಗತ್ಯತೆಗಳನ್ನು ಮೀರಿದ ಯಾವುದೇ ಸಂದಾಯಿತ ಷೇರು ಬಂಡವಾಳವನ್ನು ಸಂದಾಯ ಮಾಡುವುದರ ಮೂಲಕ

– ಕಡಿಮೆ ಮಾಡಬಹುದು.

(3) (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಸರ್ವಸದಸ್ಯರ ಸಭೆಯಲ್ಲಿ, ಮತ ನೀಡುವುದಕ್ಕೆ ಹಕ್ಕು ಹೊಂದಿರುವ ಷೇರುದಾರರು, ಖುದ್ದಾಗಿ ಮತ ನೀಡುವ ಮೂಲಕ, ಅಥವಾ ಪ್ರಾಕ್ಸಿಗಳಿಗೆ ಅವಕಾಶವಿರುವಲ್ಲಿ, ಪ್ರಾಕ್ಸಿಯ ಮತದ ಮೂಲಕ, ಮತ್ತು ನಿರ್ಣಯದ ಪರವಾಗಿ ಹಾಕಲಾದ ಮತಗಳು, ಹಾಗೆ ಮತ ನೀಡಲು ಹಕ್ಕು ಹೊಂದಿದ್ದು ಮತ ನೀಡುವ ಷೇರುದಾರರು ನಿರ್ಣಯದ ವಿರುದ್ಧ ಹಾಕಿರುವ ಮತಗಳು, ಯಾವುದಾದರೂ ಇದ್ದರೆ ಆ ಮತಗಳ ಸಂಖ್ಯೆಯ ಮೂರು ಪಟ್ಟಿಗಿಂತ ಕಡಿಮೆಯಿಲ್ಲದಿದ್ದರೆ, ಷೇರು ಬಂಡವಾಳವನ್ನು ಕಡಿಮೆ ಮಾಡುವ ನಿರ್ಣಯವನ್ನು ಅಂಗೀಕರಿಸತಕ್ಕದ್ದು.

**4ಇ. ಈಕ್ವಿಟಿ ಷೇರುಗಳನ್ನು ವಿಮೋಚನೀಯ ಪ್ರಾಶಸ್ತ್ಯ ಷೇರುಗಳನ್ನಾಗಿ ಪರಿವರ್ತಿಸುವುದು.**– (1) ಕೇಂದ್ರ ಸರ್ಕಾರವು, ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 1995ರ ಪ್ರಾರಂಭದ ತರುವಾಯ ಯಾವುದೇ ಸಮಯದಲ್ಲಿ ಮತ್ತು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ತಾನು ಹೊಂದಿರುವ ಈಕ್ವಿಟಿ ಷೇರುಗಳಲ್ಲಿ ಐವತ್ತು ಕೋಟಿಗಳನ್ನು ಮೀರದಂತೆ, ತಾನು ನಿರ್ಧರಿಸಬಹುದಾದಷ್ಟು ಈಕ್ವಿಟಿ ಷೇರುಗಳನ್ನು ವಿಮೋಚನೀಯ ಪ್ರಾಶಸ್ತ್ಯ ಷೇರುಗಳಾಗಿ ಪರಿವರ್ತಿಸಬಹುದು.

(2) (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಮೋಚನೀಯ ಪ್ರಾಶಸ್ತ್ಯ ಷೇರುಗಳು,–

(ಎ) ಅಂಥ ಪರಿವರ್ತನೆಯ ಸಮಯದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ಲಾಭಾಂಶದ ನಿಗದಿತ ದರವನ್ನು ಹೊಂದಿರತಕ್ಕದ್ದು; ಮತ್ತು

(ಬಿ) ವರ್ಗಾವಣೀಯವಾಗಿರತಕ್ಕದ್ದಲ್ಲ ಅಥವಾ ಮತ ನೀಡುವ ಯಾವುವೇ ಹಕ್ಕುಗಳನ್ನು ಹೊಂದಿರತಕ್ಕದ್ದಲ್ಲ.

(3) (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಮೋಚನೀಯ ಪ್ರಾಶಸ್ತ್ಯ ಷೇರುಗಳು ಮಂಡಲಿಯು ನಿರ್ಧರಿಸಬಹುದಾದಷ್ಟು ಕಂತುಗಳಲ್ಲಿ ಮತ್ತು ಅಂಥ ರೀತಿಯಲ್ಲಿ, ಅಂಥ ಪರಿವರ್ತನೆಯ ದಿನಾಂಕದಿಂದ ಮೂರು ವರ್ಷಗಳೊಳಗಾಗಿ ಅಭಿವೃದ್ಧಿ ಬ್ಯಾಂಕಿನಿಂದ ವಿಮೋಚನೀಯವಾಗತಕ್ಕದ್ದು.

## ಅಧ್ಯಾಯ – III
## ಅಭಿವೃದ್ಧಿ ಬ್ಯಾಂಕಿನ ವ್ಯವಸ್ಥಾಪನೆ

**5. ವ್ಯವಸ್ಥಾಪನೆ.**– (1) ಅಭಿವೃದ್ಧಿ ಬ್ಯಾಂಕಿನ ಕಾರ್ಯ-ಕಲಾಪಗಳು ಮತ್ತು ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ನಿರ್ದೇಶಕರ ಮಂಡಲಿಯಲ್ಲಿ ನಿಹಿತವಾಗಿರತಕ್ಕುದು ಮತ್ತು ಅದು ಅಭಿವೃದ್ಧಿ ಬ್ಯಾಂಕು ಚಲಾಯಿಸಬಹುದಾದ ಅಥವಾ ಮಾಡಬಹುದಾದ, ಮತ್ತು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ನಿರ್ದೇಶಿಸಿಲ್ಲದ ಅಥವಾ ಸರ್ವಸದಸ್ಯರ ಸಭೆಯಲ್ಲಿ ಅಭಿವೃದ್ಧಿ ಬ್ಯಾಂಕು ಮಾಡಬೇಕೆಂದು ಅಗತ್ಯಪಡಿಸಿದ ಎಲ್ಲ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡಬಹುದು ಮತ್ತು ಅಧಿಕಾರಗಳನ್ನು ಚಲಾಯಿಸಬಹುದು.

(2) ಮಂಡಲಿಯು ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ತಾನು ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ತಾನು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ಅಧ್ಯಕ್ಷನು, ವ್ಯವಸ್ಥಾಪಕ ನಿರ್ದೇಶಕನು ಅಥವಾ ಪೂರ್ಣಕಾಲಿಕ ನಿರ್ದೇಶಕನು ಸಹ ಚಲಾಯಿಸಬಹುದಾಗಿರತಕ್ಕುದೆಂದು ನಿರ್ದೇಶಿಸಬಹುದು.

(3) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮಂಡಲಿಯು ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಸಾರ್ವಜನಿಕ ಹಿತಕ್ಕೆ ತಕ್ಕ ಗಮನವನ್ನು ಕೊಟ್ಟು ವ್ಯವಹಾರ ತತ್ವಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸತಕ್ಕುದು.

**6. ಮಂಡಲಿಯ ರಚನೆ.–** (1) ಮಂಡಲಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕುದು, ಎಂದರೆ:–

(ಎ) ಕೇಂದ್ರ ಸರ್ಕಾರವು ನೇಮಕ ಮಾಡಿದ ಒಬ್ಬ ಅಧ್ಯಕ್ಷ ಮತ್ತು ಒಬ್ಬ ವ್ಯವಸ್ಥಾಪಕ ನಿರ್ದೇಶಕ:

ಪರಂತು, ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನಾಗಿ ಕಾರ್ಯನಿರ್ವಹಿಸಲು ಒಬ್ಬನೇ ವ್ಯಕ್ತಿಯನ್ನು ನೇಮಿಸಬಹುದು;

(ಬಿ) ಮಂಡಲಿಯ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ನೇಮಿಸಿದ ಒಬ್ಬ ಪೂರ್ಣಕಾಲಿಕ ನಿರ್ದೇಶಕ;

(ಸಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿದ ಕೇಂದ್ರ ಸರ್ಕಾರದ ಅಧಿಕಾರಿಗಳಾಗಿರತಕ್ಕ ಇಬ್ಬರು ನಿರ್ದೇಶಕರು;

(ಡಿ) ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಕೈಗಾರಿಕೆ, ಬ್ಯಾಂಕಿಂಗ್, ಕೈಗಾರಿಕಾ ಸಹಕಾರ ಸಂಘಗಳು, ಕಾನೂನು, ಕೈಗಾರಿಕಾ ಹಣಕಾಸು, ಬಂಡವಾಳ ಹೂಡಿಕೆ, ಲೆಕ್ಕಶಾಸ್ತ್ರ, ಮಾರುಕಟ್ಟೆ ವ್ಯವಹಾರ–ಇವುಗಳಲ್ಲಿ ವಿಶೇಷ ಜ್ಞಾನ ಅಥವಾ ವೃತ್ತಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಬ್ಯಾಂಕಿಗೆ ಉಪಯುಕ್ತವಾಗುವ ಯಾವುದೇ ಇತರ ವಿಷಯದಲ್ಲಿ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ಕೇಂದ್ರ ಸರ್ಕಾರವು ನಾಮನಿರ್ದೇಶಿಸಿದ ಮೂವರು ನಿರ್ದೇಶಕರು; ಮತ್ತು

(ಇ) ಯಾವ ಸಭೆಯಲ್ಲಿ ಯಾವ ದಿನಾಂಕದಂದು ಈ ಕೆಳಕಂಡ ಆಧಾರದ ಮೇಲೆ ಚುನಾವಣೆ ನಡೆಯುವುದೋ ಆ ದಿನಾಂಕಕ್ಕೆ ತೊಂಬತ್ತು ದಿನಗಳಿಗೆ ಮುಂಚೆ ಅಭಿವೃದ್ಧಿ ಬ್ಯಾಂಕಿನ ಷೇರುದಾರರ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಷೇರುದಾರರು, ಕೇಂದ್ರ ಸರ್ಕಾರದ ಹೊರತು, ಕೆಳಕಂಡ ನಿಯಮಿಸಲಾದ ರೀತಿಯಲ್ಲಿ ಚುನಾಯಿಸಿದಷ್ಟು ಸಂಖ್ಯೆಯ ನಿರ್ದೇಶಕರು, ಎಂದರೆ:–

(i) ಅಂಥ ಷೇರುದಾರರಿಗೆ ನೀಡಲಾದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಹತ್ತು ಅಥವಾ ಅದಕ್ಕಿಂತ ಕಡಿಮೆ ಇರುವಲ್ಲಿ, ಇಬ್ಬರು ನಿರ್ದೇಶಕರು;

(ii) ಅಂಥ ಷೇರುದಾರರಿಗೆ ನೀಡಲಾದ ಈಕ್ವಿಟಿ ಷೇರು ಬಂಡವಾಳದ ಒಟ್ಟು ಮೊತ್ತವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಹತ್ತಕ್ಕಿಂತ ಹೆಚ್ಚು, ಆದರೆ ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆ ಇರುವಲ್ಲಿ, ಮೂವರು ನಿರ್ದೇಶಕರು; ಮತ್ತು

(iii) ಅಂಥ ಷೇರುದಾರರಿಗೆ ನೀಡಲಾದ ಒಟ್ಟು ಈಕ್ವಿಟಿ ಷೇರು ಬಂಡವಾಳವು ಹೊರಡಿಸಲಾದ ಒಟ್ಟು ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತೈದು ಅಥವಾ ಅದಕ್ಕಿಂತ ಹೆಚ್ಚು ಇರುವಲ್ಲಿ, ನಾಲ್ವರು ನಿರ್ದೇಶಕರು:

ಪರಂತು, ಈ ಖಂಡದ ಮೇರೆಗೆ ಚುನಾಯಿತರಾದ ನಿರ್ದೇಶಕರು ಅಧಿಕಾರ ವಹಿಸಿಕೊಳ್ಳುವವರೆಗೆ, ಕೇಂದ್ರ ಸರ್ಕಾರವು, ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಕೈಗಾರಿಕೆ, ಬ್ಯಾಂಕಿಂಗ್, ಕೈಗಾರಿಕಾ ಸಹಕಾರ ಸಂಘಗಳು, ಕಾನೂನು, ಕೈಗಾರಿಕಾ ಹಣಕಾಸು, ಬಂಡವಾಳ ಹೂಡಿಕೆ, ಲೆಕ್ಕಶಾಸ್ತ್ರ, ಮಾರುಕಟ್ಟೆ ವ್ಯವಹಾರ ಇವುಗಳಲ್ಲಿ ವಿಶೇಷ ಜ್ಞಾನ ಅಥವಾ ವೃತ್ತಿ ಅನುಭವ ಹೊಂದಿರುವ, ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಬ್ಯಾಂಕು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಉಪಯುಕ್ತವಾಗುವ ಯಾವುದೇ ಇತರ ವಿಷಯದಲ್ಲಿ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ನಾಲ್ವರನ್ನು ಮೀರದಂತೆ ನಿರ್ದೇಶಕರುಗಳನ್ನು ಯಾವುದೇ ಕಾಲದಲ್ಲಿ ನಾಮನಿರ್ದೇಶನ ಮಾಡಬಹುದು.

(2) ಅಧ್ಯಕ್ಷ , ವ್ಯವಸ್ಥಾಪಕ ನಿರ್ದೇಶಕ, ಮತ್ತು ಪೂರ್ಣಕಾಲಿಕ ನಿರ್ದೇಶಕ–ಇವರು ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕುದು ಮತ್ತು ಹಾಗೆ ನೇಮಕಗೊಂಡ ಯಾವನೇ ವ್ಯಕ್ತಿಯು ಮರುನೇಮಕಾತಿಗಾಗಿ ಅರ್ಹನಾಗಿರತಕ್ಕುದು.

(2ಎ) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವು ಸಂದರ್ಭಾನುಸಾರ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣ ಕಾಲಿಕ ನಿರ್ದೇಶಕನ ಪದಾವಧಿಯನ್ನು, ಬರಹದಲ್ಲಿನ ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಅಥವಾ ಅಂಥ ನೋಟೀಸಿಗೆ ಬದಲಾಗಿ ಮೂರು ತಿಂಗಳುಗಳ ಸಂಬಳ ಮತ್ತು ಭತ್ಯಗಳನ್ನು ಕೊಡುವ ಮೂಲಕ (2)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮುಂಚೆ ಯಾವುದೇ ಕಾಲದಲ್ಲಿ ಕೊನೆಗೊಳಿಸಲು ಹಕ್ಕನ್ನು ಹೊಂದಿರತಕ್ಕುದು, ಸಂದರ್ಭಾನುಸಾರ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಕಾಲಿಕ ನಿರ್ದೇಶಕನು ಬರಹದಲ್ಲಿನ ಮೂರು ತಿಂಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ಮೂಲಕ (2)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮುಂಚೆ ಯಾವುದೇ ಕಾಲದಲ್ಲಿ ಅವನ ಪದವನ್ನು ತ್ಯಜಿಸಲು ಸಹ ಹಕ್ಕನ್ನು ಹೊಂದಿರತಕ್ಕುದು.

(3) ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ಪೂರ್ಣಕಾಲಿಕ ನಿರ್ದೇಶಕನು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ಸಂಬಳ ಮತ್ತು ಭತ್ಯಗಳನ್ನು ಸ್ವೀಕರಿಸತಕ್ಕುದು.

(3ಎ) ಕೇಂದ್ರ ಸರ್ಕಾರವು, ಸಂದರ್ಭಾನುಸಾರ, ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಕಾಲಿಕ ನಿರ್ದೇಶಕನನ್ನು ಪದದಿಂದ ಯಾವುದೇ ಕಾಲದಲ್ಲಿ ತೆಗೆದು ಹಾಕಬಹುದು: ಪರಂತು, ಈ ಉಪಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯನ್ನು ಅವನ ಪದದಿಂದ ತೆಗೆದುಹಾಕುವುದರ ವಿರುದ್ಧ ಕಾರಣವನ್ನು ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟಿದ್ದ ಹೊರತು ತೆಗೆದುಹಾಕತಕ್ಕುದಲ್ಲ.

(4) ನಾಮನಿರ್ದೇಶಿತನಾದ ನಿರ್ದೇಶಕನು, ಅವನನ್ನು ನಾಮನಿರ್ದೇಶನ ಮಾಡಿದ ಪ್ರಾಧಿಕಾರದ ಇಷ್ಟಪರ್ಯಂತ ಪದವನ್ನು ಧಾರಣ ಮಾಡತಕ್ಕುದು.

(4ಎ) (4)ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು,–

(ಎ) (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಪ್ರತಿಯೊಬ್ಬ ನಿರ್ದೇಶಕನು, ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ ಮೂರು

ವರ್ಷಗಳನ್ನು ಮೀರದ ಅವಧಿಗೆ ಮತ್ತು ಆ ತರುವಾಯ ಅವನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು:

ಪರಂತು, ಅಂಥ ಯಾರೇ ನಿರ್ದೇಶಕನು ಆರು ವರ್ಷಗಳನ್ನು ಮೀರಿದ ಅವಧಿಗೆ ನಿರಂತರವಾಗಿ ಪದಧಾರಣ ಮಾಡತಕ್ಕುದಲ್ಲ; ಮತ್ತು

(ಬಿ) (1)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ಚುನಾಯಿತನಾದ ಪ್ರತಿಯೊಬ್ಬ ನಿರ್ದೇಶಕನು ಮೂರು ವರ್ಷಗಳಿಗೆ ಮತ್ತು ಆ ತರುವಾಯ ಅವನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡತಕ್ಕದ್ದು, ಮತ್ತು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು:

ಪರಂತು, ಅಂಥ ಯಾರೇ ನಿರ್ದೇಶಕನು ಆರು ವರ್ಷಗಳನ್ನು ಮೀರಿದ ಅವಧಿಗೆ ನಿರಂತರವಾಗಿ ಪದವನ್ನು ಧಾರಣಮಾಡತಕ್ಕದಲ್ಲ.

(4ಬಿ) ಕೇಂದ್ರ ಸರ್ಕಾರದ ಹೊರತಾಗಿ, ಒಟ್ಟು ಷೇರು ಬಂಡವಾಳದ ಪೈಕಿ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು ಷೇರುಗಳನ್ನು ಹೊಂದಿರುವ ಷೇರುದಾರರು, ನಿಯಮಿಸಬಹುದಾದಂಥ ರೀತಿಯಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ನಿರ್ದೇಶಕನಿಗೆ ಒಂದು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಬಹುಮತದಿಂದ ನಿರ್ಣಯ ಕೈಗೊಂಡು (1)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ಚುನಾಯಿತನಾದ ಯಾರೇ ನಿರ್ದೇಶಕನನ್ನು ತೆಗೆದುಹಾಕಬಹುದು ಮತ್ತು ಹಾಗೆ ತೆರವಾದ ಸ್ಥಾನವನ್ನು ತುಂಬುವುದಕ್ಕಾಗಿ ಅವನ ಸ್ಥಳದಲ್ಲಿ ಬೇರೊಬ್ಬ ನಿರ್ದೇಶಕನನ್ನು ಚುನಾಯಿಸಬಹುದು.

(5) (i) ಮಂಡಲಿಯ ಸಭೆಯು ಪ್ರತಿ ಮೂರು ತಿಂಗಳಿಗೆ ಕೊನೆಪಕ್ಷ ಒಮ್ಮೆಯಾದರೂ ನಡೆಯತಕ್ಕದ್ದು ಮತ್ತು ಪ್ರತಿ ವರ್ಷ ಕೊನೇ ಪಕ್ಷ ನಾಲ್ಕು ಸಭೆಗಳು ನಡೆಯತಕ್ಕದ್ದು ಮತ್ತು ಸಭೆಗಳನ್ನು ನಿಯಮಿಸಬಹುದಾದಂಥ ಸ್ಥಳಗಳಲ್ಲಿ ನಡೆಸಬಹುದು.

(ii) ಮಂಡಲಿಯ ಪ್ರತಿಯೊಂದು ಸಭೆಯ ನೋಟೀಸನ್ನು ತತ್ಕಾಲದಲ್ಲಿ ಭಾರತದಲ್ಲಿರುವ ಪ್ರತಿಯೊಬ್ಬ ನಿರ್ದೇಶಕನಿಗೆ ಮತ್ತು ಪ್ರತಿಯೊಬ್ಬ ಇತರ ನಿರ್ದೇಶಕನಿಗೆ ಭಾರತದಲ್ಲಿನ ಅವನ ಸಾಮಾನ್ಯ ವಿಳಾಸಕ್ಕೆ ಲಿಖಿತದಲ್ಲಿ ಕಳುಹಿಸತಕ್ಕದ್ದು.

(5ಎ) ಈ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಮಂಡಲಿಯು ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರಬಹುದು ಮತ್ತು ನಿರ್ಣಯಗಳನ್ನು ಅಂಗೀಕರಿಸುವ ರೀತಿಯೂ ಸೇರಿದಂತೆ ಅದರ ಕಾರ್ಯ-ಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(6) ಅಧ್ಯಕ್ಷನು ಯಾವುದೇ ಕಾರಣದಿಂದ ಅವನು ಮಂಡಳಿಯ ಸಭೆಗೆ ಹಾಜರಾಗಲು ಅಸಮರ್ಥನಾದರೆ, ವ್ಯವಸ್ಥಾಪಕ ನಿರ್ದೇಶಕನು ಅಥವಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇವರಿಬ್ಬರೂ ಸಭೆಗೆ ಹಾಜರಾಗಲು ಅಸಮರ್ಥರಾಗಿರುವ ಸಂದರ್ಭದಲ್ಲಿ ಈ ಬಗ್ಗೆ ಅಧ್ಯಕ್ಷನು ನಾಮನಿರ್ದೇಶನ ಮಾಡಿದ ಯಾವನೇ ಇತರ ನಿರ್ದೇಶಕನು ಮತ್ತು ಅಂಥ ನಾಮನಿರ್ದೇಶನವಿಲ್ಲದಿರುವಲ್ಲಿ ಹಾಜರಿರುವ ನಿರ್ದೇಶಕರು ತಮ್ಮ ಪೈಕಿ ಚುನಾಯಿಸಿದ ಯಾವನೇ ನಿರ್ದೇಶಕನು ಆ ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕುದು.

(7) ಮಂಡಳಿಯ ಯಾವುದೇ ಸಭೆಯ ಮುಂದೆ ಬರುವಂಥ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ನೀಡುವ ನಿರ್ದೇಶಕರ ಬಹುಮತದ ಮೂಲಕ ತೀರ್ಮಾನಿಸತಕ್ಕುದು ಮತ್ತು ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕನು ಅಥವಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇವರಿಬ್ಬರ ಗೈರು

ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕುದು.

(8) (7)ನೇ ಉಪಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು, ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಒಂದು ಮತವನ್ನು ಹೊಂದಿರತಕ್ಕುದು.

6ಎ. [ ಬಿಟ್ಟು ಬಿಡಲಾಗಿದೆ ]

**6ಬಿ. ನಿರ್ದೇಶಕರಾಗಿರಲು ಅನರ್ಹತೆಗಳು.–** ಒಬ್ಬ ವ್ಯಕ್ತಿಯು, ಈ ಕೆಳಕಂಡ ಸಂದರ್ಭಗಳಲ್ಲಿ 6ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ನಿರ್ದೇಶಕನಾಗಿ ಆಯ್ಕೆಯಾಗಲು ಅರ್ಹನಾಗಿರತಕ್ಕುದಲ್ಲ, ಎಂದರೆ:-

(ಎ) ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವು ಅವನು ಅಸ್ವಸ್ಥ ಚಿತ್ತನೆಂದು ನಿರ್ಣಯಿಸಿದರೆ ಮತ್ತು ಆ ನಿರ್ಣಯವು ಜಾರಿಯಲ್ಲಿದ್ದರೆ;

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಸಿ) ತಾನು ದಿವಾಳಿಯೆಂದು ನ್ಯಾಯನಿರ್ಣಯ ನೀಡುವಂತೆ ಅರ್ಜಿ ಸಲ್ಲಿಸಿದ್ದರೆ ಮತ್ತು ಅವನ ಅರ್ಜಿಯು ಇತ್ಯರ್ಥದಲ್ಲಿದ್ದರೆ;

(ಡಿ) ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನ್ಯಾಯಾಲಯದಿಂದ ನಿರ್ಣೀತನಾಗಿದ್ದರೆ ಮತ್ತು ಆ ಸಂಬಂಧದಲ್ಲಿ ಆರು ತಿಂಗಳಿಗಿಂತ ಕಡಿಮೆಯಿಲ್ಲದ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದರೆ ಮತ್ತು ಆ ಶಿಕ್ಷೆಯ ಮುಕ್ತಾಯದ ದಿನಾಂಕದಿಂದ ಐದು ವರ್ಷಗಳ ಅವಧಿ ಮುಗಿದಿರದಿದ್ದರೆ; ಅಥವಾ

(ಇ) ಒಬ್ಬನೇ ಆಗಲಿ ಅಥವಾ ಬೇರೆಯವರೊಂದಿಗೆ ಜಂಟಿಯಾಗಿಯೇ ಆಗಲಿ ಅವನು ಹೊಂದಿರುವ ಅಭಿವೃದ್ಧಿ ಬ್ಯಾಂಕಿನ ಷೇರುಗಳ ಸಂಬಂಧದಲ್ಲಿ ಯಾವುದೇ ಕಂತು ಹಣವನ್ನು ಸಂದಾಯ ಮಾಡಿಲ್ಲದಿದ್ದರೆ ಮತ್ತು ಆ ಕಂತು ಹಣದ ಸಂದಾಯಕ್ಕಾಗಿ ನಿಗದಿಪಡಿಸಿದ ಕೊನೆಯ ದಿನದಿಂದ ಆರು ತಿಂಗಳು ಮುಕ್ತಾಯವಾಗಿದ್ದರೆ.

**6ಸಿ. ನಿರ್ದೇಶಕನ ಪದವು ತೆರವಾಗುವುದು.–** (1) ನಿರ್ದೇಶಕನು,-

(ಎ) 6ಬಿ ಪ್ರಕರಣದಲ್ಲಿ ನಮೂದಿಸಿದ ಅನರ್ಹತೆಗಳ ಪೈಕಿ ಯಾವುದೇ ಅನರ್ಹತೆಗೊಳಪಟ್ಟಿದ್ದರೆ; ಅಥವಾ

(ಬಿ) ತನ್ನ ಹಸ್ತಾಕ್ಷರದಲ್ಲಿ ಲಿಖಿತ ನೋಟೀಸು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಕೊಟ್ಟಿದ್ದರೆ ಮತ್ತು ಆ ರಾಜೀನಾಮೆ ಅಂಗೀಕೃತವಾಗಿದ್ದರೆ; ಅಥವಾ

(ಸಿ) ಮಂಡಲಿಯಿಂದ ಗೈರುಹಾಜರಿ ಅನುಮತಿ ಪಡೆಯದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾಗಿದ್ದರೆ

– ಅವನ ಪದವು ತೆರವಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ (ಎ) ಖಂಡದಲ್ಲಿ ಏನೇ ಇದ್ದರೂ, ಆ ಖಂಡದಲ್ಲಿ ಉಲ್ಲೇಖಿಸಿದ ಅನರ್ಹತೆಗಳು,-

(ಎ) ನ್ಯಾಯನಿರ್ಣಯದ, ಶಿಕ್ಷೆಯ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳವರೆಗೆ;

(ಬಿ) ಆ ನ್ಯಾಯನಿರ್ಣಯದ, ಶಿಕ್ಷೆಯ ಅಥವಾ ಅಪರಾಧ ನಿರ್ಣಯದಿಂದ ಉಂಟಾಗುವ ಶಿಕ್ಷೆಯ ಅಥವಾ ಆದೇಶದ ವಿರುದ್ಧ ಮೇಲೆ ಹೇಳಿದ ಮೂವತ್ತು ದಿನಗಳೊಳಗೆ ಯಾವುದೇ ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸಿದ್ದರೆ ಅಂಥ ಅಪೀಲು ಅಥವಾ ಅರ್ಜಿಯನ್ನು ವಿಲೆ ಮಾಡಿದ ದಿನಾಂಕದಿಂದ ಏಳು ದಿನಗಳು ಮುಕ್ತಾಯವಾಗುವವರೆಗೆ; ಅಥವಾ

(ಸಿ) ಮೇಲೆ ಹೇಳಿದ ಏಳು ದಿನಗಳೊಳಗೆ, ಆ ನ್ಯಾಯನಿರ್ಣಯಕ್ಕೆ, ಶಿಕ್ಷೆಗೆ, ಅಪರಾಧ ನಿರ್ಣಯಕ್ಕೆ ಅಥವಾ ಆದೇಶಕ್ಕೆ ಸಂಬಂಧಪಟ್ಟಂತೆ ಯಾವುದೇ ಹೆಚ್ಚಿನ ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಆ ಅಪೀಲು ಅಥವಾ ಅರ್ಜಿಯು ಅಂಗೀಕೃತವಾದರೆ, ಅನರ್ಹತೆಯನ್ನು ತೆಗೆದುಹಾಕುವುದರಲ್ಲಿ ಪರ್ಯಾವಸಾನಗೊಳ್ಳಬಹುದಾದರೆ, ಅಂಥ ಹೆಚ್ಚಿನ ಅಪೀಲು ಅಥವಾ ಅರ್ಜಿಯನ್ನು ವಿಲೆ ಮಾಡುವವರೆಗೆ

– ಪರಿಣಾಮಕಾರಿಯಾಗತಕ್ಕದ್ದಲ್ಲ.

**7. ಕಾರ್ಯ ನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು.–** (1) ಮಂಡಲಿಯು, ಅಧ್ಯಕ್ಷನನ್ನು, ವ್ಯವಸ್ಥಾಪಕ ನಿರ್ದೇಶಕನನ್ನು, ಪೂರ್ಣಕಾಲಿಕ ನಿರ್ದೇಶಕನನ್ನು ಮತ್ತು ತಾನು ಯುಕ್ತವೆಂದು ಭಾವಿಸುವಂಥ ಇತರ ನಿರ್ದೇಶಕರನ್ನು ಒಳಗೊಂಡಿರುವ ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕುದು.

(2) ಕಾರ್ಯ ನಿರ್ವಾಹಕ ಸಮಿತಿಯು, ಮಂಡಲಿಯು ನಿಯಮಿಸಬಹುದಾದಂಥ ಅಥವಾ ಅದಕ್ಕೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(3) ಮಂಡಳಿಯು ಅದು ಯೋಗ್ಯವೆಂದು ಯೋಚಿಸಬಹುದಾದಂಥ ಉದ್ದೇಶಕ್ಕಾಗಿ ಅಥವಾ ಉದ್ದೇಶಗಳಿಗಾಗಿ ಸಂಪೂರ್ಣವಾಗಿ ನಿರ್ದೇಶಕರನ್ನು ಅಥವಾ ಸಂಪೂರ್ಣವಾಗಿ ಇತರ ವ್ಯಕ್ತಿಗಳನ್ನು ಅಥವಾ ಭಾಗಶಃ ನಿರ್ದೇಶಕರನ್ನು ಮತ್ತು ಭಾಗಶಃ ಇತರ ವ್ಯಕ್ತಿಗಳನ್ನು ಒಳಗೊಂಡಿರುವಂಥ ಇತರ ಸಮಿತಿಗಳನ್ನು ರಚಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಲಾದ ಕಾರ್ಯ ನಿರ್ವಾಹಕ ಸಮಿತಿ ಅಥವಾ ಯಾವುದೇ ಇತರ ಸಮಿತಿಯು ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕುದು ಮತ್ತು ಅದರ ಸಭೆಗಳಲ್ಲಿ ವ್ಯವಹಾರಗಳನ್ನು ನಡೆಸುವುದರ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕುದು.

**8. ನಿರ್ದೇಶಕರು ಮತ್ತು ಸಮಿತಿಗಳ ಸದಸ್ಯರ ಫೀಜುಗಳು ಮತ್ತು ಭತ್ಯಗಳು.–** ನಿರ್ದೇಶಕರು ಮತ್ತು ಸಮಿತಿಯ ಸದಸ್ಯರಿಗೆ ಮಂಡಲಿಯ ಅಥವಾ ಈ ಅಧಿನಿಯಮದ ಅನುಸರಣೆಯಲ್ಲಿ ರಚಿಸಲಾದ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕೆ ಮತ್ತು ಅಭಿವೃದ್ಧಿ ಬ್ಯಾಂಕಿನ ಯಾವುದೇ ಇತರ ಕೆಲಸಕ್ಕೆ ಹಾಜರಾಗುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯವನ್ನು ಸಂದಾಯ ಮಾಡತಕ್ಕುದು:

ಪರಂತು, ಅಧ್ಯಕ್ಷನನ್ನು ಪೂರ್ಣಕಾಲಿಕವಾಗಿ ನೇಮಕ ಮಾಡಿದ್ದರೆ ಅವನಿಗೆ, ಅಥವಾ ವ್ಯವಸ್ಥಾಪಕ ನಿರ್ದೇಶಕನು ಅಥವಾ ಪೂರ್ಣಕಾಲಿಕ ನಿರ್ದೇಶಕನು ಅಥವಾ ಯಾರೇ ಇತರ ನಿರ್ದೇಶಕನು ಸರ್ಕಾರಿ ಅಧಿಕಾರಿಯಾಗಿದ್ದರೆ ಅವನಿಗೆ ಯಾವುದೇ ಫೀಜನ್ನು ಸಂದಾಯ ಮಾಡತಕ್ಕದ್ದಲ್ಲ.

## ಅಧ್ಯಾಯ – IV
## ಅಭಿವೃದ್ಧಿ ಬ್ಯಾಂಕಿನ ವ್ಯವಹಾರ

**9. ಅಭಿವೃದ್ಧಿ ಬ್ಯಾಂಕಿನ ವ್ಯವಹಾರಗಳು.–** (1) ಕೈಗಾರಿಕೆಗೆ ಹಣಕಾಸು ಒದಗಿಸುವುದರಲ್ಲಿ, ಅದನ್ನು ಸಂವರ್ಧನೆಗೊಳಿಸುವುದರಲ್ಲಿ ಅಥವಾ ಅಭಿವೃದ್ಧಿಗೊಳಿಸುವುದರಲ್ಲಿ ತೊಡಗಿರುವ ಸಂಸ್ಥೆಗಳು ಕೆಲಸ ಮಾಡುವುದನ್ನು ಸಮನ್ವಯಗೊಳಿಸುವುದಕ್ಕಾಗಿ ಮತ್ತು ಅದು ಯುಕ್ತವೆಂದು

ಭಾವಿಸಬಹುದಾದಂಥ ರೀತಿಯಲ್ಲಿ ಅಂಥ ಸಂಸ್ಥೆಗಳ ಅಭಿವೃದ್ಧಿಗೆ ಸಹಾಯ ಮಾಡುವುದಕ್ಕಾಗಿ ಅಭಿವೃದ್ಧಿ ಬ್ಯಾಂಕು ಪ್ರಧಾನ ಹಣಕಾಸಿನ ಸಂಸ್ಥೆಯಾಗಿ ಕಾರ್ಯನಿರ್ವಹಿಸತಕ್ಕುದು ಮತ್ತು ಅದು ಈ ಕೆಳಕಂಡ ಬಗೆಯ ಯಾವುದೇ ವ್ಯವಹಾರವನ್ನು ನಡೆಸಬಹುದು ಮತ್ತು ವ್ಯವಹರಿಸಬಹುದು, ಎಂದರೆ: -

(ಎ)(i) ಕೈಗಾರಿಕಾ ಹಣಕಾಸು ನಿಗಮ, ಯಾವುದೇ ಹಣಕಾಸು ನಿಗಮ ಅಥವಾ ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಯಾವುದೇ ಇತರ ಹಣಕಾಸು ಸಂಸ್ಥೆಗೆ ಇಪ್ಪತ್ತೈದು ವರ್ಷಗಳನ್ನು ಮೀರದ ಅವಧಿಯೊಳಗೆ ಮರು ಸಂದಾಯ ಮಾಡಬೇಕಾದಂತೆ, ಅಂಥ ನಿಗಮ ಅಥವಾ ಸಂಸ್ಥೆಯು ಕೈಗಾರಿಕಾ ಉದ್ಯಮಗಳಿಗೆ ಕೊಟ್ಟ ಯಾವುವೇ ಸಾಲಗಳು ಅಥವಾ ಮುಂಗಡಗಳ ಪುನರ್ಧನ ನೀಡಿಕೆ ರೂಪದಲ್ಲಿ, ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಯಾವುದೇ ಇತರ ಹಣಕಾಸು ಸಂಸ್ಥೆ;

(ii) ಹದಿನೈದು ವರ್ಷಗಳನ್ನು ಮೀರದ ಅವಧಿಯೊಳಗೆ ಮರು ಸಂದಾಯ ಮಾಡಬೇಕಾದಂತೆ, ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕಿನ ಮೂಲಕ ಕೈಗಾರಿಕಾ ಸಂಸ್ಥೆಗಳಿಗೆ ಕೊಟ್ಟ ಯಾವುದೇ ಸಾಲಗಳು ಅಥವಾ ಮುಂಗಡಗಳ ಪುನರ್ಧನ ನೀಡಿಕೆ ರೂಪದಲ್ಲಿ ಅಂಥ ಬ್ಯಾಂಕು;

(iii) ಭಾರತದಿಂದ ಬಂಡವಾಳ ಸರಕುಗಳು, ವ್ಯಾಪಾರಿ ಸರಕುಗಳು ಅಥವಾ ವಾಣಿಜ್ಯ ಸರಕುಗಳ ರಫ್ತಿನ ಅಥವಾ ಹಿಂದೆ ಹೇಳಿದಂತೆ ಯಾವುದೇ ಕೈಗಾರಿಕಾ ಸಂಸ್ಥೆಯು ಅಥವಾ ಭಾರತದಲ್ಲಿನ ಯಾವನೇ ವ್ಯಕ್ತಿಯು ಭಾರತದ ಹೊರಗಡೆ ಯಾವುದೇ ಟರ್ನ್‌ಕೀ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿರುವಂಥ ಮತ್ತು ಯಾವುದೇ ಸಂದರ್ಭದಲ್ಲಿ,-

(i) ಭಾರತದ ಹೊರಗಡೆ ಇರುವ ವ್ಯಕ್ತಿಗಳ ಸಂದರ್ಭದಲ್ಲಿ ಹನ್ನೆರಡು ವರ್ಷಗಳನ್ನು ಮೀರದ ಅವಧಿಯೊಳಗೆ; ಮತ್ತು

(ii) ಇತರ ಸಂದರ್ಭಗಳಲ್ಲಿ ಹದಿನೈದು ವರ್ಷಗಳನ್ನು ಮೀರದ ಅವಧಿಯೊಳಗೆ

- ಮರು ಸಂದಾಯ ಮಾಡಬೇಕಾದ ಕೈಗಾರಿಕಾ ಸಂಸ್ಥೆಗಳ ಉತ್ಪನ್ನಗಳನ್ನು ರಫ್ತು ಮಾಡುವ ಸಂಸ್ಥೆಗಳನ್ನೊಳಗೊಂಡು ಕೈಗಾರಿಕಾ ಸಂಸ್ಥೆಗೆ ಅಥವಾ ಕೈಗಾರಿಕಾ ಸಂಸ್ಥೆಗಳ ಗುಂಪಿಗೆ ಅಂಥ ಬ್ಯಾಂಕು ಅಥವಾ ಸಂಸ್ಥೆಯು ಕೊಟ್ಟ ಪುನರ್ಧನ ನೀಡಿಕೆ ಅಥವಾ ಮುಂಗಡಗಳ ರೂಪದಲ್ಲಿ, ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರೀ ಬ್ಯಾಂಕು ಅಥವಾ ಕೈಗಾರಿಕಾ ಹಣಕಾಸು ನಿಗಮ ಅಥವಾ ಯಾವುದೇ ರಾಜ್ಯ ಹಣಕಾಸು ನಿಗಮ ಅಥವಾ ಯಾವುದೇ ಇತರ ಹಣಕಾಸು ಸಂಸ್ಥೆ -ಇವುಗಳಿಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ಕೊಡುವುದು;

(ಬಿ)ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಕೈಗಾರಿಕಾ ಸಂಸ್ಥೆಗಳು ಅಥವಾ ಒಂದು ಕೈಗಾರಿಕಾ ಸಂಸ್ಥೆಯು ತಯಾರಿಸಿದ ಬಂಡವಾಳ ಸರಕುಗಳನ್ನು ಇನ್ನೊಂದು ಕೈಗಾರಿಕಾ ಸಂಸ್ಥೆಗೆ ಮಾರಾಟ ಮಾಡುವ ಯಾವುದೇ ವ್ಯಕ್ತಿಯು ಮಾಡಿದ, ಬರೆದ, ಅಂಗೀಕರಿಸಿದ ಅಥವಾ ಹಿಂಬರಹ ಮಾಡಿದ ವಿನಿಮಯ ಪತ್ರಗಳ ಮತ್ತು ಪ್ರಾಮಿಸರಿ ನೋಟುಗಳನ್ನು ಅಂಗೀಕರಿಸುವುದು, ಮುಂಗಡವಾಗಿ ಮುರಿಸುವುದು ಅಥವಾ ಮುಂಗಡವಾಗಿ ಮರುಮುರಿಸುವುದು;

(ಸಿ) ಕೈಗಾರಿಕಾ ಹಣಕಾಸು ನಿಗಮ ಯಾವುದೇ ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಭಾರತದ ಒಳಗಡೆಯಾಗಲಿ ಅಥವಾ ಹೊರಗಡೆ

ಆಗಲಿ ಇರುವ ಯಾವುದೇ ಇತರ ಹಣಕಾಸು ಸಂಸ್ಥೆಯ ಸ್ಟಾಕುಗಳು, ಷೇರುಗಳು, ಬಾಂಡುಗಳು ಅಥವಾ ಡಿಬೆಂಚರುಗಳಿಗೆ ವಂತಿಗೆ ಕೊಡುವುದು ಅಥವಾ ಅವುಗಳನ್ನು ಖರೀದಿಸುವುದು;

(ಸಿಎ) ಕೈಗಾರಿಕಾ ಹಣಕಾಸು ನಿಗಮ, ಯಾವುದೇ ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದ ಇತರ ಹಣಕಾಸು ಸಂಸ್ಥೆಗೆ ಅಂಥ ನಿಗಮ ಅಥವಾ ಸಂಸ್ಥೆಯ ಯಾವುದೇ ವ್ಯವಹಾರದ ಉದ್ದೇಶಕ್ಕಾಗಿ ಸಾಲಗಳು ಅಥವಾ ಸಾಲಗಳು ಮತ್ತು ಮುಂಗಡಗಳನ್ನು ಮಂಜೂರು ಮಾಡುವುದು;

(ಡಿ) ಯಾವುದೇ ಕೈಗಾರಿಕಾ ಸಂಸ್ಥೆಗೆ ಸಾಲಗಳು ಅಥವಾ ಮುಂಗಡಗಳನ್ನು ಮಂಜೂರು ಮಾಡುವುದು ಅಥವಾ ಯಾವುದೇ ಕೈಗಾರಿಕಾ ಸಂಸ್ಥೆಯು ಸ್ಟಾಕುಗಳು, ಷೇರುಗಳು ಅಥವಾ ಡಿಬೆಂಚರುಗಳಿಗೆ ವಂತಿಗೆ ಕೊಡುವುದು ಅಥವಾ ಅವುಗಳನ್ನು ಖರೀದಿಸುವುದು ಅಥವಾ ಅವುಗಳನ್ನು ಕೊಳ್ಳಲು ಒಪ್ಪಿಕೊಳ್ಳುವುದು:

ಪರಂತು, ಈ ಖಂಡದಲ್ಲಿ ಅಡಕವಾಗಿರುವುದಾವುದೂ, ಅಭಿವೃದ್ಧಿ ಬ್ಯಾಂಕು ಕೈಗಾರಿಕಾ ಸಂಸ್ಥೆಗೆ ಸಾಲಗಳನ್ನು ಅಥವಾ ಮುಂಗಡಗಳನ್ನು ಮಂಜೂರು ಮಾಡುವುದರಿಂದ ಅಥವಾ ಅವುಗಳ ಡಿಬೆಂಚರುಗಳಿಗೆ ವಂತಿಗೆ ಕೊಡುವುದರಿಂದ ಅದನ್ನು ಪ್ರತಿಬಂಧಿಸತಕ್ಕುದಲ್ಲ. ಅದರ ಬಗ್ಗೆ ಬಾಕಿಯಿರುವ ಮೊಬಲಗುಗಳನ್ನು ಅಭಿವೃದ್ಧಿ ಬ್ಯಾಂಕಿನ ಆಯ್ಕೆಯ ಮೇರೆಗೆ, ಸಾಲ, ಮುಂಗಡ ಅಥವಾ ಡಿಬೆಂಚರನ್ನು ಮರು ಸಂದಾಯ ಮಾಡಬೇಕಾದ ಅವಧಿಯೊಳಗೆ, ಆ ಸಂಸ್ಥೆಯ ಸ್ಟಾಕುಗಳು ಅಥವಾ ಷೇರುಗಳಿಗೆ ಪರಿವರ್ತಿಸಬಹುದಾಗಿದೆ.

**ವಿವರಣೆ:-** ಈ ಖಂಡದಲ್ಲಿ ಯಾವುದೇ ಸಾಲ ಅಥವಾ ಮುಂಗಡಕ್ಕೆ ಸಂಬಂಧಪಟ್ಟಂತೆ ಉಪಯೋಗಿಸಲಾದ "ಅದರ ಬಗ್ಗೆ ಬಾಕಿಯಿರುವ ಮೊಬಲಗುಗಳು" ಎಂಬ ಪದಾವಳಿಯು ಮೊಬಲಗುಗಳನ್ನು ಸ್ಟಾಕುಗಳು ಅಥವಾ ಷೇರುಗಳಿಗೆ ಪರಿವರ್ತಿಸಬೇಕೆಂದು ಕೋರಿಕೊಂಡಾಗ ಆ ಕಾಲದಲ್ಲಿ ಇದ್ದಂಥ ಸಾಲ ಅಥವಾ ಮುಂಗಡದ ಮೇಲೆ ಸಂದಾಯ ಮಾಡಬೇಕಾದ ಅಸಲು, ಬಡ್ಡಿ ಮತ್ತು ಇತರ ವೆಚ್ಚಗಳು ಎಂದು ಅರ್ಥ.

(ಡಿಎ) (i) ಕೈಗಾರಿಕಾ ಸಂಸ್ಥೆಗಳ ಉತ್ಪನ್ನಗಳನ್ನು ರಫ್ತು ಮಾಡುವ ಯಾವನೇ ವ್ಯಕ್ತಿಗೆ; ಅಥವಾ

(ii) ಭಾರತದಿಂದ ಬಂಡವಾಳ ಸರಕುಗಳ ರಫ್ತಿಗೆ ಸಂಬಂಧಿಸಿದಂತೆ ಭಾರತದ ಹೊರಗಿನ ಯಾವನೇ ವ್ಯಕ್ತಿಗೆ; ಅಥವಾ

(iii) ಯಾವುದೇ ಕೈಗಾರಿಕಾ ಸಂಸ್ಥೆಯು ಅಥವಾ ಭಾರತದಲ್ಲಿನ ಯಾವನೇ ವ್ಯಕ್ತಿಯು ಭಾರತದ ಹೊರಗಿನ ಟರ್ನ್‌ಕೀ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ

– ಸಾಲಗಳು ಮತ್ತು ಮುಂಗಡಗಳನ್ನು ಮಂಜೂರು ಮಾಡುವುದು;

(ಡಿಬಿ) ಕೈಗಾರಿಕಾ ಸಂಸ್ಥೆಗಳಿಗೆ ಅದು ಮಂಜೂರು ಮಾಡಿದ ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಪಟ್ಟ ಯಾವುದೇ ಲಿಖಿತವನ್ನು ಪ್ರತಿಫಲಕ್ಕಾಗಿ ವರ್ಗಾಯಿಸುವುದು;

(ಡಿಸಿ) ಯಾವುದೇ ಕೈಗಾರಿಕಾ ಸಂಸ್ಥೆಯಲ್ಲಿ ಹೂಡುವ ಉದ್ದೇಶಗಳಿಗಾಗಿ ಯಾವನೇ ವ್ಯಕ್ತಿಗೆ ಸಾಲಗಳು ಮತ್ತು ಮುಂಗಡವನ್ನು ಮಂಜೂರು ಮಾಡುವುದು;

(ಇ) ಯಾವುದೇ ಕೈಗಾರಿಕಾ ಸಂಸ್ಥೆಯಿಂದ ಬಾಕಿಯಿರುವ ಮುಂದೂಡಿದ ಸಂದಾಯಗಳಿಗೆ ಖಾತ್ರಿ ಕೊಡುವುದು;

(ಎಫ್) (i) ಸಾರ್ವಜನಿಕ ಮಾರುಕಟ್ಟೆಯಲ್ಲಿ ಸ್ಥಾಪಿಸಲಾದಂಥ ಕೈಗಾರಿಕಾ ಸಂಸ್ಥೆಗಳು ಎತ್ತಿದ ಸಾಲಗಳಿಗೆ; ಮತ್ತು

(ii) ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕು ಅಥವಾ ಕೈಗಾರಿಕಾ ಹಣಕಾಸು ನಿಗಮ ಅಥವಾ ಯಾವುದೇ ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಇತರ ಯಾವುದೇ ಹಣಕಾಸು ಸಂಸ್ಥೆಯಿಂದ ಕೈಗಾರಿಕಾ ಸಂಸ್ಥೆಗಳು ಎತ್ತಿದ ಸಾಲಗಳಿಗೆ ಖಾತ್ರಿ ಕೊಡುವುದು;

(ಜಿ) ಯಾವುದೇ ಕೈಗಾರಿಕಾ ಸಂಸ್ಥೆಯ ಸ್ಟಾಕುಗಳು, ಷೇರುಗಳು, ಬಾಂಡುಗಳು ಅಥವಾ ಡಿಬೆಂಚರುಗಳನ್ನು ಹೊರಡಿಸುವ ಬಗ್ಗೆ ಒಪ್ಪಂದ ಮಾಡಿಕೊಳ್ಳುವುದರಿಂದ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕ್ ಅಥವಾ ಕೈಗಾರಿಕಾ ಹಣಕಾಸು ನಿಗಮ ಅಥವಾ ಯಾವುದೇ ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಮಂಡಲಿಯು ಅನುಮೋದಿಸಬಹುದಾದಂಥ ಯಾವುದೇ ಇತರ ಹಣಕಾಸು ಸಂಸ್ಥೆಯ ಬಾಧ್ಯತೆಗಳಿಗೆ ಖಾತ್ರಿ ಕೊಡುವುದು;

(ಜಿಎ) ನಂಬಿಕೆ ಪತ್ರಗಳನ್ನು ನೀಡುವುದು, ತೆರೆಯುವುದು, ಹೊರಡಿಸುವುದು, ಸ್ಥಿರೀಕರಿಸುವುದು ಅಥವಾ ಅವುಗಳಿಗೆ ಹಿಂಬರಹ ಮಾಡುವುದು ಮತ್ತು ಅದರ ಮೇರೆಗೆ ಬರೆದ ಬಿಲ್ಲುಗಳು ಮತ್ತು ಇತರ ದಸ್ತಾವೇಜುಗಳನ್ನು ವರ್ಗಾವಣೆ ಮಾಡುವುದು ಅಥವಾ ಸಂಗ್ರಹಿಸುವುದು;

(ಜಿಬಿ) ಭಾರತದ ಒಳಗೆ ಮತ್ತು ಹೊರಗೆ ಸಮಾಲೋಚನಾ ಮತ್ತು ವ್ಯಾಪಾರ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವುದು;

(ಜಿಸಿ) ಡಿಬೆಂಚರುಗಳು ಅಥವಾ ಇತರೆ ಭದ್ರತೆಗಳ ಧಾರಕರಿಗೆ ನ್ಯಾಸಧಾರಿಯಾಗಿ ವರ್ತಿಸುವುದು;

(ಜಿಡಿ) ಕೇಂದ್ರ ಸರ್ಕಾರದ ಅನುಮೋದನೆ ಪಡೆದು, ಭಾರತದಲ್ಲಿ ಕೈಗಾರಿಕೆಯ ಸಂವರ್ಧನೆ ಅಥವಾ ಅಭಿವೃದ್ಧಿ ಅಥವಾ ಅಂಥ ಸಂವರ್ಧನೆ ಅಥವಾ ಅಭಿವೃದ್ಧಿಗಾಗಿ ಹಣಕಾಸು ನೆರವು ನೀಡುವುದು, ಇವೇ ಮುಖ್ಯ ಉದ್ದೇಶವಾಗಿರುವ ಯಾವುದೇ ಸಂಸ್ಥೆಯ ವ್ಯವಹಾರ, ಆಸ್ತಿಗಳು ಮತ್ತು ಹೊಣೆಗಾರಿಕೆಗಳೂ ಸೇರಿದಂತೆ ಆ ಕೈಗಾರಿಕೆಯನ್ನು ಆರ್ಜಿಸುವುದು;

(ಎಚ್) ಕೈಗಾರಿಕೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೌಲ್ಯ ಮಾಪನಕ್ಕಾಗಿ ಸಂಶೋಧನೆ ಮತ್ತು ಸಮೀಕ್ಷೆಗಳನ್ನು ಕೈಗೊಳ್ಳುವುದು ಮತ್ತು ಕ್ರಯ ವಿಕ್ರಯ ಅಥವಾ ಹೂಡಿಕೆಗಳೊಂದಿಗೆ ವ್ಯವಹರಿಸುವುದು ಮತ್ತು ತಾಂತ್ರಿಕ, ಆರ್ಥಿಕ ಅಧ್ಯಯನಗಳನ್ನು ಕೈಗೊಳ್ಳುವುದು ಮತ್ತು ನಡೆಸುವುದು;

(ಐ) ಯಾವುದೇ ಕೈಗಾರಿಕೆಯ ಸಂವರ್ಧನೆ, ವ್ಯವಸ್ಥಾಪನೆ ಅಥವಾ ವಿಸ್ತರಣೆಗಾಗಿ ಯಾವುದೇ ಕೈಗಾರಿಕಾ ಸಂಸ್ಥೆ ಅಥವಾ ಯಾವನೇ ವ್ಯಕ್ತಿಗೆ ತಾಂತ್ರಿಕ, ಕಾನೂನು, ಕ್ರಯ ವಿಕ್ರಯ ಮತ್ತು ಆಡಳಿತಾತ್ಮಕ ಸಹಾಯವನ್ನು ಒದಗಿಸುವುದು;

(ಜೆ) ಭಾರತದಲ್ಲಿನ ಕೈಗಾರಿಕಾ ರಚನೆಯಲ್ಲಿನ ಅಂತರಗಳನ್ನು ತುಂಬಲು ಉದ್ಯಮಗಳನ್ನು ಯೋಜಿಸುವುದು, ಸಂವರ್ಧಿಸುವುದು ಮತ್ತು ಅಭಿವೃದ್ಧಿಗೊಳಿಸುವುದು;

(ಕೆ) ಕಂಪನಿಗಳು, ಸಹಾಯಕ ಕಂಪನಿಗಳು, ಸಂಘಗಳು, ನ್ಯಾಸಗಳು ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳ ಇತರ ಸಂಘಟನೆಗಳನ್ನು ಸಂವರ್ಧಿಸುವುದು, ರೂಪಿಸುವುದು ಅಥವಾ ನಡೆಸುವುದು ಅಥವಾ ಅವುಗಳನ್ನು ಸಂವರ್ಧಿಸುವುದು, ರೂಪಿಸುವುದು ಅಥವಾ ನಡೆಸುವಲ್ಲಿ ಸಹವರ್ತಿಸುವುದು;

(ಕೆಎ) (i) ಕೇಂದ್ರ ಸರ್ಕಾರ ಅಥವಾ ರಿಸರ್ವ್ ಬ್ಯಾಂಕಿನ; ಅಥವಾ

(ii) ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಇತರ ಸರ್ಕಾರ ಅಥವಾ ವ್ಯಕ್ತಿಯ ಏಜೆಂಟನಾಗಿ ಕೆಲಸ ಮಾಡುವುದು;

(ಎಲ್) ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಭಿವೃದ್ಧಿ ಬ್ಯಾಂಕಿಗೆ ವಹಿಸಿಕೊಟ್ಟ ಅಥವಾ ಅಗತ್ಯಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸುವುದು;

(ಎಂ) ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಯಾವುದೇ ಇತರ ಬಗೆಯ ವ್ಯವಹಾರವನ್ನು ಮಾಡುವುದು;

(ಎನ್) ಅದರ ಯಾವುದೇ ಆಸ್ತಿಯ ಮಾರಾಟ ಅಥವಾ ವರ್ಗಾವಣೆಯನ್ನು ಒಳಗೊಂಡು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗಿನ ಅದರ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ಅದರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಥವಾ ಅದಕ್ಕೆ ಅದರಿಂದ ಉಂಟಾಗಬಹುದಾದಂಥ ಇತರ ಕೆಲಸಗಳನ್ನು ಅಥವಾ ಕಾರ್ಯಗಳನ್ನು ಸಾಮಾನ್ಯವಾಗಿ ಮಾಡುವುದು.

(2) (1) ನೇ ಉಪಪ್ರಕರಣದಲ್ಲಿ ನಮೂದಿಸಿದ ಒಪ್ಪಿಕೊಳ್ಳಬಹುದಾದ ರುಸುಮು, ದಲ್ಲಾಳಿ, ಬಡ್ಡಿ, ಪರಿಶ್ರಮಧನ ಅಥವಾ ಫೀಜುಗಳನ್ನು ಅಭಿವೃದ್ಧಿ ಬ್ಯಾಂಕು ಸ್ವೀಕರಿಸಬಹುದು.

(3) ಅಭಿವೃದ್ಧಿ ಬ್ಯಾಂಕು ಅದರದೇ ಆದ ಬಾಂಡುಗಳು ಅಥವಾ ಡಿಬೆಂಚರುಗಳ ಭದ್ರತೆಯ ಮೇಲೆ ಯಾವುದೇ ಸಾಲ ಅಥವಾ ಮುಂಗಡ ಅಥವಾ ಇತರ ಹಣಕಾಸು ಅನುಕೂಲವನ್ನು ಮಂಜೂರು ಮಾಡತಕ್ಕುದಲ್ಲ.

**9ಎ.ನಿಷೇಧಿತ ವ್ಯವಹಾರ.–** (1) ಯಾವ ಕೈಗಾರಿಕಾ ಸಂಸ್ಥೆಯ ಅಭಿವೃದ್ಧಿ ಬ್ಯಾಂಕಿನ ಯಾವನೇ ನಿರ್ದೇಶಕನು, ಮಾಲೀಕ, ಪಾಲುದಾರ ನಿರ್ದೇಶಕ, ವ್ಯವಸ್ಥಾಪಕ ಏಜೆಂಟು, ನಿಯೋಜಿತ ಅಥವಾ ಖಾತ್ರಿದಾರನಾಗಿರುವನೋ ಅಥವಾ ಯಾವ ಕೈಗಾರಿಕಾ ಸಂಸ್ಥೆಯಲ್ಲಿ ಅಭಿವೃದ್ಧಿ ಬ್ಯಾಂಕಿನ ಒಬ್ಬ ಅಥವಾ ಅದಕ್ಕಿಂತ ಹೆಚ್ಚು ನಿರ್ದೇಶಕರು ಒಟ್ಟಾಗಿ ಗಣನೀಯವಾದ ಹಿತಾಸಕ್ತಿಯನ್ನು ಹೊಂದಿರುವರೋ ಆ ಯಾವುದೇ ಕೈಗಾರಿಕಾ ಸಂಸ್ಥೆಯೊಂದಿಗೆ ಅಭಿವೃದ್ಧಿ ಬ್ಯಾಂಕು ಯಾವುದೇ ಬಗೆಯ ವ್ಯವಹಾರವನ್ನು ಮಾಡಿಕೊಳ್ಳತಕ್ಕುದಲ್ಲ:

ಪರಂತು, ಈ ಉಪಪ್ರಕರಣವು ಯಾವುದೇ ಕೈಗಾರಿಕಾ ಸಂಸ್ಥೆಗೆ, ಆ ಅಭಿವೃದ್ಧಿ ಬ್ಯಾಂಕಿನ ಯಾವನೇ ನಿರ್ದೇಶಕನನ್ನು,–

(i) ಸರ್ಕಾರವು ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಕಂಪನಿಯು ಅಥವಾ ಯಾವುದೇ ಇತರ ಕಾನೂನಿನ ಮೂಲಕ ಸ್ಥಾಪಿಸಲಾದ ನಿಗಮವು ಅಂಥ ಸಂಸ್ಥೆಯ, ಮಂಡಲಿಯ ನಿರ್ದೇಶಕನಾಗಿ ನಾಮ ನಿರ್ದೇಶಿಸಿದ್ದರೆ; ಅಥವಾ

(ii) ಸರ್ಕಾರವು ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಕಂಪನಿಯು ಅಥವಾ ಯಾವುದೇ ಇತರ ಕಾನೂನಿನ ಮೂಲಕ ಸ್ಥಾಪಿತವಾದ ನಿಗಮವು ಆ ಸಂಸ್ಥೆಯಲ್ಲಿ ಹೊಂದಿದ ಷೇರುಗಳ ಕಾರಣದಿಂದಾಗಿ ಅಂಥ ಸಂಸ್ಥೆಯ ಮಂಡಲಿಗೆ ಚುನಾಯಿಸಲಾಗಿದ್ದರೆ–ಸಂದರ್ಭಾನುಸಾರ ಅಂಥ ನಾಮನಿರ್ದೇಶನ ಅಥವಾ ಚುನಾವಣೆಯ ಕಾರಣ ಮಾತ್ರದಿಂದಲೇ ಅನ್ವಯವಾಗತಕ್ಕುದಲ್ಲ;

**ವಿವರಣೆ:–** ಕೈಗಾರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ "ಗಣನೀಯ ಹಿತಾಸಕ್ತಿ" ಎಂದರೆ ಯಾವುದರ ಬಗ್ಗೆ ಸಂದಾಯಿತ ಒಟ್ಟು ಮೊಬಲಗು ಐದು ಲಕ್ಷ ರೂಪಾಯಿಗಳನ್ನು ಅಥವಾ ಆ ಕೈಗಾರಿಕಾ ಸಂಸ್ಥೆಯ ಸಂದಾಯಿತ ಷೇರು ಬಂಡವಾಳದ ಶೇಕಡಾ ಐದರಷ್ಟನ್ನು ಮೀರುವಂಥ – ಯಾವುದು ಕಮ್ಮಿಯಿರುವುದೋ ಅದು ಆ ಯಾವುದೇ ಕೈಗಾರಿಕಾ ಸಂಸ್ಥೆಯ ಷೇರುಗಳಲ್ಲಿ ಏಕಮಾತ್ರವಾಗಿಯಾಗಲಿ ಅಥವಾ ಒಟ್ಟಾಗಿಯೇ ಆಗಲೀ ಅಭಿವೃದ್ಧಿ ಬ್ಯಾಂಕಿನ ಒಬ್ಬ ಅಥವಾ ಅದಕ್ಕಿಂತ ಹೆಚ್ಚು ನಿರ್ದೇಶಕರು ಅಥವಾ ಅಂಥ ನಿರ್ದೇಶಕನ ಯಾವನೇ ಬಂಧು ಕಂಪನಿಗಳ ಅಧಿನಿಯಮ, 1956ರ 2ನೇ ಪ್ರಕರಣದ 41ನೇ ಖಂಡದಲ್ಲಿ ಪರಿಭಾಷಿಸಿದಂತೆ ಹೊಂದಿದ ಪ್ರಯೋಜನಕಾರಿ ಹಿತಾಸಕ್ತಿ.

(2) (1)ನೇ ಉಪಪ್ರಕರಣದ ಉಪಬಂಧಗಳು,–

(i) ಆ ಸಂಸ್ಥೆಯೊಂದಿಗೆ ವ್ಯವಹಾರವನ್ನು ಮಾಡಿಕೊಳ್ಳುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯವೆಂದು ಅಭಿವೃದ್ಧಿ ಬ್ಯಾಂಕಿಗೆ ಮನದಟ್ಟಾದರೆ ಅದರಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ಕೈಗಾರಿಕಾ ಸಂಸ್ಥೆಗೆ ಅನ್ವಯವಾಗತಕ್ಕುದಲ್ಲ ಮತ್ತು ಅಂಥ ಕೈಗಾರಿಕಾ ಸಂಸ್ಥೆಯೊಂದಿಗೆ ಯಾವುದೇ ಬಗೆಯ ವ್ಯವಹಾರವನ್ನು ಮಾಡಿಕೊಳ್ಳುವುದು ನೇಮಿಸಬಹುದಾದಂಥ ಷರತ್ತುಗಳಿಗನುಸಾರವಾಗಿ ಇರತಕ್ಕುದು ಮತ್ತು ಅವುಗಳಿಗೆ ಒಳಪಟ್ಟಿರತಕ್ಕುದು.

(ii) ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ (ತಿದ್ದುಪಡಿ) ಅಧಿನಿಯಮ, 1972 – ಇದರ ಪ್ರಾರಂಭಕ್ಕೆ ಮುಂಚೆ ಮಾಡಿಕೊಂಡ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯಕ್ಕೆ ಅನ್ವಯವಾಗತಕ್ಕುದಲ್ಲ ಮತ್ತು ಎಲ್ಲಾ ಅಂಥ ವ್ಯವಹಾರ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯವನ್ನು ಈ ಅಧಿನಿಯಮವು ಜಾರಿಗೆ ಬಂದಿಲ್ಲದಿದ್ದರೆ ಹೇಗೋ ಹಾಗೆ ಕಾರ್ಯಗತಗೊಳಿಸಬಹುದು ಅಥವಾ ಮುಂದುವರಿಸಬಹುದು.

(iii) ಸದರಿ ಉಪಪ್ರಕರಣದಲ್ಲಿ ನಿರೂಪಿಸಿದಂತೆ ಅಂಥ ಅಸಮರ್ಥತೆಗೆ ಹಿಂದಿನ ಪರಿಸ್ಥಿತಿಗಳು ಮುಂದುವರಿಯುವವರೆಗೆ ಅನ್ವಯವಾಗತಕ್ಕುದು.

**10. ಕೇಂದ್ರ ಸರ್ಕಾರದಿಂದ ಸಾಲಗಳು.–** ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಯುಕ್ತ ವಿನಿಯೋಗದ ತರುವಾಯ ಅಭಿವೃದ್ಧಿ ಬ್ಯಾಂಕಿಗೆ,–

(ಎ) ಬ್ಯಾಂಕು ಸಾಲವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ ಪ್ರಾರಂಭವಾಗುವ ಹದಿನೈದು ಸಮ ವಾರ್ಷಿಕ ಕಂತುಗಳಲ್ಲಿ ಮರು ಸಂದಾಯ ಮಾಡಬೇಕಾದ ಹತ್ತು ಕೋಟಿ ರೂಪಾಯಿಗಳ ಬಡ್ಡಿ ರಹಿತ ಸಾಲವನ್ನು; ಮತ್ತು

(ಬಿ) ಒಪ್ಪಂದ ಮಾಡಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಸಾಲದ ರೂಪದಲ್ಲಿ ಹಣದ ಹೆಚ್ಚಿನ ಮೊತ್ತಗಳನ್ನು

– ಮುಂಗಡವಾಗಿ ಕೊಡಬಹುದು:

ಪರಂತು, ಕೇಂದ್ರ ಸರ್ಕಾರವು, ಅಭಿವೃದ್ಧಿ ಬ್ಯಾಂಕು ತನಗೆ ಮಾಡಿಕೊಂಡ ಕೋರಿಕೆಯ ಮೇರೆಗೆ (ಎ) ಖಂಡದ ಮೇರೆಗಿನ ಕಂತುಗಳ ಸಂಖ್ಯೆಯನ್ನು ಹೆಚ್ಚಿಸಬಹುದು ಅಥವಾ ಯಾವುದೇ ಕಂತಿನ ಮೊಬಗಲನ್ನು ಬದಲಿಸಬಹುದು ಅಥವಾ ಸಂದಾಯ ಮಾಡಬೇಕಾದಂಥ ಯಾವುದೇ ಕಂತಿನ ದಿನಾಂಕವನ್ನು ವ್ಯತ್ಯಸ್ತಗೊಳಿಸಬಹುದು.

**11. ಅಭಿವೃದ್ಧಿ ಬ್ಯಾಂಕು ಸಾಲ ತೆಗೆದುಕೊಳ್ಳುವುದು ಮತ್ತು ಠೇವಣಿಗಳನ್ನು ಅಂಗೀಕರಿಸುವುದು.–** (1) ಅಭಿವೃದ್ಧಿ ಬ್ಯಾಂಕು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ,–

(ಎ) ಕೇಂದ್ರ ಸರ್ಕಾರದ ಖಾತ್ರಿ ಸಹಿತ ಅಥವಾ ಖಾತ್ರಿ ಇಲ್ಲದ ಬಾಂಡುಗಳು ಮತ್ತು ಡಿಬೆಂಚರುಗಳನ್ನು ಹೊರಡಿಸಬಹುದು ಮತ್ತು ಮಾರಾಟ ಮಾಡಬಹುದು;

(ಬಿ) (i) ತಗಾದೆಯ ಮೇಲೆ ಅಥವಾ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸ ಧನವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಿರುವಂಥ ಸ್ಟಾಕುಗಳು, ನಿಧಿಗಳು ಮತ್ತು ಭದ್ರತೆಗಳು (ಸ್ಥಿರ ಸ್ವತ್ತನ್ನು ಹೊರತುಪಡಿಸಿ)

– ಇವುಗಳ ಭದ್ರತೆಯ ಮೇಲೆ ಹಣವನ್ನು ಹಾಗೆ ಸಾಲ ಪಡೆದಂಥ ದಿನಾಂಕದಿಂದ ತೊಂಬತ್ತು ದಿವಸವನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡಬೇಕಾದ;

(ii) ಎರಡು ಅಥವಾ ಹೆಚ್ಚಿನ ಮಾನ್ಯತೆ ಪಡೆದ ಸಹಿಗಳನ್ನು ಹೊಂದಿರುವ ಮತ್ತು ಸಾಲ ಪಡೆದ ದಿನಾಂಕದಿಂದ ಐದು ವರ್ಷಗಳೊಳಗೆ ವಾಯಿದೆ ತುಂಬುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವ್ಯವಹಾರಗಳಿಂದ ಉದ್ಭವಿಸುವ ವಿನಿಮಯ ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳ ಮೇಲೆ;

(iii) ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 46ಸಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿಯಿಂದ ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ

– ಯಾವುದೇ ಉದ್ದೇಶಕ್ಕಾಗಿ ರಿಸರ್ವ್ ಬ್ಯಾಂಕಿನಿಂದ ಹಣವನ್ನು ಸಾಲವಾಗಿ ಪಡೆಯಬಹುದು.

(ಸಿ) ಮಂಡಲಿಯು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅನುಮೋದಿಸಬಹುದಾದಂಥ ಭಾರತದಲ್ಲಿನ ಇತರ ಪ್ರಾಧಿಕಾರ, ಸಂಘಟನೆ ಅಥವಾ ಸಂಸ್ಥೆಯಿಂದ ಹಣವನ್ನು ಸಾಲವಾಗಿ ಪಡೆಯಬಹುದು;

(ಡಿ) ಮಂಡಲಿಯು ಅನುಮೋದಿಸಬಹುದಾದಂಥ ನಿಬಂಧನೆಗಳ ಮೇಲೆ, ಠೇವಣಿಗಳನ್ನು ಸ್ವೀಕರಿಸಬಹುದು.

(2) ಕೇಂದ್ರ ಸರ್ಕಾರವು, ಅಭಿವೃದ್ಧಿ ಬ್ಯಾಂಕು ತನಗೆ ಮಾಡಿಕೊಂಡ ಕೋರಿಕೆಯ ಮೇರೆಗೆ, ಆ ಬ್ಯಾಂಕು ಹೊರಡಿಸಿದ ಬಾಂಡುಗಳು ಮತ್ತು ಡಿಬೆಂಚರುಗಳ ಬಗ್ಗೆ ಅಸಲಿನ ಮರು ಸಂದಾಯ ಮತ್ತು ಆ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯ ಸಂದಾಯದ ಬಗ್ಗೆ ಖಾತ್ರಿಯನ್ನು ಕೊಡಬಹುದು.

**11ಎ. ಹಕ್ಕುಗಳ ವರ್ಗಾವಣೆ ಅಧಿಕಾರ.–** ಅದು ಮಂಜೂರ್ಮಾಡಿದ ಯಾವುದೇ ಸಾಲ ಅಥವಾ ಮುಂಗಡ ಅಥವಾ ಅದು ವಸೂಲ್ಮಾಡಬೇಕಾದ ಯಾವುದೇ ಮೊಬಲಗಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಬ್ಯಾಂಕಿನ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು (ಅದಕ್ಕೆ ಪ್ರಾಸಂಗಿಕವಾದ ಯಾವುದೇ ಇತರ ಹಕ್ಕುಗಳನ್ನೊಳಗೊಂಡು) ಅಭಿವೃದ್ಧಿ ಬ್ಯಾಂಕು ಪೂರ್ತಿಯಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಯಾವುದೇ ಲಿಖಿತವನ್ನು ಬರೆದುಕೊಡುವ ಅಥವಾ ಹೊರಡಿಸುವ ಮೂಲಕ ಅಥವಾ ಹಿಂಬರಹದ ಮೂಲಕ ಯಾವುದೇ ಲಿಖಿತವನ್ನು ವರ್ಗಾವಣೆ ಮಾಡುವ ಮೂಲಕ

ಅಥವಾ ಅಂಥ ಸಾಲ ಅಥವಾ ಮುಂಗಡಕ್ಕೆ ಸಂಬಂಧಿಸಿದಂತೆ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಕಾನೂನು ಸಮ್ಮತವಾಗಿ ವರ್ಗಾವಣೆ ಮಾಡಬಹುದಾದಂಥ ಯಾವುದೇ ಇತರ ರೀತಿಯಲ್ಲಿ ವರ್ಗಾವಣೆ ಮಾಡಬಹುದು ಮತ್ತು ಅಭಿವೃದ್ಧಿ ಬ್ಯಾಂಕು ಅಂಥ ವರ್ಗಾವಣೆ ಆದಾಗ್ಯೂ ವರ್ಗಾವಣೆ ಪಡೆದವನಿಗಾಗಿ ನ್ಯಾಸಧಾರಿಯಂತೆ ಕಾರ್ಯ ನಿರ್ವಹಿಸಬಹುದು.

**11ಬಿ. ಹಕ್ಕುಗಳನ್ನು ಆರ್ಜಿಸುವ ಅಧಿಕಾರ.-** ಅಭಿವೃದ್ಧಿ ಬ್ಯಾಂಕು, ಮಂಜೂರು ಮಾಡಲಾದ ಯಾವುದೇ ಸಾಲ ಅಥವಾ ಮುಂಗಡಗಳ ಸಂಬಂಧದಲ್ಲಿ ಕಂಪನಿಗಳ ಅಧಿನಿಯಮ, 1956 (1956ರ 1)ರ 4ಎ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆಯ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು (ಅದಕ್ಕೆ ಪ್ರಾಸಂಗಿಕವಾದ ಯಾವುದೇ ಇತರ ಹಕ್ಕುಗಳೂ ಸೇರಿ) ವರ್ಗಾವಣೆ ಅಥವಾ ಹಸ್ತಾಂತರಣದ ಮೂಲಕ ಅಥವಾ ಅಂಥ ಆ ಸಂಸ್ಥೆಯು, ಯಾವುದೇ ಲಿಖಿತವನ್ನು ಜಾರಿಗೊಳಿಸುವ ಅಥವಾ ಹೊರಡಿಸುವ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಅಂಥ ಸಂಸ್ಥೆಯಿಂದ ವಸೂಲೀಯವಾದ ಯಾವುದೇ ಮೊಬಲಗನ್ನು ಆರ್ಜಿಸುವ ಹಕ್ಕನ್ನು ಹೊಂದಿರತಕ್ಕುದು.

**12. ವಿದೇಶಿ ಕರೆನ್ಸಿಯಲ್ಲಿ ಸಾಲಗಳು.-** (1) ವಿದೇಶಿ ವಿನಿಮಯ ವಿನಿಯಮನ ಅಧಿನಿಯಮ, 1947 (1947ರ 7)ರಲ್ಲಿ ಅಥವಾ ವಿದೇಶಿ ವಿನಿಮಯಕ್ಕೆ ಸಂಬಂಧಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ ಸಹ ಅಭಿವೃದ್ಧಿ ಬ್ಯಾಂಕು ಈ ಅಧಿನಿಯಮದ ಮೇರೆಗೆ ಸಾಲ ಹಾಗೂ ಮುಂಗಡವನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ ಪೂರ್ವ ಸಮ್ಮತಿಯೊಂದಿಗೆ ಯಾವುದೇ ವಿದೇಶಿ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಯಿಂದ ಅಥವಾ ಅನ್ಯಥಾ ವಿದೇಶಿ ಕರೆನ್ಸಿಯನ್ನು ಸಾಲ ಪಡೆಯಬಹುದು.

(2) ಕೇಂದ್ರ ಸರ್ಕಾರವು, ಅವಶ್ಯವಾದಲ್ಲಿ ಅಸಲಿನ ಮರು ಸಂದಾಯ ಮತ್ತು ಬಡ್ಡಿಯ ಮತ್ತು ಇತರ ಪ್ರಾಸಂಗಿಕ ವೆಚ್ಚಗಳ ಸಂದಾಯದ ಬಗ್ಗೆ (1) ನೇ ಉಪಪ್ರಕರಣದ ಮೇರೆಗೆ ಅಥವಾ ಅದರ ಯಾವುದೇ ಭಾಗದ ಮೇರೆಗೆ ಅಭಿವೃದ್ಧಿ ಬ್ಯಾಂಕು ಪಡೆದ ಯಾವುದೇ ಸಾಲಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಖಾತ್ರಿ ಕೊಡಬಹುದು.

**13. ಅಭಿವೃದ್ಧಿ ಬ್ಯಾಂಕಿಗೆ ಅನುದಾನಗಳು, ದೇಣಿಗೆಗಳು, ಇತ್ಯಾದಿ.-** ಅಭಿವೃದ್ಧಿ ಬ್ಯಾಂಕು, ಸರ್ಕಾರ ಅಥವಾ ಇತರ ಯಾವುದೇ ಮೂಲದಿಂದ ದಾನಗಳು, ಅನುದಾನಗಳು, ದೇಣಿಗೆಗಳು, ಉಪಕಾರ ಧನಗಳನ್ನು ಸ್ವೀಕರಿಸಬಹುದು.

## ಅಧ್ಯಾಯ - IVಎ
## ಷೇರುಗಳು

**13ಎ. ಷೇರುಗಳು ಮುಕ್ತವಾಗಿ ವರ್ಗಾವಣೆಯಾಗುವುದು.-** (1) (2)ನೇ ಉಪ-ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಅಭಿವೃದ್ಧಿ ಬ್ಯಾಂಕಿನ ಈಕ್ವಿಟಿ ಷೇರುಗಳು ಮುಕ್ತವಾಗಿ ವರ್ಗಾವಣೆಯಾಗುವಂತೆ ಇರತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರವನ್ನು, ಅದು ಅಭಿವೃದ್ಧಿ ಬ್ಯಾಂಕಿನಲ್ಲಿ ಹೊಂದಿರುವ ಷೇರುಗಳ ವರ್ಗಾವಣೆಗೆ, ಅಂಥ ವರ್ಗಾವಣೆಯಿಂದ, ಅದು

ಹೊಂದಿರುವ ಈಕ್ವಿಟಿ ಷೇರುಗಳು, ಅಭಿವೃದ್ಧಿ ಬ್ಯಾಂಕಿನ ಹೊರಡಿಸಲಾದ ಷೇರು ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಆಗುವ ಹಾಗಿದ್ದರೆ, ಹಕ್ಕುಳ್ಳದ್ದನ್ನಾಗಿ ಮಾಡತಕ್ಕದ್ದಲ್ಲ.

**13ಬಿ. ಷೇರುದಾರರ ರಿಜಿಷ್ಟರು.–** (1) ಅಭಿವೃದ್ಧಿ ಬ್ಯಾಂಕು, ಷೇರುದಾರರ ಒಂದು ರಿಜಿಸ್ಟರನ್ನು ಒಂದು ಅಥವಾ ಹೆಚ್ಚು ಪುಸ್ತಕಗಳಲ್ಲಿ, ತನ್ನ ಪ್ರಧಾನ ಕಚೇರಿಯಲ್ಲಿ ಇಡತಕ್ಕದ್ದು ಮತ್ತು ಈ ಕೆಳಕಂಡ ವಿವರಗಳನ್ನು ಅವು ದೊರಕಬಹುದಾದಷ್ಟು ಮಟ್ಟಿಗೆ ಅದರಲ್ಲಿ ನಮೂದಿಸತಕ್ಕದ್ದು, ಎಂದರೆ:–

(i) ಷೇರುದಾರರ ಹೆಸರುಗಳು, ವಿಳಾಸಗಳು ಮತ್ತು ವೃತ್ತಿಗಳು ಯಾವುದಾದರೂ ಇದ್ದರೆ ಅವುಗಳನ್ನು ಮತ್ತು ಪ್ರತಿಯೊಂದು ಷೇರನ್ನು ಸೂಚಕ ಅಂಕಿಯಿಂದ ವಿಭಿನ್ನವಾಗಿಸಿ ತೋರಿಸುವ ಪ್ರತಿಯೊಬ್ಬ ಷೇರುದಾರರು ಹೊಂದಿರುವ ಷೇರುಗಳ ವಿವರಣ ಪಟ್ಟಿ;

(ii) ಪ್ರತಿಯೊಬ್ಬ ವ್ಯಕ್ತಿಯು ಷೇರುದಾರನಾಗಿ ನಮೂದಿತನಾದ ದಿನಾಂಕ;

(iii) ಯಾರೇ ವ್ಯಕ್ತಿಯು ಷೇರುದಾರನಾಗಿರುವುದು ಮುಕ್ತಾಯವಾದ ದಿನಾಂಕ; ಮತ್ತು

(iv) ನಿಯಮಿಸಬಹುದಾದಂಥ ಇತರ ವಿವರಗಳು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಠೇವಣಿಸ್ಥಾನದಲ್ಲಿ ಹೊಂದಿರುವ ಷೇರುಗಳಿಗೆ ಅನ್ವಯವಾಗತಕ್ಕದ್ದಲ್ಲ

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ಸಂರಕ್ಷಣೆ ಕ್ರಮಗಳಿಗೊಳಪಟ್ಟು, ಕಂಪ್ಯೂಟರ್ ಫ್ಲಾಪಿಗಳಲ್ಲಿ ಅಥವಾ ಡಿಸ್ಕ್‌ಗಳಲ್ಲಿ ಷೇರುದಾರರ ರಿಜಿಸ್ಟರನ್ನು ಇಡುವುದು ಅಭಿವೃದ್ಧಿ ಬ್ಯಾಂಕಿಗೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಭಾರತ ಸಾಕ್ಷ್ಯ ಅಧಿನಿಯಮ, 1872ರಲ್ಲಿ (1872ರ 1) ಏನೇ ಇದ್ದರೂ, ಈ ಸಂಬಂಧವಾಗಿ ಪ್ರಮಾಣೀಕರಿಸಲು ಅಧಿಕೃತನಾದ ಅಭಿವೃದ್ಧಿ ಬ್ಯಾಂಕಿನ ಒಬ್ಬ ಅಧಿಕಾರಿಯು ಸ್ವಹಸ್ತಾಕ್ಷರದಲ್ಲಿ ಯಥಾ ಪ್ರತಿಯೆಂದು ಪ್ರಮಾಣೀಕರಿಸಿದ ಷೇರುದಾರರ ರಿಜಿಸ್ಟರಿನ ಒಂದು ಪ್ರತಿಯು ಅಥವಾ ಅದರ ಉದ್ಧೃತ ಭಾಗವು ಎಲ್ಲಾ ಕಾನೂನು ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕದ್ದು.

**13ಬಿಎ. ಪ್ರಯೋಜನಕಾರಿ ಒಡೆಯರ ರಿಜಿಸ್ಟರು.–** ಠೇವಣಿ ಸ್ಥಾನಗಳ ಅಧಿನಿಯಮ, 1996ರ 11ನೇ ಪ್ರಕರಣದ ಮೇರೆಗೆ ಠೇವಣಿ ಸ್ಥಾನದ ಮೂಲಕ ನಿರ್ವಹಿಸಿಕೊಂಡು ಬರುವ ಪ್ರಯೋಜನಕಾರಿ ಒಡೆಯರ ರಿಜಿಸ್ಟರನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಷೇರುದಾರರ ರಿಜಿಸ್ಟರೆಂದು ಭಾವಿಸತಕ್ಕದ್ದು.

**13ಸಿ. ಷೇರುದಾರರ ರಿಜಿಸ್ಟರಿನಲ್ಲಿ ನ್ಯಾಸವನ್ನು ನಮೂದಿಸಬಾರದು.–** 13ಬಿ ಪ್ರಕರಣದಲ್ಲಿ ಏನೇ ಇದ್ದರೂ, ವ್ಯಕ್ತವಾದ, ಸೂಚ್ಯವಾದ ಅಥವಾ ಭಾವಿತವಾದ ಯಾವುದೇ ನ್ಯಾಸದ ಯಾವುದೇ ನೋಟೀಸನ್ನು ಷೇರುದಾರರ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದಲ್ಲ ಅಥವಾ ಅಭಿವೃದ್ಧಿ ಬ್ಯಾಂಕು ಅದನ್ನು ಸ್ವೀಕರಿಸಲು ಅವಕಾಶವಿರತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಪ್ರಯೋಜನಕಾರಿ ಒಡೆಯನ ಪರವಾಗಿ ನೋಂದಾಯಿತ ಒಡೆಯನೆಂದು ಅದು ಹೊಂದಿರುವ ಷೇರುಗಳ ಸಂಬಂಧದಲ್ಲಿ ಠೇವಣಿ ಸ್ಥಾನಕ್ಕೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** 13ಬಿ ಪ್ರಕರಣ, 13ಬಿಎ ಪ್ರಕರಣದ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ, "ಪ್ರಯೋಜನಕಾರಿ ಒಡೆಯ", "ಠೇವಣಿ ಸ್ಥಾನ" ಮತ್ತು "ನೋಂದಾಯಿತ ಒಡೆಯ" ಎಂಬ ಪದಾವಳಿಗಳು ಠೇವಣಿ ಸ್ಥಾನಗಳ ಅಧಿನಿಯಮ, 1996ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ), (ಇ) ಮತ್ತು (ಎಫ್) ಖಂಡಗಳಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**13ಡಿ. ಷೇರುಗಳ ವರ್ಗಾವಣೆಯ ನೋಂದಣಿಯನ್ನು ನಿರಾಕರಿಸಲು ಮಂಡಲಿಯ ಹಕ್ಕು.–** (1) ಮಂಡಲಿಯು ವರ್ಗಾವಣೆ ಪಡೆದವನ ಹೆಸರಿನಲ್ಲಿರುವ ಯಾವುದೇ ಷೇರುಗಳ ವರ್ಗಾವಣೆಯನ್ನು ಈ ಕೆಳಕಂಡ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ನೋಂದಾಯಿಸಲು ನಿರಾಕರಿಸಬಹುದೇ ಹೊರತು ಇತರ ಯಾವುದೇ ಕಾರಣದ ಮೇಲೆ ನಿರಾಕರಿಸಬಾರದು, ಎಂದರೆ:–

(ಎ) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಇತರ ಕಾನೂನಿನ ವಿನಿಯಮಗಳನ್ನು ಉಲ್ಲಂಘಿಸಿ, ಷೇರುಗಳನ್ನು ವರ್ಗಾವಣೆ ಮಾಡಿದ್ದರೆ;

(ಬಿ) ಷೇರುಗಳ ವರ್ಗಾವಣೆಯು ಅಭಿವೃದ್ಧಿ ಬ್ಯಾಂಕಿನ ಹಿತಾಸಕ್ತಿಗಳಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗಿದೆ ಎಂದು ಮಂಡಲಿಯು ಅಭಿಪ್ರಾಯಪಟ್ಟಿದ್ದರೆ;

(ಸಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಯಾವುದೇ ಇತರ ಪ್ರಾಧಿಕಾರದ ಆದೇಶದ ಮೂಲಕ ಷೇರುಗಳ ವರ್ಗಾವಣೆಯು ನಿಷೇಧಿತವಾಗಿದ್ದರೆ.

(2) ಮಂಡಲಿಯು, ಅಭಿವೃದ್ಧಿ ಬ್ಯಾಂಕಿನ ಷೇರುಗಳ ವರ್ಗಾವಣೆಯನ್ನು ನೋಂದಾಯಿಸುವ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪತ್ರವನ್ನು ತನ್ನಲ್ಲಿ ಇರಿಸಿದ್ದ ದಿನಾಂಕದಿಂದ ಎರಡು ತಿಂಗಳ ಮುಕ್ತಾಯಕ್ಕೆ ಮುಂಚೆ ಅಂಥ ವರ್ಗಾವಣೆಯನ್ನು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಕಾರಣಗಳ ಪೈಕಿ ಯಾವುದೇ ಕಾರಣದ ಮೇಲೆ ನಿರಾಕರಿಸಬಾರದೇ ಅಥವಾ ನಿರಾಕರಿಸಬೇಕೇ ಎಂಬ ಬಗ್ಗೆ ಸದ್ಭಾವನೆಯಿಂದ ತನ್ನ ಅಭಿಪ್ರಾಯವನ್ನು ತಳೆದಿದ್ದರಷ್ಟೇ ಅಲ್ಲ.–

(ಎ) ಅಂಥ ನೋಂದಣಿಯನ್ನು ನಿರಾಕರಿಸಬಾರದು, ಅಂಥ ನೋಂದಣಿಯನ್ನು ಮಾಡಬೇಕು ಎಂದು ತಾನು ಅಭಿಪ್ರಾಯಪಟ್ಟಿದ್ದರೆ ಸಹ; ಮತ್ತು

(ಬಿ) (1)ನೇ ಉಪ-ಪ್ರಕರಣದಲ್ಲಿ ನಮೂದಿಸಲಾದ ಕಾರಣಗಳ ಪೈಕಿ ಯಾವುದೇ ಕಾರಣದ ಮೇಲೆ ಅಂಥ ನೋಂದಣಿಯನ್ನು ನಿರಾಕರಿಸಬೇಕೆಂದು ತಾನು ಅಭಿಪ್ರಾಯ ಪಟ್ಟಿದ್ದರೆ ಸಹ

– ವರ್ಗಾವಣೆಕಾರನಿಗೆ ಮತ್ತು ವರ್ಗಾವಣೆ ಪಡೆದವನಿಗೆ ಲಿಖಿತ ನೋಟೀಸಿನ ಮೂಲಕ ಅದನ್ನು ತಿಳಿಸತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯು ಮಾಡಿದ ನಿರಾಕರಣೆಯ ಆದೇಶದ ವಿರುದ್ಧದ ಅಪೀಲನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಅವಕಾಶವಿರತಕ್ಕುದು ಮತ್ತು ಅಂಥ ಅಪೀಲನ್ನು ದಾಖಲ್ಮಾಡುವ ಮತ್ತು ಸುನಾವಣೆ ಮಾಡುವ ಪ್ರಕ್ರಿಯೆಯು ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗೆ ಅನುಸಾರವಾಗಿರತಕ್ಕದ್ದು.

**13ಇ. ಭಾರತ ನ್ಯಾಸಗಳ ಅಧಿನಿಯಮ, 1882ರ ಮೇರೆಗೆ ಷೇರುಗಳು ಭದ್ರತೆಗಳಾಗಿರುವುದು.–** ಭಾರತ ನ್ಯಾಸಗಳ ಅಧಿನಿಯಮ, 1882 (1882ರ 2) ರಲ್ಲಿ ಏನೇ ಇದ್ದರೂ, ಅಭಿವೃದ್ಧಿ ಬ್ಯಾಂಕಿನ ಷೇರುಗಳನ್ನು, ಸದರಿ ಅಧಿನಿಯಮದ 20ನೇ ಪ್ರಕರಣದಲ್ಲಿ ನಮೂದಿಸಿದ ಭದ್ರತೆಗಳೊಳಗೆ ಸೇರಿಸಲಾಗಿದೆಯೆಂದು ಭಾವಿಸತಕ್ಕುದು.

## ಅಧ್ಯಾಯ – IVಬಿ

## ಸಭೆಗಳು ಮತ್ತು ನಡವಳಿಗಳು

**13ಎಫ್. ವಾರ್ಷಿಕ ಸರ್ವಸದಸ್ಯರ ಸಭೆ.–** (1) ಅಭಿವೃದ್ಧಿ ಬ್ಯಾಂಕು, ಪ್ರತಿವರ್ಷ ಯಾವುದೇ ಇತರ ಸಭೆಗಳೇ ಅಲ್ಲದೆ, ಅದರ ವಾರ್ಷಿಕ ಸರ್ವಸದಸ್ಯರ ಸಭೆಯಂತೆ ಒಂದು ಸರ್ವಸದಸ್ಯರ ಸಭೆಯನ್ನು ನಡೆಸತಕ್ಕದ್ದು ಮತ್ತು ಆ ಸಭೆಯನ್ನು ಕರೆಯುವ ನೋಟೀಸುಗಳಲ್ಲಿ ಅಂಥ ಸಭೆ ಎಂದು ನಿರ್ದಿಷ್ಟಪಡಿಸತಕ್ಕದ್ದು; ಮತ್ತು ಒಂದು ವಾರ್ಷಿಕ ಸರ್ವಸದಸ್ಯರ ಸಭೆಯ ದಿನಾಂಕದ ಮತ್ತು ಅದರ

ಮುಂದಿನ ಸರ್ವಸದಸ್ಯರ ಸಭೆಯ ದಿನಾಂಕದ ನಡುವೆ ಹದಿನೈದಕ್ಕಿಂತ ಹೆಚ್ಚು ತಿಂಗಳುಗಳ ಅಂತರವಿರತಕ್ಕುದಲ್ಲ:

ಪರಂತು, ಅಭಿವೃದ್ಧಿ ಬ್ಯಾಂಕು, ವಂತಿಗೆ ಸ್ವೀಕರಿಸಲು ಸಾರ್ವಜನಿಕರಿಗೆ ಮೊದಲ ಬಾರಿಗೆ ಅದು ತನ್ನ ಷೇರುಗಳನ್ನು ಹಂಚಿಕೆ ಮಾಡಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗಾಗಿ ಮೊದಲ ಸರ್ವಸದಸ್ಯರ ಸಭೆಯನ್ನು ನಡೆಸಬಹುದು:

ಮತ್ತೂ ಪರಂತು, ಕೇಂದ್ರ ಸರ್ಕಾರವು, ಯಾವುದೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಯಾವ ಕಾಲದೊಳಗೆ ನಡೆಸಬೇಕಿತ್ತೋ ಆ ಕಾಲವನ್ನು, ಮೂರು ತಿಂಗಳುಗಳ ಅವಧಿಯನ್ನು ಮೀರದಂತೆ, ವಿಸ್ತರಿಸಬಹುದು.

(2) ಪ್ರತಿಯೊಂದು ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸಾರ್ವಜನಿಕ ರಜಾದಿನವಲ್ಲದ ದಿನದಂದು, ವ್ಯವಹಾರದ ವೇಳೆಯ ಅವಧಿಯಲ್ಲಿ ಕರೆಯತಕ್ಕದ್ದು ಮತ್ತು ಅದನ್ನು ಪ್ರಧಾನ ಕಚೇರಿಯಲ್ಲಾಗಲಿ ಅಥವಾ ಪ್ರಧಾನ ಕಚೇರಿಯು ಇರುವ ನಗರದ ಅಥವಾ ಪಟ್ಟಣದ ಒಳಗಿನ ಯಾವುದೇ ಇತರ ಕೆಲವು ಸ್ಥಳಗಳಲ್ಲಿ ನಡೆಸತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಾರ್ವಜನಿಕ ರಜಾದಿನ" ಎಂದರೆ ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರ ಅರ್ಥವ್ಯಾಪ್ತಿಯಲ್ಲಿ ಬರುವ ಒಂದು ಸಾರ್ವಜನಿಕ ರಜಾದಿನ:

ಪರಂತು, ಯಾವುದೇ ಸಭೆಗೆ ಸಂಬಂಧಿಸಿದಂತೆ ಯಾವುದೇ ಭಾನುವಾರವನ್ನು ಅಂಥ ಒಂದು ರಜಾದಿನವೆಂದು ಭಾವಿಸತಕ್ಕುದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಸಾರ್ವಜನಿಕ ರಜಾದಿನವೆಂದು ಘೋಷಿಸಿದ ಯಾವುದೇ ದಿನವನ್ನು, ಅಂಥ ಸಭೆಯನ್ನು ಕರೆಯುವ ನೋಟೀಸನ್ನು ಹೊರಡಿಸುವುದಕ್ಕಿಂತ ಮುಂಚೆ ಘೋಷಣೆಯನ್ನು ಅಧಿಸೂಚಿಸಿದ್ದ ಹೊರತು, ಯಾವುದೇ ಸಭೆಗೆ ಸಂಬಂಧಿಸಿದಂತೆ ಅಂಥ ಒಂದು ರಜಾದಿನವೆಂದು ಭಾವಿಸತಕ್ಕುದಲ್ಲ.

**13ಜಿ. ಮತದಾನದ ಹಕ್ಕನ್ನು ಚಲಾಯಿಸುವುದರ ಮೇಲೆ ನಿರ್ಬಂಧ.-** ಈಕ್ವಿಟಿ ಷೇರುಗಳನ್ನು ಹೊಂದಿರುವ ಅಭಿವೃದ್ಧಿ ಬ್ಯಾಂಕಿನ ಪ್ರತಿಯೊಬ್ಬ ಷೇರುದಾರನು, ಅಂಥ ಷೇರುಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ನಿರ್ಣಯದ ಮೇಲೆ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಮತದಾನದ ಮೇಲಿನ ಅವನ ಮತಹಾಕುವ ಹಕ್ಕು, ಅಭಿವೃದ್ಧಿ ಬ್ಯಾಂಕಿನ ಸಂದಾಯಿತ ಈಕ್ವಿಟಿ ಬಂಡವಾಳದಲ್ಲಿ ಅವನ ಷೇರುಗಳ ಪ್ರಮಾಣಕ್ಕನುಸಾರವಾಗಿರತಕ್ಕದ್ದು:

ಪರಂತು, ಆದಾಗ್ಯೂ, ಕೇಂದ್ರ ಸರ್ಕಾರದ ಹೊರತಾದ ಯಾವ ಷೇರುದಾರನು, ಹೊರಡಿಸಲಾದ ಈಕ್ವಿಟಿ ಬಂಡವಾಳದ ಶೇಕಡಾ ಹತ್ತರಷ್ಟಕ್ಕಿಂತ ಹೆಚ್ಚಿಗೆಯಾಗಿ ಅವನು ಹೊಂದಿರುವ ಯಾವುದೇ ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದಂತೆ ಮತದಾನದ ಹಕ್ಕನ್ನು ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**13ಎಚ್. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಮತ್ತು ಕಾರ್ಯವಿಧಾನ.-** (1) ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಷೇರುದಾರರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲು ಮತ್ತು ಅವುಗಳನ್ನು ಅಂಗೀಕರಿಸಲು ಹಕ್ಕು ಹೊಂದಿರತಕ್ಕುದು, ಎಂದರೆ.-

(ಎ) ಯಾವ ದಿನಾಂಕದಂದು ತನ್ನ ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಲಾಗಿದೆಯೋ ಅಥವಾ ಸಂತುಲನಗೊಳಿಸಲಾಗಿದೆಯೋ ಆ ದಿನಾಂಕದವರೆಗೆ ಸಿದ್ಧಪಡಿಸಿದ ಅಭಿವೃದ್ಧಿ ಬ್ಯಾಂಕಿನ ಆಯವ್ಯಯ ಪಟ್ಟಿ ಮತ್ತು ಲಾಭ ಮತ್ತು ನಷ್ಟ ಲೆಕ್ಕಪತ್ರಗಳು;

(ಬಿ) ಲೆಕ್ಕಪತ್ರಗಳಿಗೆ ಸಂಬಂಧಿಸಿದ ಅವಧಿಯಲ್ಲಿ ಅಭಿವೃದ್ಧಿ ಬ್ಯಾಂಕಿನ ಕಾರ್ಯನಿರ್ವಹಣಾ ವರದಿ;

(ಸಿ) ಆಯವ್ಯಯ ಪತ್ರ ಮತ್ತು ಲೆಕ್ಕಪತ್ರಗಳ ಮೇಲಿನ ಲೆಕ್ಕ ಪರಿಶೋಧಕರ ವರದಿ;

(ಡಿ) ಲಾಭಾಂಶ ಮತ್ತು ಮೀಸಲು ಬಂಡವಾಳೀಕರಣದ ಘೋಷಣೆಯ ಪ್ರಸ್ತಾವಗಳು.

(2) ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಷೇರುದಾರರು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸಭೆಗಳಲ್ಲಿ ವ್ಯವಹಾರ ನಡೆಯಬೇಕಾದ ಯಾವುದೇ ಇತರ ವಿಷಯಗಳನ್ನು ಸಹ ಚರ್ಚಿಸಬಹುದು.

(3) (ಎ) ಈ ಅಧಿನಿಯಮದ ಮೇರೆಗೆ ಯಾವ ರೀತಿಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆ ಅಥವಾ ಇತರ ಸಭೆಗಳು ನಡೆಯಬೇಕೋ ಆ ರೀತಿ ಮತ್ತು ಅದರಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ಮತದಾನದ ಹಕ್ಕುಗಳನ್ನು ಚಲಾಯಿಸಬಹುದಾದ ರೀತಿ ಮತ್ತು ನಿರ್ಣಯಗಳನ್ನು ಮಾಡಬಹುದಾದ ರೀತಿ; ಮತ್ತು

(ಸಿ) ಅಂಥ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವುದಕ್ಕಾಗಿನ ಕಾರ್ಯ ವಿಧಾನ ಮತ್ತು ಸಂಬಂಧಿತ ವಿಷಯಗಳು

– ಇವುಗಳಿಗೆ ಸಂಬಂಧಿಸಿದ ವಿಷಯಗಳು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – V
## ಅಭಿವೃದ್ಧಿ ಸಹಾಯ ನಿಧಿ

**14. ಅಭಿವೃದ್ಧಿ ಸಹಾಯ ನಿಧಿ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಭಿವೃದ್ಧಿ ಬ್ಯಾಂಕು, ಅಭಿವೃದ್ಧಿ ಸಹಾಯ ನಿಧಿ ಎಂದು ಕರೆಯಲಾಗುವ ಒಂದು ವಿಶೇಷ ನಿಧಿಯನ್ನು ಸ್ಥಾಪಿಸತಕ್ಕುದು.

**15. ಅಭಿವೃದ್ಧಿ ಸಹಾಯ ನಿಧಿಗೆ ಜಮೆಗಳು.–** ಅಭಿವೃದ್ಧಿ ಸಹಾಯ ನಿಧಿಗೆ,–

(ಎ) ಸರ್ಕಾರದಿಂದ ಅಥವಾ ಯಾವುದೇ ಇತರ ಮೂಲದಿಂದ ಸಾಲಗಳು, ದಾನಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳ ರೂಪದಲ್ಲಿ ಆ ನಿಧಿಯ ಉದ್ದೇಶಗಳಿಗಾಗಿ ಸ್ವೀಕರಿಸಿದ ಎಲ್ಲಾ ಮೊಬಲಗುಗಳು;

(ಬಿ) ನಿಧಿಯಿಂದ ಮಂಜೂರು ಮಾಡಿದ ಸಾಲಗಳು, ಮುಂಗಡಗಳು ಅಥವಾ ಇತರ ಸೌಲಭ್ಯಗಳ ಸಂಬಂಧದಲ್ಲಿನ ಮರು ಸಂದಾಯ ಅಥವಾ ವಸೂಲಿಗಳು;

(ಸಿ) ನಿಧಿಯಿಂದ ಮಾಡಲಾದ ಹೂಡಿಕೆಗಳಿಂದ ಬಂದ ಆದಾಯ ಅಥವಾ ಲಾಭಗಳು; ಮತ್ತು

(ಡಿ) 16ನೇ ಪ್ರಕರಣದ ಉಪಬಂಧಗಳ ಅನುಸರಣೆಯಲ್ಲಿ ನಿಧಿಯ ವಿನಿಯೋಗದ ಕಾರಣದಿಂದಾಗಿ ಬಡ್ಡಿಯ ರೂಪದಲ್ಲಿ ಅಥವಾ ಅನ್ಯಥಾ ನಿಧಿಗೆ ಒದಗಿಬಂದ ಅಥವಾ ಉಂಟಾಗುವ ಆದಾಯ

– ಇವುಗಳನ್ನು ಜಮೆ ಮಾಡತಕ್ಕುದು.

**16. ಅಭಿವೃದ್ಧಿ ಸಹಾಯ ನಿಧಿಯ ಬಳಕೆ.–** (1) ಅಭಿವೃದ್ಧಿ ಬ್ಯಾಂಕು, ಹಾಗೆ ಮಾಡುವುದು ಅವಶ್ಯ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಿದರೆ, (2) ಮತ್ತು (3)ನೇ ಉಪಪ್ರಕರಣದ

ಉಪಬಂಧಗಳಿಗೊಳಪಟ್ಟು, ಯಾವುದೇ ಸಾಲ ಅಥವಾ ಮುಂಗಡವನ್ನು ಮಂಜೂರು ಮಾಡುವ ಬಗ್ಗೆ ಅಥವಾ ಅದರ ಪರಿಣಾಮವಾಗಿ ಅಥವಾ 9ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡ ಅಥವಾ (ಇ) ಖಂಡ ಅಥವಾ (ಎಫ್) ಖಂಡ ಅಥವಾ (ಜಿ) ಖಂಡದ ಮೇರೆಗೆ ಮಾಡಿಕೊಂಡ ಯಾವುದೇ ವ್ಯವಸ್ಥೆಯ ಕಾರಣದಿಂದಾಗಿ ಅಥವಾ ಅದರ ಪರಿಣಾಮವಾಗಿ ಅಭಿವೃದ್ಧಿ ಸಹಾಯ ನಿಧಿಯಿಂದ ಯಾವುದೇ ಮೊಬಲಗನ್ನು ಬಟವಾಡೆ ಮಾಡಬಹುದು ಅಥವಾ ಖರ್ಚು ಮಾಡಬಹುದು:

ಪರಂತು, ಯಾವುದೇ ಕೈಗಾರಿಕಾ ಸಂಸ್ಥೆಗೆ ಯಾವುದೇ ಅಂಥ ಸಾಲ ಅಥವಾ ಮುಂಗಡವನ್ನು ಮಂಜೂರ್ಮಾಡುವುದಕ್ಕೆ ಅಥವಾ ಕೈಗಾರಿಕಾ ಸಂಸ್ಥೆಯೊಡನೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ಅಭಿವೃದ್ಧಿ ಬ್ಯಾಂಕು ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯನ್ನು ಪಡೆಯತಕ್ಕುದು.

(1ಎ) ಅಭಿವೃದ್ಧಿ ಬ್ಯಾಂಕು ಹಾಗೆ ಮಾಡುವುದು ಅವಶ್ಯ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಿದಲ್ಲಿ, ಅದು (2) ಮತ್ತು (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು 9ನೇ ಪ್ರಕರಣದ (1)ನೇ ಉಪಪ್ರಕರಣದ (ಎಲ್) ಖಂಡದಲ್ಲಿ ಅಥವಾ (ಎಂ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಅದಕ್ಕೂ ಹೆಚ್ಚಿನ ಉದ್ದೇಶಕ್ಕಾಗಿ ಯಾವುದೇ ಮೊಬಲಗನ್ನು ಅಭಿವೃದ್ಧಿ ಸಹಾಯ ನಿಧಿಯಿಂದ ಬಟವಾಡೆ ಮಾಡಬಹುದು ಅಥವಾ ಖರ್ಚು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಅನುಮೋದನೆಯನ್ನು ಕೋರುವುದಕ್ಕೆ ಮುಂಚೆ, ಅಭಿವೃದ್ಧಿ, ಬ್ಯಾಂಕಿಂಗ್ ಅಥವಾ ಇತರ ಹಣಕಾಸು ಸಂಸ್ಥೆಗಳು ಅಥವಾ ಇತರ ಏಜೆನ್ಸಿಗಳು ಕೈಗಾರಿಕಾ ಸಂಸ್ಥೆಗೆ ಅಂಥ ಸಾಲ ಅಥವಾ ಮುಂಗಡವನ್ನು ಮಂಜೂರು ಮಾಡುವ ಅಥವಾ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಕೈಗಾರಿಕಾ ಸಂಸ್ಥೆಯೊಂದಿಗೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಅಂಥ ವ್ಯವಸ್ಥೆಯನ್ನು ಮಾಡಿಕೊಳ್ಳುವ ಸಂಭವವಿಲ್ಲವೆಂದು ಮನದಟ್ಟು ಮಾಡಿಕೊಳ್ಳತಕ್ಕುದು.

(3) ಕೇಂದ್ರ ಸರ್ಕಾರವು ತನ್ನ ಅನುಮೋದನೆಯನ್ನು ಕೊಡುವುದಕ್ಕೆ ಮುಂಚೆ, ಅದು, ಅಂಥ ಸಾಲ, ಮುಂಗಡ ಅಥವಾ ವ್ಯವಸ್ಥೆಯು ದೇಶದ ಕೈಗಾರಿಕಾ ಅಭಿವೃದ್ಧಿಯ ಹಿತದೃಷ್ಟಿಯಿಂದ ಆದ್ಯತೆಯ ವಿಷಯವಾಗಿ ಅವಶ್ಯವೆಂಬುದನ್ನು ಮನದಟ್ಟು ಮಾಡಿಕೊಳ್ಳತಕ್ಕುದು.

(4) ಸಂದೇಹಗಳ ನಿವಾರಣೆಗಾಗಿ ಈ ಪ್ರಕರಣದಲ್ಲಿ ಅಡಕವಾಗಿರುವುದಾವುದೂ, ಅಭಿವೃದ್ಧಿ ಬ್ಯಾಂಕು, ಅದಕ್ಕೆ ಸಂಬಂಧಿಸಿದಂತೆ ಯಾವುದೇ ಮೊಬಲಗನ್ನು ಅಭಿವೃದ್ಧಿ ಸಹಾಯ ನಿಧಿಯಿಂದ ಬಟವಾಡೆ ಅಥವಾ ಖರ್ಚು ಮಾಡಬೇಕಾಗಿಲ್ಲದಿದ್ದರೆ, ಕೇಂದ್ರ ಸರ್ಕಾರದ ಅನುಮೋದನೆ ಪಡೆಯದೆ 9ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡ ಅಥವಾ (ಇ) ಖಂಡ ಅಥವಾ (ಎಫ್) ಖಂಡ ಅಥವಾ (ಜಿ) ಖಂಡದ ಮೇರೆಗೆ ಯಾವುದೇ ಸಾಲ ಅಥವಾ ಮುಂಗಡವನ್ನು ಮಂಜೂರ್ಮಾಡುವುದರಿಂದ ಅಥವಾ ಯಾವುದೇ ವ್ಯವಸ್ಥೆಯನ್ನು ಮಾಡಿಕೊಳ್ಳುವುದರಿಂದ ಅದನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**17. ಅಭಿವೃದ್ಧಿ ಸಹಾಯ ನಿಧಿಗೆ ಖರ್ಚುಗಳು.-** (1) ಅಭಿವೃದ್ಧಿ ಸಹಾಯ ನಿಧಿಗೆ, -

(ಎ) 16ನೇ ಪ್ರಕರಣದ (1) ರಿಂದ (3) ರವರೆಗಿನ ಉಪಪ್ರಕರಣಗಳ ಮೇರೆಗೆ ಕಾಲಕಾಲಕ್ಕೆ ಬಟವಾಡೆ ಅಥವಾ ಖರ್ಚು ಮಾಡಬಹುದಾದಂಥ ಮೊಬಲಗುಗಳು;

(ಬಿ) ಆ ನಿಧಿಯ ಉದ್ದೇಶಗಳಿಗಾಗಿ ಸ್ವೀಕರಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಹೊಣೆಗಳನ್ನು ತೀರಿಸುವುದಕ್ಕಾಗಿ ಅಗತ್ಯವಾಗಬಹುದಾದಂಥ ಮೊಬಲಗುಗಳು;

(ಸಿ) ಆ ನಿಧಿಯಿಂದ ಮಾಡಿದ ಹೂಡಿಕೆಯ ಕಾರಣದಿಂದ ಉದ್ಭವಿಸುವ ಯಾವುದೇ ನಷ್ಟ; ಮತ್ತು

(ಡಿ) ಮಂಡಲಿಯು ನಿರ್ಧರಿಸಬಹುದಾದಂಥ ನಿಧಿಯ ಆಡಳಿತ ಮತ್ತು ವಿನಿಯೋಗದಿಂದ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಿಸಿದಂತೆ ಅಂಥ ವೆಚ್ಚ

– ಇವುಗಳನ್ನು ಖರ್ಚು ಹಾಕತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು, ಇತರ ಯಾವುದೇ ಮೊಬಲಗನ್ನು ಅಭಿವೃದ್ಧಿ ಸಹಾಯಕ ನಿಧಿಗೆ ಖರ್ಚು ಹಾಕತಕ್ಕುದಲ್ಲ.

**18. ಅಭಿವೃದ್ಧಿ ಸಹಾಯ ನಿಧಿಯ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಅಭಿವೃದ್ಧಿ ಸಹಾಯ ನಿಧಿಯ ಆಯವ್ಯಯ ಪತ್ರ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ತಯಾರಿಸತಕ್ಕುದು.

(2) ಮಂಡಲಿಯು ನಿಧಿಯ ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಪ್ರತಿ ವರ್ಷ ಜೂನ್ 30ನೇ ದಿವಸದಂದು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ಇತರ ದಿನಾಂಕದಂದು ಇರುವಂತೆ ಮುಕ್ತಾಯಗೊಳಿಸುವಂತೆ ಮತ್ತು ಸರಿದೂಗಿಸುವಂತೆ ಮಾಡತಕ್ಕುದು.

(3) 23ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ಬ್ಯಾಂಕು ನೇಮಕ ಮಾಡಿದ ಒಬ್ಬರು ಅಥವಾ ಹೆಚ್ಚಿನ ಲೆಕ್ಕ ಪರಿಶೋಧಕರು ಆ ನಿಧಿಯನ್ನು ಲೆಕ್ಕ ಪರಿಶೋಧನೆ ಮಾಡತಕ್ಕುದು ಮತ್ತು ಅವರು ಅದರ ಬಗ್ಗೆ ಪ್ರತ್ಯೇಕ ವರದಿಯನ್ನು ಕೊಡತಕ್ಕುದು.

(4) 23ನೇ ಪ್ರಕರಣದ (2), (3), (4) ಮತ್ತು (6)ನೇ ಉಪಪ್ರಕರಣಗಳ ಉಪಬಂಧಗಳು ಆದಷ್ಟು ಮಟ್ಟಿಗೆ ಅಭಿವೃದ್ಧಿ ಸಹಾಯ ನಿಧಿಯ ಪರಿಶೋಧನೆಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕುದು.

(5) ಅಭಿವೃದ್ಧಿ ಬ್ಯಾಂಕು, ನಿಧಿಯ ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿದ ಮತ್ತು ಸರಿದೂಗಿಸಿದ ದಿನಾಂಕದಿಂದ ನಾಲ್ಕು ತಿಂಗಳೊಳಗಾಗಿ ಕೇಂದ್ರ ಸರ್ಕಾರಕ್ಕೆ ಲೆಕ್ಕಪರಿಶೋಧಕನ ವರದಿಯ ಪ್ರತಿಯೊಂದಿಗೆ ಆಯವ್ಯಯ ಪತ್ರದ ಮತ್ತು ಲೆಕ್ಕಪತ್ರಗಳ ಪ್ರತಿಯನ್ನು ಮತ್ತು ಸಂಬಂಧಪಟ್ಟ ವರ್ಷದಲ್ಲಿ ನಿಧಿಯ ಪ್ರವರ್ತನೆಯ ಬಗ್ಗೆ ವರದಿಯನ್ನು ಸಲ್ಲಿಸತಕ್ಕುದು. ಮತ್ತು ಕೇಂದ್ರ ಸರ್ಕಾರವು, ಅವುಗಳನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದನ್ನು ಇಡುವಂತೆ ಮಾಡತಕ್ಕುದು.

**19. ಅಭಿವೃದ್ಧಿ ಸಹಾಯ ನಿಧಿಯ ಸಮಾಪನ.–** ಅಭಿವೃದ್ಧಿ ಸಹಾಯ ನಿಧಿಯನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕ ಅಲ್ಲದೆ ಮತ್ತು ಆ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಲ್ಲದೆ ಮುಕ್ತಾಯಗೊಳಿಸತಕ್ಕುದಲ್ಲ ಅಥವಾ ಪರಿಸಮಾಪನಗೊಳಿಸತಕ್ಕುದಲ್ಲ.

# ಅಧ್ಯಾಯ - VI
## ಸಾಮಾನ್ಯ ನಿಧಿ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**20. ಸಾಮಾನ್ಯ ನಿಧಿ.-** ಈ ಅಧಿನಿಯಮದ ಮೇರೆಗೆ ಅಭಿವೃದ್ಧಿ ಸಹಾಯ ನಿಧಿಗೆ ಜಮೆ ಮಾಡಬೇಕಾದಂಥವುಗಳನ್ನು ಹೊರತುಪಡಿಸಿ, ಅಭಿವೃದ್ಧಿ ಬ್ಯಾಂಕಿನ ಇತರ ಎಲ್ಲಾ ಸ್ವೀಕೃತಿಗಳನ್ನು ಸಾಮಾನ್ಯ ನಿಧಿ ಎಂದು ಕರೆಯಲಾಗುವ ನಿಧಿಗೆ ಜಮೆ ಮಾಡತಕ್ಕುದು ಮತ್ತು ಅಭಿವೃದ್ಧಿ ಸಹಾಯ ನಿಧಿಗೆ ಖರ್ಚು ಹಾಕಬೇಕಾದಂಥವುಗಳನ್ನು ಹೊರತುಪಡಿಸಿ, ಅಭಿವೃದ್ಧಿ ಬ್ಯಾಂಕು ಮಾಡಬೇಕಾದ ಎಲ್ಲ ಸಂದಾಯಗಳನ್ನೂ ಸಾಮಾನ್ಯ ನಿಧಿಯಿಂದ ಮಾಡತಕ್ಕುದು.

**21. ಲೆಕ್ಕಪತ್ರಗಳ ಮತ್ತು ಆಯವ್ಯಯ ಪಟ್ಟಿಯ ತಯಾರಿಕೆ.-** (1) ಅಭಿವೃದ್ಧಿ ಬ್ಯಾಂಕಿನ ಆಯವ್ಯಯ ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ತಯಾರಿಸತಕ್ಕುದು.

(2) ಮಂಡಲಿಯು, ಅಭಿವೃದ್ಧಿ ಬ್ಯಾಂಕಿನ ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಪ್ರತಿ ವರ್ಷ ಜೂನ್ 30ನೇ ದಿವಸದಂದು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ಇತರ ದಿನಾಂಕದಂದು ಇರುವಂತೆ ಮುಕ್ತಾಯಗೊಳಿಸುವಂತೆ ಮತ್ತು ಸರಿದೂಗಿಸುವಂತೆ ಮಾಡತಕ್ಕುದು:

ಪರಂತು, ಈ ಪ್ರಕರಣದ ಮೇರೆಗೆ ಒಂದು ಲೆಕ್ಕದ ಅವಧಿಯನ್ನು ಇನ್ನೊಂದು ಲೆಕ್ಕದ ಅವಧಿ ಬದಲಾಯಿಸಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶದ ಮೂಲಕ, ಸಂಬಂಧಪಟ್ಟ ವರ್ಷಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಮತ್ತು ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸುವುದಕ್ಕಾಗಿ ಮತ್ತು ಸರಿದೂಗಿಸುವುದಕ್ಕಾಗಿ ಅಥವಾ ಇತರ ವಿಷಯಗಳಿಗಾಗಿ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಪರ್ಯಾಲೋಚಿಸುವಂಥ ಉಪಬಂಧಗಳನ್ನು ಕಲ್ಪಿಸಬಹುದು.

**22. ಸಾಮಾನ್ಯ ನಿಧಿಗೆ ಒದಗಿಬಂದ ಲಾಭಗಳ ವಿಲೆ.-** (1) ಅಭಿವೃದ್ಧಿ ಬ್ಯಾಂಕು ಮೀಸಲು ನಿಧಿಯನ್ನು ಸ್ಥಾಪಿಸಬಹುದು, ಅದಕ್ಕೆ ಸಾಮಾನ್ಯ ನಿಧಿಗೆ ಒದಗಿ ಬರುವ ವಾರ್ಷಿಕ ಲಾಭಗಳಿಂದ ಆ ಬ್ಯಾಂಕು ಸೂಕ್ತವೆಂದು ಭಾವಿಸುವಂಥ ಮೊತ್ತಗಳನ್ನು ವರ್ಗಾವಣೆ ಮಾಡಬಹುದು.

(2) ವಸೂಲಾಗದ ಮತ್ತು ಸಂದೇಹಾಸ್ಪದ ಋಣಗಳು, ಆಸ್ತಿಗಳ ಸವಕಳಿಗಾಗಿ ಮತ್ತು ಯಾವ ವಿಷಯಗಳಿಗಾಗಿ ವ್ಯವಸ್ಥೆಯನ್ನು ಮಾಡುವುದು ಅವಶ್ಯ ಅಥವಾ ವಿಹಿತವಾಗಿರುವುದೋ ಅಥವಾ ಯಾವ ವಿಷಯಗಳಿಗಾಗಿ ಬ್ಯಾಂಕರುಗಳು ಸಾಮಾನ್ಯವಾಗಿ ವ್ಯವಸ್ಥೆ ಮಾಡುವರೋ ಆ ಎಲ್ಲಾ ವಿಷಯಗಳಿಗಾಗಿ ಮತ್ತು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮೀಸಲು ನಿಧಿಗಾಗಿ ವ್ಯವಸ್ಥೆಯನ್ನು ಮಾಡಿದ ತರುವಾಯ, ಮತ್ತು ಯುಕ್ತವೆಂದು ಪರಿಗಣಿಸಬಹುದಾದಂಥ ಇತರ ಮೀಸಲುಗಳು ಅಥವಾ ನಿಧಿಗಳಿಗೆ ಲಾಭದ ಒಂದು ಭಾಗವನ್ನು ವರ್ಗಾಯಿಸಿದ ತರುವಾಯ, ಮಂಡಲಿಯು ತನ್ನ ನಿವ್ವಳ ಲಾಭದ ಪೈಕಿ ಲಾಭಾಂಶವನ್ನು ಘೋಷಿಸಬಹುದು.

**23. ಲೆಕ್ಕ ಪರಿಶೋಧನೆ.-** (1) ಕಂಪನಿಗಳ ಅಧಿನಿಯಮ, 1956 (1956ರ 1)ರ 226ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಸೂಕ್ತ ಅರ್ಹತೆಯುಳ್ಳ ಲೆಕ್ಕಪರಿಶೋಧಕರು ಅಭಿವೃದ್ಧಿ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು

ಮತ್ತು ಅವರನ್ನು ರಿಸರ್ವ್ ಬ್ಯಾಂಕ್ ನಿಗದಿಪಡಿಸಬಹುದಾದಂಥ ಅವಧಿಗೆ ಮತ್ತು ಅಂಥ ಪರಿಶ್ರಮಧನದ ಮೇಲೆ, ರಿಸರ್ವ್ ಬ್ಯಾಂಕು ಅನುಮೋದಿಸಿದ ಲೆಕ್ಕ ಪರಿಶೋಧಕರ ಪಟ್ಟಿಯೊಳಗಿಂದ ಷೇರುದಾರರ ಸರ್ವಸದಸ್ಯರ ಸಭೆಯಲ್ಲಿ ಅಭಿವೃದ್ಧಿ ಬ್ಯಾಂಕು ನೇಮಕ ಮಾಡತಕ್ಕುದ್ದು.

(2) ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ಆಯವ್ಯಯ ಪಟ್ಟಿಯ ಪ್ರತಿಯನ್ನು ಲೆಕ್ಕಪರಿಶೋಧಕರಿಗೆ ಒದಗಿಸತಕ್ಕುದು ಮತ್ತು ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ಓಚರುಗಳೊಡನೆ ಅದನ್ನು ಪರೀಕ್ಷಿಸುವುದು ಅವರ ಕರ್ತವ್ಯವಾಗಿರತಕ್ಕುದು ಮತ್ತು ಅಭಿವೃದ್ಧಿ ಬ್ಯಾಂಕು ಇಟ್ಟಿರುವ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಅವರಿಗೆ ವಶಾವಣೆ ಮಾಡತಕ್ಕುದು ಮತ್ತು ಅವರು ಎಲ್ಲಾ ಯುಕ್ತ ಕಾಲಗಳಲ್ಲಿ ಅಭಿವೃದ್ಧಿ ಬ್ಯಾಂಕಿನ ಪುಸ್ತಕಗಳು, ಲೆಕ್ಕಪತ್ರಗಳು, ಓಚರುಗಳು ಮತ್ತು ಇತರ ದಸ್ತಾವೇಜುಗಳನ್ನು ನೋಡಲು ಅವಕಾಶಗಳನ್ನು ಹೊಂದಿರತಕ್ಕುದು.

(3) ಲೆಕ್ಕಪರಿಶೋಧಕರು ಅಂಥ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಬ್ಯಾಂಕಿನ ಯಾರೇ ನಿರ್ದೇಶಕ ಅಥವಾ ಯಾರೇ ಅಧಿಕಾರಿ ಅಥವಾ ಇತರ ನಿಯೋಜಿತನನ್ನು ಪರೀಕ್ಷಿಸಬಹುದು ಮತ್ತು ಅಭಿವೃದ್ಧಿ ಬ್ಯಾಂಕಿನ ಮಂಡಲಿ ಅಥವಾ ಅಧಿಕಾರಿಗಳು ಅಥವಾ ನಿಯೋಜಿತರಿಂದ ಅವರ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಅಗತ್ಯವೆಂದು ಅವರು ಯೋಚಿಸಬಹುದಾದಂಥ ಮಾಹಿತಿ ಮತ್ತು ವಿವರಣೆಯನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕುದು.

(4) ಲೆಕ್ಕಪರಿಶೋಧಕರು, ತಾವು ಪರೀಕ್ಷಿಸಿದ ವಾರ್ಷಿಕ ಆಯವ್ಯಯಪಟ್ಟಿ ಮತ್ತು ಲೆಕ್ಕಗಳ ಬಗ್ಗೆ ಅಭಿವೃದ್ಧಿ ಬ್ಯಾಂಕಿಗೆ ವರದಿ ಮಾಡತಕ್ಕುದು ಮತ್ತು ಅಂಥ ಪ್ರತಿಯೊಂದು ವರದಿಯಲ್ಲಿ ಆ ಆಯವ್ಯಯ ಪಟ್ಟಿಯು ಅವರ ಅಭಿಪ್ರಾಯದಲ್ಲಿ ಅವಶ್ಯವಾದ ಎಲ್ಲಾ ವಿವರಗಳನ್ನೊಳಗೊಂಡಿದೆ ಎಂಬುದನ್ನು ಮತ್ತು ಅಭಿವೃದ್ಧಿ ಬ್ಯಾಂಕಿನ ವ್ಯವಹಾರದ ನಿಜವಾದ ಮತ್ತು ದೋಷರಹಿತವಾದ ಅವಲೋಕನವನ್ನು ತೋರಿಸುವ ಬಗ್ಗೆ ಬರೆಯಲಾಗಿದೆಯೇ ಎಂಬುದನ್ನು ಮತ್ತು ಅವರು ಮಂಡಲಿಯಿಂದ ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವನೇ ಅಧಿಕಾರಿ ಅಥವಾ ಇತರ ನೌಕರನಿಂದ ಯಾವುದೇ ವಿವರಣೆ ಅಥವಾ ಮಾಹಿತಿಯನ್ನು ಕೇಳಿದ್ದ ಸಂದರ್ಭದಲ್ಲಿ ಅದನ್ನು ಕೊಡಲಾಗಿದೆಯೇ ಮತ್ತು ಅದು ಸಮಾಧಾನಕರವಾಗಿದೆಯೇ ಎಂಬುದನ್ನು ಅವರು ನಿರೂಪಿಸತಕ್ಕುದು.

(5) ಅಭಿವೃದ್ಧಿ ಬ್ಯಾಂಕು, ವಾರ್ಷಿಕ ಸರ್ವ ಸದಸ್ಯರ ಸಭೆಯು ನಡೆದ ದಿನಾಂಕದಿಂದ ಒಂದು ತಿಂಗಳೊಳಗೆ ಲೆಕ್ಕ ಪರಿಶೋಧಕರ ವರದಿ ಮತ್ತು ಸಂಬಂಧಪಟ್ಟ ವರ್ಷದಲ್ಲಿ ಅಭಿವೃದ್ಧಿ ಬ್ಯಾಂಕಿನ ಕೆಲಸದ ಬಗೆಗಿನ ವರದಿಯ ಒಂದು ಪ್ರತಿಯೊಂದಿಗೆ, ಅದರ ಆಯವ್ಯಯಪಟ್ಟಿ ಮತ್ತು ಲೆಕ್ಕಪತ್ರಗಳ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕುದು. ಮತ್ತು ಕೇಂದ್ರ ಸರ್ಕಾರವು, ಅವುಗಳನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗ ಅವುಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಂಡಿಸತಕ್ಕುದು.

(6) ಹಿಂದಿನ ಉಪಪ್ರಕರಣಗಳಲ್ಲಿ ಒಳಗೊಂಡ ಯಾವುದಕ್ಕೂ ಪ್ರತಿಕೂಲವಾಗದಂತೆ, ಕೇಂದ್ರ ಸರ್ಕಾರವು, ಅಭಿವೃದ್ಧಿ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಮತ್ತು ಅದರ ಬಗ್ಗೆ ವರದಿ ಮಾಡಲು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನನ್ನು ಯಾವುದೇ ಕಾಲದಲ್ಲಿ ನೇಮಕ ಮಾಡಬಹುದು ಮತ್ತು ಅಂಥ ಪರೀಕ್ಷೆ ಮತ್ತು ವರದಿಯ ಸಂಬಂಧದಲ್ಲಿ ಅವನು ವಹಿಸಿದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಗೆ ಅಭಿವೃದ್ಧಿ ಬ್ಯಾಂಕು ಸಂದಾಯ ಮಾಡತಕ್ಕುದು.

**24. ಉಳಿಸುವಿಕೆ.–** 18ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು ಈ ಅಧ್ಯಾಯದಲ್ಲಿ ಅಡಕವಾಗಿರುವುದಾವುದೂ, ಅಭಿವೃದ್ಧಿ ಸಹಾಯ ನಿಧಿಗೆ ಅನ್ವಯವಾಗತಕ್ಕುದಲ್ಲ.

## ಅಧ್ಯಾಯ – VII
## ಉದ್ಯಮಕ್ಕಾಗಿ ಪುನಃ ಹಣ ಒದಗಿಸುವ ನಿಗಮದ ವ್ಯವಹಾರದ ವರ್ಗಾವಣೆ

**25. ಉದ್ಯಮಕ್ಕಾಗಿ ಪುನಃ ಹಣ ಒದಗಿಸುವ ನಿಗಮದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಪುನಃ ಹಣ ಒದಗಿಸುವ ನಿಗಮ ಪರಿಮಿತದ (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ 'ಆ ಕಂಪನಿ' ಎಂದು ಉಲ್ಲೇಖಿಸಲಾಗಿದೆ) ಎಲ್ಲ ವ್ಯವಹಾರ, ಸ್ವತ್ತು, ಆಸ್ತಿ, ಹೊಣೆಗಾರಿಕೆಗಳು, ಹಕ್ಕುಗಳು, ಹಿತಾಸಕ್ತಿಗಳು, ವಿಶೇಷಾಧಿಕಾರಗಳು ಮತ್ತು ಬಾಧ್ಯತೆಗಳು – ಅವುಗಳು ಯಾವುದೇ ಸ್ವರೂಪದ್ದಾಗಿರಲಿ – ಇವುಗಳನ್ನೊಳಗೊಂಡ ಉದ್ಯಮವು ಅಭಿವೃದ್ಧಿ ಬ್ಯಾಂಕಿಗೆ ವರ್ಗಾಯಿತವಾಗತಕ್ಕುದು ಮತ್ತು ಅದರಲ್ಲಿ ನಿಹಿತವಾಗತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಕಂಪನಿಯ ಕೈಗಾರಿಕೆಯನ್ನು ಅಭಿವೃದ್ಧಿ ಬ್ಯಾಂಕು ವರ್ಗಾವಣೆ ಮಾಡಿದ್ದಕ್ಕಾಗಿನ ನಷ್ಟ ಪರಿಹಾರವಾಗಿ ಅಭಿವೃದ್ಧಿ ಬ್ಯಾಂಕು ಕಂಪನಿಗೆ ನಗದಾಗಿ ಕಂಪನಿಯ ಒಟ್ಟು ಸಂದಾಯವಾದ ಬಂಡವಾಳಕ್ಕೆ ಸಮನಾದ ಮೊಬಲಗನ್ನು ಕಂಪನಿಯ ಷೇರುದಾರರಿಗೆ ಸಂದಾಯ ಮಾಡಿದ ಅಂಥ ಬಂಡವಾಳಕ್ಕೆ ಅವರು ಕೊಟ್ಟ ವಂತಿಗೆಯ ಪ್ರಮಾಣದಲ್ಲಿ ಹಂಚುವ ಉದ್ದೇಶಕ್ಕಾಗಿ ಸಂದಾಯ ಮಾಡತಕ್ಕುದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅಸ್ತಿತ್ವದಲ್ಲಿರುವ, ಜಾರಿಯಲ್ಲಿರುವ ಮತ್ತು ಕಂಪನಿಯು ಒಂದು ಪಕ್ಷಕಾರವಾಗಿರುವಂಥ ಅಥವಾ ಆ ಕಂಪನಿಯ ಹೆಸರಿನಲ್ಲಿರುವಂಥ ಎಲ್ಲಾ ಕರಾರುಗಳು, ಪತ್ರಗಳು, ಬಾಂಡುಗಳು, ಒಪ್ಪಂದಗಳು, ಮುಖ್ತ್ಯಾರನಾಮೆಗಳು, ಕಾನೂನು ಪ್ರಾತಿನಿಧ್ಯದ ಪತ್ರಗಳು ಮತ್ತು ಯಾವುದೇ ಸ್ವರೂಪದ ಇತರ ಲಿಖಿತಗಳು, ಸಂದರ್ಭಾನುಸಾರ, ಅಭಿವೃದ್ಧಿ ಬ್ಯಾಂಕಿನ ವಿರುದ್ಧ ಅಥವಾ ಅದರ ಪರವಾಗಿ ಪೂರ್ಣವಾಗಿ ಜಾರಿಯಲ್ಲಿರತಕ್ಕುದು ಮತ್ತು ಅದಕ್ಕೆ ಕಂಪನಿಯ ಬದಲಾಗಿ ಅಭಿವೃದ್ಧಿ ಬ್ಯಾಂಕು ಒಂದು ಪಕ್ಷಕಾರನಾಗಿದ್ದಿದ್ದರೆ ಹೇಗೋ ಹಾಗೆ ಅಥವಾ ಅವುಗಳನ್ನು ಅಭಿವೃದ್ಧಿ ಬ್ಯಾಂಕಿನ ಹೆಸರಿಗೆ ಹೊರಡಿಸಲಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕುದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ದಿನಾಂಕದಂದು, ಕಂಪನಿಯಿಂದ ಅಥವಾ ಕಂಪನಿಗೆ ವಿರುದ್ಧವಾಗಿ ಯಾವುದೇ ದಾವೆ, ಅಪೀಲು ಅಥವಾ ಯಾವುದೇ ಸ್ವರೂಪದ ಇತರ ಕಾನೂನು ವ್ಯವಹರಣೆ ಇತ್ಯರ್ಥದಲ್ಲಿದ್ದರೆ, ಅದು ಕಂಪನಿಯ ಉದ್ಯಮವನ್ನು ಅಭಿವೃದ್ಧಿ ಬ್ಯಾಂಕಿಗೆ ವರ್ಗಾವಣೆ ಮಾಡಿದ ಕಾರಣದಿಂದಾಗಿ ಅಥವಾ ಈ ಅಧಿನಿಯಮದಲ್ಲಿ ಅಡಕವಾದ ಯಾವುದೇ ವಿಷಯದ ಕಾರಣದಿಂದಾಗಿ ಕೊನೆಗೊಳ್ಳತಕ್ಕುದಲ್ಲ, ಅದನ್ನು ಮುಂದುವರೆಸದೆ ಇರತಕ್ಕುದಲ್ಲ ಅಥವಾ ಯಾವುದೇ ಇತರ ರೀತಿಯಲ್ಲಿ ಅದಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕುದಲ್ಲ ಆದರೆ, ಆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ಅಭಿವೃದ್ಧಿ ಬ್ಯಾಂಕಿನ ಪರವಾಗಿ ಅಥವಾ ಅದರ ವಿರುದ್ಧವಾಗಿ ಮುಂದುವರಿಸಬಹುದು, ನಡೆಸಬಹುದು ಮತ್ತು ಜಾರಿಗೆ ತರಬಹುದು.

(5) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ದಿನಾಂಕದಂದೇ ಆಗಲಿ ಅಥವಾ ತರುವಾಯವೇ ಆಗಲಿ ಕಂಪನಿಯ ವ್ಯವಹಾರಗಳನ್ನು ಪರಿಸಮಾಪನಗೊಳಿಸುವ ಮತ್ತು ಅದರ ಆಸ್ತಿಗಳನ್ನು ಹಂಚುವ ಉದ್ದೇಶಕ್ಕಾಗಿ ಅದರ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ಯೋಗ್ಯ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅಂಥ ನೇಮಕದ ಜೊತೆಯಲ್ಲಿಯೇ ಕೇಂದ್ರ ಸರ್ಕಾರವು ಹಿಂದೆ ಹೇಳಿದ ಉದ್ದೇಶಕ್ಕಾಗಿ ಕಂಪನಿಯ ವ್ಯವಸ್ಥಾಪನೆಯಲ್ಲಿರುವ ವ್ಯಕ್ತಿಯು ಅನುಸರಿಸಬೇಕಾದ ನಿರ್ದೇಶನಗಳನ್ನು ಕೊಡಬಹುದು ಮತ್ತು ಆ ತರುವಾಯ,-

(ಎ) ಕಂಪನಿಗಳ ಅಧಿನಿಯಮ, 1956 (1956ರ 1)ರ ಉಪಬಂಧಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಯಾವುದೇ ಅಂಥ ಅಧಿನಿಯಮ ಅಥವಾ ಇತರ ಕಾನೂನಿನ ಕಾರಣದಿಂದಾಗಿ ಜಾರಿಯಲ್ಲಿರುವ ಯಾವುದೇ ಲಿಖಿತವು ಅಂಥ ನಿರ್ದೇಶನಗಳೊಂದಿಗೆ ಅವು ಅಸಂಗತವಾಗಿರುವಷ್ಟರ ಮಟ್ಟಿಗೆ ಕಂಪನಿಗೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅನ್ವಯವಾಗುವುದು ನಿಂತುಹೋಗತಕ್ಕುದು.

(ಬಿ) ಅಂಥ ನಿರ್ದೇಶನಗಳನ್ನು ಹೊರಡಿಸುವುದಕ್ಕೆ ನಿಕಟ ಪೂರ್ವದಲ್ಲಿ, ಕಂಪನಿಯ ವ್ಯವಸ್ಥಾಪಕ ಅಥವಾ ನಿರ್ದೇಶಕನ ಪದವನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿಯನ್ನು ಒಳಗೊಂಡು ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ಎಲ್ಲ ವ್ಯಕ್ತಿಗಳೂ ಹಾಗೆಂದು ಅವರ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕುದು;

(ಸಿ) ಆ ಕಂಪನಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ನೇಮಕಗೊಂಡ ವ್ಯಕ್ತಿಯು, ಆ ನಿರ್ದೇಶನಗಳಿಗನುಸಾರವಾಗಿ, ಅದರ ವ್ಯವಹಾರಗಳನ್ನು ಪರಿಸಮಾಪನಗೊಳಿಸಲು ಮತ್ತು ಅದರ ಆಸ್ತಿಗಳನ್ನು ಹಂಚಲು ಅನುಕೂಲವಾಗಲು ಅವಶ್ಯಕವಾಗಬಹುದಾದಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕುದು.

(6) ಕಂಪನಿಯ ವ್ಯವಹಾರಗಳನ್ನು ಪರಿಸಮಾಪನಗೊಳಿಸುವುದಕ್ಕೆ ಹೆಚ್ಚಿಗೆ ಏನನ್ನೂ ಮಾಡುವುದು ಅಗತ್ಯವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದಾಗ, ಅದು ಬರಹದಲ್ಲಿನ ಆದೇಶದ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆ ಕಂಪನಿಯು ವಿಘಟಿತವಾಗತಕ್ಕುದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ, ಯಾವುದೇ ಅಂಥ ನಿರ್ದೇಶನವು ತದನುಸಾರವಾಗಿ ಪರಿಣಾಮ ಹೊಂದಿರತಕ್ಕುದು.

(7) ಈ ಪ್ರಕರಣದ ಉಪಬಂಧಗಳು ಕಂಪನಿಗಳ ಅಧಿನಿಯಮ, 1956ರ (1956ರ 1) ಅಥವಾ ಯಾವುದೇ ಇತರ ಕಾನೂನು ಅಥವಾ ಅಂಥ ಅಧಿನಿಯಮ ಅಥವಾ ಇತರ ಯಾವುದೇ ಕಾನೂನಿನ ಕಾರಣದಿಂದಾಗಿ ಜಾರಿಯಲ್ಲಿರುವ ಯಾವುದೇ ಲಿಖಿತದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕುದು.

## ಅಧ್ಯಾಯ - VIII
## ಸಂಕೀರ್ಣ

**26. ಅಭಿವೃದ್ಧಿ ಬ್ಯಾಂಕಿನ ಸಿಬ್ಬಂದಿ.-** (1) ಅಭಿವೃದ್ಧಿ ಬ್ಯಾಂಕು, ಅದರ ಪ್ರಕಾರ್ಯಗಳ ದಕ್ಷ ನೆರವೇರಿಕೆಗಾಗಿ, ಅದು, ಅವಶ್ಯ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸುವಂಥ ಸಂಖ್ಯೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು ಮತ್ತು ಅವರ ನೇಮಕಾತಿ ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ ಅಭಿವೃದ್ಧಿ ಬ್ಯಾಂಕು ಮತ್ತು ರಿಸರ್ವ್ ಬ್ಯಾಂಕಿನ ನಡುವೆ ಒಪ್ಪಿಗೆಯಾಗಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ

ರಿಸರ್ವ್ ಬ್ಯಾಂಕಿನ ಅಂಥ ಸಿಬ್ಬಂದಿಯ ಸೇವೆಗಳನ್ನು ಉಪಯೋಗಿಸಿಕೊಳ್ಳಲು ಮತ್ತು ರಿಸರ್ವ್ ಬ್ಯಾಂಕು ಲಭ್ಯವಾಗುವಂತೆ ಮಾಡುವುದು ಅಭಿವೃದ್ಧಿ ಬ್ಯಾಂಕಿಗೆ ಕಾನೂನು ಸಮ್ಮತವಾಗಿರತಕ್ಕುದು.

(3) (ಎ) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ (2)ನೇ ಉಪಪ್ರಕರಣದ ಮೇರೆಗೆ ಅಭಿವೃದ್ಧಿ ಬ್ಯಾಂಕು ಯಾರ ಸೇವೆಗಳನ್ನು ಉಪಯೋಗಿಸಿಕೊಂಡಿರುವುದೋ ಆ ಯಾವುದೇ ಸಿಬ್ಬಂದಿ ವರ್ಗದ; ಅಥವಾ

(ಬಿ) ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಯಾರ ಸೇವೆಗಳನ್ನು ಅಭಿವೃದ್ಧಿ ಬ್ಯಾಂಕಿಗೆ ಲಭ್ಯವಾಗುವಂತೆ ಮಾಡಲಾಗಿದೆಯೋ ಅವುಗಳನ್ನು ಯಾವುದೇ ಇತರ ಸಂಸ್ಥೆಗೆ ಆ ಬ್ಯಾಂಕು ಪ್ರತಿಯೋಜಿಸಲಾಗಿದೆಯೋ ಆ ಯಾವುದೇ ಸಿಬ್ಬಂದಿ ವರ್ಗದ ಪ್ರತಿಯೊಬ್ಬ ಸದಸ್ಯನು ಮೂಲ ಗೊತ್ತುಪಡಿಸಿದ ದಿವಸದಂದು ಮತ್ತು ಅಂದಿನಿಂದ ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿದ್ದಂಥದೇ ಸಂಬಳ ಮತ್ತು ಉಪಲಬ್ಧಿಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ (1)ನೇ ಉಪಪ್ರಕರಣದ ಮೇರೆಗೆ ಅಭಿವೃದ್ಧಿ ಬ್ಯಾಂಕು ನೇಮಕ ಮಾಡಿರುವುದಾಗಿ ಭಾವಿಸತಕ್ಕುದು:

ಪರಂತು, ಅಭಿವೃದ್ಧಿ ಬ್ಯಾಂಕಿನಲ್ಲಿ ಉಪಯೋಗಕ್ಕಾಗಿ ನಿರ್ದಿಷ್ಟವಾಗಿ ಭರ್ತಿ ಮಾಡಿಕೊಂಡವರನ್ನು ಹೊರತುಪಡಿಸಿ ಹಿಂದೆ ಹೇಳಿದ ಇತರ ಸಿಬ್ಬಂದಿಯ ಪ್ರತಿಯೊಬ್ಬ ಸದಸ್ಯನು, ಗೊತ್ತುಪಡಿಸಿದ ದಿವಸದಿಂದ ಹದಿನೆಂಟು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಆ ಪರಿಣಾಮವುಳ್ಳ ಬರಹದಲ್ಲಿನ ಆಯ್ಕೆಯ ಅವಕಾಶವನ್ನು ಚಲಾಯಿಸುವ ಮೂಲಕ ರಿಸರ್ವ್ ಬ್ಯಾಂಕಿಗೆ ಹಿಂತಿರುಗಿ ಹೋಗಲು ನಿಶ್ಚಯಿಸಬಹುದು, ಒಮ್ಮೆ ಚಲಾಯಿಸಿದ ಆಯ್ಕೆಯ ಅವಕಾಶವು ಅಂತಿಮವಾಗಿದ್ದು ಮತ್ತು ಅಂಥ ಆಯ್ಕೆಯ ಅವಕಾಶವನ್ನು ಚಲಾಯಿಸಿದ ಮೇಲೆ ರಿಸರ್ವ್ ಬ್ಯಾಂಕು ಗೊತ್ತುಪಡಿಸಿದ ದಿವಸದಿಂದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಸಿಬ್ಬಂದಿಯ ಅಂಥ ಸದಸ್ಯನನ್ನು ಹಿಂತೆಗೆದುಕೊಳ್ಳತಕ್ಕುದು ಮತ್ತು ರಿಸರ್ವ್ ಬ್ಯಾಂಕು ಅಂಥ ಸದಸ್ಯನನ್ನು ಹಿಂದಕ್ಕೆ ತೆಗೆದುಕೊಂಡ ಮೇಲೆ ಅವನು ರಿಸರ್ವ್ ಬ್ಯಾಂಕಿನ ಸಿಬ್ಬಂದಿಯ ಸದಸ್ಯನಾಗತಕ್ಕುದು ಮತ್ತು ಅವನು ಅಭಿವೃದ್ಧಿ ಬ್ಯಾಂಕಿನ ಸಿಬ್ಬಂದಿಯ ಸದಸ್ಯನಾಗಿರುವುದು ನಿಂತುಹೋಗತಕ್ಕುದು.

(4) ಗೊತ್ತುಪಡಿಸಿದ ದಿವಸದಂದು ಅಥವಾ ಆ ತರುವಾಯ ಯಾವುದೇ ಕಾಲದಲ್ಲಿ, ರಿಸರ್ವ್ ಬ್ಯಾಂಕಿನ ಯಾವುದೇ ಪ್ರಕಾರ್ಯವನ್ನು ಅಭಿವೃದ್ಧಿ ಬ್ಯಾಂಕಿಗೆ ವರ್ಗಾಯಿಸಿದರೆ, ಅಭಿವೃದ್ಧಿ ಬ್ಯಾಂಕಿಗೆ ರಿಸರ್ವ್ ಬ್ಯಾಂಕಿನ ಪೂರ್ವಾನುಮೋದನೆಯೊಂದಿಗೆ ಹಿಂದೆ ಹೇಳಿದ ವರ್ಗಾವಣೆಗೆ ನಿಕಟ ಪೂರ್ವದಲ್ಲಿ ಯಾರ ಸೇವೆಗಳನ್ನು ರಿಸರ್ವ್ ಬ್ಯಾಂಕಿನ ಸಿಬ್ಬಂದಿಯ ಅಂಥ ಸದಸ್ಯರ ಸದರಿ ಯಾವುದೇ ಪ್ರಕಾರ್ಯಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕು ಉಪಯೋಗಿಸಿಕೊಳ್ಳಲಾಗುತ್ತಿತ್ತೋ ಆ ಸದಸ್ಯರನ್ನು ನೇಮಕ ಮಾಡಿಕೊಳ್ಳುವುದು ಕಾನೂನು ಸಮ್ಮತವಾಗಿರತಕ್ಕುದು ಮತ್ತು ಹಾಗೆ ನೇಮಕಗೊಂಡ ಸಿಬ್ಬಂದಿಯ ಪ್ರತಿಯೊಬ್ಬ ಸದಸ್ಯನನ್ನು ರಿಸರ್ವ್ ಬ್ಯಾಂಕು ಬಿಡುಗಡೆ ಮಾಡತಕ್ಕುದು ಮತ್ತು ಅವರನ್ನು ಅವನ ನೇಮಕಾತಿಯ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿದ್ದಂಥದೇ ಸಂಬಳ, ಉಪಲಬ್ಧಿಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ (1)ನೇ ಉಪಪ್ರಕರಣದ ಮೇರೆಗೆ ಅಭಿವೃದ್ಧಿ ಬ್ಯಾಂಕು ನೇಮಕ ಮಾಡಿರುವುದಾಗಿ ಭಾವಿಸತಕ್ಕುದು:

ಪರಂತು, ಹಿಂದೆ ಹೇಳಿದ ಸಿಬ್ಬಂದಿ ವರ್ಗದ ಪ್ರತಿಯೊಬ್ಬ ಸದಸ್ಯನು ಗೊತ್ತುಪಡಿಸಿದ ದಿವಸದಿಂದ ಹದಿನೆಂಟು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆ ಪರಿಣಾಮವನ್ನು ಹೊಂದಿರುವ ಬರಹದಲ್ಲಿನ ಆಯ್ಕೆಯ ಅವಕಾಶವನ್ನು ಚಲಾಯಿಸುವ ಮೂಲಕ ರಿಸರ್ವ್ ಬ್ಯಾಂಕಿಗೆ ಹಿಂದಿರುಗಿ ಹೋಗಲು ನಿಶ್ಚಯಿಸಬಹುದು. ಒಂದು ಸಲ ಚಲಾಯಿಸಲಾದ ಆಯ್ಕೆ ಅವಕಾಶವು ಅಂತಿಮವಾಗಿದ್ದು ಮತ್ತು ಅಂಥ ಆಯ್ಕೆಯ ಅವಕಾಶವನ್ನು ಚಲಾಯಿಸಿದ ಮೇಲೆ ರಿಸರ್ವ್ ಬ್ಯಾಂಕು, ಗೊತ್ತುಪಡಿಸಿದ ದಿವಸದಿಂದ ಮೂವತ್ತು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸಿಬ್ಬಂದಿಯ ಅಂಥ ಸದಸ್ಯನನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕುದು ಮತ್ತು ರಿಸರ್ವ್ ಬ್ಯಾಂಕು ಅಂಥ ಸದಸ್ಯನನ್ನು ಹಿಂತೆಗೆದುಕೊಂಡ ಮೇಲೆ ಅವನು ರಿಸರ್ವ್ ಬ್ಯಾಂಕಿನ ಸಿಬ್ಬಂದಿಯ ಸದಸ್ಯನಾಗತಕ್ಕುದು ಮತ್ತು ಅವನು ಅಭಿವೃದ್ಧಿ ಬ್ಯಾಂಕಿನ ಸಿಬ್ಬಂದಿಯ ಸದಸ್ಯನಾಗಿರುವುದು ನಿಂತುಹೋಗತಕ್ಕುದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಬೇರೆಡೆ ಏನೇ ಅಡಕವಾಗಿದ್ದಾಗ್ಯೂ, ಗೊತ್ತುಪಡಿಸಿದ ದಿವಸದಿಂದ ಅಥವಾ ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ, 1963ರ 4ಎ ಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕ ಇವುಗಳಲ್ಲಿ ಮುಂಚಿನದು ಯಾವುದೋ ಅದರಿಂದ ಹದಿನೆಂಟು ತಿಂಗಳುಗಳನ್ನು ಮೀರದ ಅವಧಿಯಾಗಿಲ್ಲದ ತಾತ್ಕಾಲಿಕ ಅವಧಿಗಾಗಿ ಇತರ ಎರಡು ಸಂಸ್ಥೆಗಳಲ್ಲಿ ಯಾವುದಾದರೂ ಒಂದರಲ್ಲಿನ ಹುದ್ದೆಗೆ ಸದರಿ ಯಾವುದೇ ಸಂಸ್ಥೆಯ ಸಿಬ್ಬಂದಿಯ ಯಾವನೇ ಸದಸ್ಯನನ್ನು ಸದರಿ ಯಾವುದೇ ಸಂಸ್ಥೆಯ ಹಿತಾಸಕ್ತಿಯಲ್ಲಿ ಬಡ್ತಿ ಕೊಡುವುದು ಅವಶ್ಯವೆಂದು ರಿಸರ್ವ್ ಬ್ಯಾಂಕು, ಅಭಿವೃದ್ಧಿ ಬ್ಯಾಂಕು ಅಥವಾ ಯೂನಿಟ್ ಟ್ರಸ್ಟಿನೊಂದಿಗೆ ಸಮಾಲೋಚನೆ ನಡೆಸಿ ಅವಶ್ಯವೆಂದು ಪರ್ಯಾಲೋಚಿಸಿದರೆ ರಿಸರ್ವ್ ಬ್ಯಾಂಕಿಗೆ ಸಿಬ್ಬಂದಿಯ ಯಾವನೇ ಅಂಥ ಸದಸ್ಯನನ್ನು ಆ ಇತರ ಸಂಸ್ಥೆಗೆ ಬಡ್ತಿ ಕೊಟ್ಟು ವರ್ಗಾವಣೆ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದು ಮತ್ತು ಅಂಥ ವರ್ಗಾವಣೆಯಾದ ಮೇಲೆ ಸಿಬ್ಬಂದಿಯ ಪ್ರತಿಯೊಬ್ಬ ಅಂಥ ಸದಸ್ಯನನ್ನು, ಅವನನ್ನು ಹಾಗೆ ವರ್ಗಾವಣೆ ಮಾಡಿದಂಥ ಆ ಇತರ ಸಂಸ್ಥೆಯ ಸಿಬ್ಬಂದಿ ವರ್ಗದ ಸದಸ್ಯನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ಅಂಥ ಬಡ್ತಿಯಿಂದ ನೇರವಾಗಿ ಉದ್ಭವಿಸುವ ಪ್ರಯೋಜನಗಳು ಯಾವುವಾದರೂ ಇದ್ದರೆ, ಅವುಗಳನ್ನು ಒಳಗೊಂಡು ಅಂಥ ವರ್ಗಾವಣೆಯ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿದ್ದಂಥದೇ ಸಂಬಳ, ಉಪಲಬ್ಧಿಗಳು ಮತ್ತು ಸೇವೆಯ ಇತರ ಷರತ್ತುಗಳಿಗೆ ಹಕ್ಕುಳ್ಳವನಾಗಿರತಕ್ಕುದು:

ಪರಂತು, ಹಿಂದೆ ಹೇಳಿದ ಸಿಬ್ಬಂದಿ ವರ್ಗದ ಪ್ರತಿಯೊಬ್ಬ ಸದಸ್ಯನು ಗೊತ್ತುಪಡಿಸಿದ ದಿನಾಂಕದಿಂದ ಅಥವಾ ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ, 1963ರ 4ಎ ಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕ-ಇವುಗಳಲ್ಲಿ ಮುಂಚಿನದು ಯಾವುದೋ ಅದರಿಂದ ಹದಿನೆಂಟು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆ ಪರಿಣಾಮವನ್ನು ಹೊಂದಿರುವ ಬರಹದಲ್ಲಿ ಆಯ್ಕೆಯ ಅವಕಾಶವನ್ನು ಚಲಾಯಿಸುವುದರ ಮೂಲಕ ಅವನನ್ನು ಹಾಗೆ ವರ್ಗಾವಣೆ ಮಾಡಲಾಗಿರುವಂಥ ಸಂಸ್ಥೆಗೆ ಹಿಂತಿರುಗಿ ಹೋಗಲು ನಿಶ್ಚಯಿಸಬಹುದು. ಒಂದು ಸಲ ಚಲಾಯಿಸಿದ ಆ ಆಯ್ಕೆಯ ಅವಕಾಶವು ಅಂತಿಮವಾಗಿದ್ದು ಮತ್ತು ಅಂಥ ಆಯ್ಕೆಯ ಅವಕಾಶವನ್ನು ಚಲಾಯಿಸಿದ ಮೇಲೆ ಆ ಸಂಸ್ಥೆಯು, ಗೊತ್ತುಪಡಿಸಿದ ದಿವಸ ಅಥವಾ ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ, 1963ರ 4ಎ ಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕ ಇವೆರಡರಲ್ಲಿ ಯಾವುದು

ಮುಂಚಿನದೋ ಅದರಿಂದ ಮೂವತ್ತು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆ ಸಿಬ್ಬಂದಿ ವರ್ಗದ ಅಂಥ ಸದಸ್ಯನನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕುದು ಮತ್ತು ಆ ಸಂಸ್ಥೆಯು ಅಂಥ ಸದಸ್ಯನನ್ನು ಹಿಂದಕ್ಕೆ ತೆಗೆದುಕೊಂಡ ಮೇಲೆ ಅವನು ಅದರ ಸಿಬ್ಬಂದಿ ವರ್ಗದ ಸದಸ್ಯನಾಗತಕ್ಕುದು ಮತ್ತು ಅವನು, ಅವನನ್ನು ಈ ಹಿಂದೆ ವರ್ಗಾವಣೆ ಮಾಡಲಾಗಿದ್ದಂಥ ಸಂಸ್ಥೆಯ ಸಿಬ್ಬಂದಿ ವರ್ಗದ ಸದಸ್ಯನಾಗಿರುವುದು ನಿಂತುಹೋಗತಕ್ಕುದು.

(6) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಒಪ್ಪಂದದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಿಬ್ಬಂದಿ ವರ್ಗದ ಯಾವನೇ ಸದಸ್ಯನು (3) ರಿಂದ (5)ನೇ ಉಪ ಪ್ರಕರಣಗಳ ಮೇರೆಗೆ ಅವನು ವರ್ಗಾವಣೆ, ನೇಮಕಾತಿ, ಅಥವಾ ಸಂದರ್ಭಾನುಸಾರ ವಾಪಸಾತಿಗಾಗಿ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕುದಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕುದಲ್ಲ.

**27. ಅಧಿಕಾರಗಳ ಪ್ರತ್ಯಾಯೋಜನೆ.–** ಮಂಡಲಿಯು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳೇನಾದರೂ ಇದ್ದರೆ ಅವುಗಳಿಗೊಳಪಡಿಸಿ, ಅದು ಅವಶ್ಯವೆಂದು ಭಾವಿಸಬಹುದಾದಂತೆ, ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳು ಮತ್ತು ಕರ್ತವ್ಯಗಳನ್ನು 7ನೇ ಪ್ರಕರಣದ ಮೇರೆಗೆ ರಚಿಸಲಾದ ನಿರ್ದೇಶಕರ ಯಾವುದೇ ಸಮಿತಿಗೆ ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವನೇ ನಿರ್ದೇಶಕನಿಗೆ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನಿಗೆ ಪ್ರತ್ಯಾಯೋಜಿಸಬಹುದು.

**28. ವಿವರಪಟ್ಟಿಕೆಗಳು.–** ಅಭಿವೃದ್ಧಿ ಬ್ಯಾಂಕು ಕಾಲಕಾಲಕ್ಕೆ ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿಗೆ ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಿಸರ್ವ್ ಬ್ಯಾಂಕು ಅಗತ್ಯಪಡಿಸುವಂಥ ವಿವರಪಟ್ಟಿಕೆಗಳನ್ನು ಒದಗಿಸತಕ್ಕುದು.

**29. ನಂಬಿಕೆ ಮತ್ತು ರಹಸ್ಯತೆಗೆ ಸಂಬಂಧಪಟ್ಟ ಬಾಧ್ಯತೆ.–** (1) ಅಭಿವೃದ್ಧಿ ಬ್ಯಾಂಕು, ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅನ್ಯಥಾ ಅಗತ್ಯಪಡಿಸಿದಂತೆ ಹೊರತು, ಅದು ಕಾನೂನು ಅಥವಾ ಬ್ಯಾಂಕುಗಳ ರೂಢಿಗತ ಪದ್ಧತಿ ಅಥವಾ ಆಚರಣೆಗೆ ಅನುಸಾರವಾಗಿ ಅಂಥ ಮಾಹಿತಿಯನ್ನು ಹೊರಗೆಡಹುವುದು ಅಭಿವೃದ್ಧಿ ಬ್ಯಾಂಕಿಗೆ ಅವಶ್ಯವಾಗಿರುವಂಥ ಸಂದರ್ಭಗಳಲ್ಲಿ ಹೊರತುಪಡಿಸಿ ಅದರ ಸದಸ್ಯರಿಗೆ ಅಥವಾ ಅವರ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಹೊರಗೆಡಹತಕ್ಕುದಲ್ಲ.

(1ಎ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ಉದ್ದೇಶಕ್ಕಾಗಿ, ಅಭಿವೃದ್ಧಿ ಬ್ಯಾಂಕು, ಕೇಂದ್ರ ಸರ್ಕಾರ, ಸ್ಟೇಟ್ ಬ್ಯಾಂಕು, ಯಾವುದೇ ಸಹಾಯಕ ಬ್ಯಾಂಕು, ರಾಷ್ಟ್ರೀಕೃತ ಬ್ಯಾಂಕು ಅಥವಾ ಇತರ ಅನುಸೂಚಿತ ಬ್ಯಾಂಕು, ರಾಜ್ಯ ಸಹಕಾರಿ ಬ್ಯಾಂಕು, ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಹಣಕಾಸು ಸಂಸ್ಥೆಯಿಂದ ಅದು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ

ಕಾಲಗಳಲ್ಲಿ ಆ ಉದ್ದೇಶಕ್ಕಾಗಿ ಅದು ಅವಶ್ಯವೆಂದು, ಉಪಯುಕ್ತವೆಂದು ಪರ್ಯಾಲೋಚಿಸಬಹುದಾದ ಸಾಲದ ಬಗೆಗಿನ ಮಾಹಿತಿ ಅಥವಾ ಇತರ ಮಾಹಿತಿಗಳನ್ನು ಸಂಗ್ರಹಿಸಬಹುದು ಅಥವಾ ಅದನ್ನು ಒದಗಿಸಬಹುದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ "ಸಾಲದ ಬಗೆಗಿನ ಮಾಹಿತಿ" ಎಂಬ ಪದಾವಳಿಯು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ 4ಎ ಪ್ರಕರಣದ 'ಸಿ' ಖಂಡದಲ್ಲಿ ಉಲ್ಲೇಖಿಸಿದ ಬ್ಯಾಂಕಿಂಗ್ ಕಂಪನಿಯು, ಸ್ಟೇಟ್ ಬ್ಯಾಂಕು, ಯಾವುದೇ ಸಹಾಯಕ ಬ್ಯಾಂಕು, ರಾಷ್ಟ್ರೀಕೃತ ಬ್ಯಾಂಕು ಅಥವಾ ಇತರ ಅನುಸೂಚಿತ ಬ್ಯಾಂಕು, ರಾಜ್ಯ ಸಹಕಾರಿ ಬ್ಯಾಂಕು, ರಾಜ್ಯ ಹಣಕಾಸು ನಿಗಮ ಅಥವಾ ಹಿಂದೆ ಹೇಳಿದಂಥ ಇತರ ಹಣಕಾಸು ಸಂಸ್ಥೆ ಎಂಬ ಅರ್ಥವನ್ನು ಹೊಂದಿರತಕ್ಕುದು ಎಂಬ ಮಾರ್ಪಾಟಿಗೆ ಒಳಪಟ್ಟು, ಅದರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕುದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಭಿವೃದ್ಧಿ ಬ್ಯಾಂಕು ಯಾರ ಸೇವೆಗಳನ್ನು ಉಪಯೋಗಿಸಿಕೊಂಡಿದೆಯೋ ಆ ಅಭಿವೃದ್ಧಿ ಬ್ಯಾಂಕಿನ ಅಥವಾ ರಿಸರ್ವ್ ಬ್ಯಾಂಕಿನ ಆ ಪ್ರತಿಯೊಬ್ಬ ನಿರ್ದೇಶಕ ಸಮಿತಿಯ ಸದಸ್ಯ, ಲೆಕ್ಕ ಪರಿಶೋಧಕ ಅಥವಾ ಅಧಿಕಾರಿ ಅಥವಾ ಇತರ ನೌಕರನು, ಅವನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಮುಂಚೆ ಈ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ಕೊಟ್ಟಿರುವ ನಮೂನೆಯಲ್ಲಿ ನಂಬಿಕೆ ಮತ್ತು ರಹಸ್ಯದ ಬಗ್ಗೆ ಘೋಷಣೆಯನ್ನು ಮಾಡತಕ್ಕುದು.

**30. ನೇಮಕಾತಿಗಳಲ್ಲಿನ ದೋಷಗಳು, ಕಾರ್ಯಗಳನ್ನು ಅಸಿಂಧುಗೊಳಿಸತಕ್ಕುದಲ್ಲ, ಇತ್ಯಾದಿ.-** (1) ಅಭಿವೃದ್ಧಿ ಬ್ಯಾಂಕಿನ ಮಂಡಲಿ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಸಂದರ್ಭಾನುಸಾರ ಮಂಡಲಿ ಅಥವಾ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿ ದೋಷವಿರುವ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

(2) ನಿರ್ದೇಶಕನಾಗಿ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯು ಮಾಡಿದ ಯಾವುದೇ ಕಾರ್ಯವು, ನಿರ್ದೇಶಕನಾಗಿರಲು ಅವನು ಅನರ್ಹಗೊಂಡಿದ್ದಾನೆಂಬ ಅಥವಾ ಅವನ ನೇಮಕಾತಿಯಲ್ಲಿ ಯಾವುದೇ ಇತರ ದೋಷವಿತ್ತೆಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕುದಲ್ಲ.

**30ಎ. ನಿರ್ದೇಶಕರ ನೇಮಕಾತಿಯ ಬಗ್ಗೆ ಅಭಿವೃದ್ಧಿ ಬ್ಯಾಂಕಿನೊಂದಿಗಿನ ವ್ಯವಸ್ಥೆಯು ಚಾಲ್ತಿಯಲ್ಲಿರತಕ್ಕುದು.-** (1) ಕೈಗಾರಿಕಾ ಸಂಸ್ಥೆಯೊಂದಿಗೆ ಅಭಿವೃದ್ಧಿ ಬ್ಯಾಂಕು ಮಾಡಿಕೊಂಡ ಯಾವುದೇ ವ್ಯವಸ್ಥೆಯು ಇಂಥ ಕೈಗಾರಿಕಾ ಸಂಸ್ಥೆ, ಒಬ್ಬ ಅಥವಾ ಅದಕ್ಕಿಂತ ಹೆಚ್ಚು ನಿರ್ದೇಶಕರನ್ನು ಅಭಿವೃದ್ಧಿ ಬ್ಯಾಂಕು ನೇಮಕ ಮಾಡುವುದಕ್ಕಾಗಿ ಏರ್ಪಾಟು ಮಾಡಿರುವಲ್ಲಿ, ಅಂಥ ಏರ್ಪಾಟು ಮತ್ತು ಅದರ ಅನುಸರಣೆಯಲ್ಲಿ ಮಾಡಿದ ನಿರ್ದೇಶಕರ ಯಾವುದೇ ನೇಮಕಾತಿಯು, ಕಂಪನಿಗಳ ಅಧಿನಿಯಮ, 1956 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಆ ಕೈಗಾರಿಕಾ ಸಂಸ್ಥೆಗೆ ಸಂಬಂಧಪಟ್ಟ ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು ಅಥವಾ ಅದಕ್ಕೆ ಯಾವುದೇ ಇತರ ಲಿಖಿತದಲ್ಲಿ ಮತ್ತು ಷೇರು ಅರ್ಹತೆ ಮತ್ತು ವಯೋಮಿತಿ, ನಿರ್ದೇಶಕತ್ವದಲ್ಲಿನ ಸಂಖ್ಯೆ, ನಿರ್ದೇಶಕರ ಪದದಿಂದ ತೆಗೆದುಹಾಕುವುದು ಮತ್ತು ಹಿಂದೆ ಹೇಳಿದ ಅಂಥ ಯಾವುದೇ ಕಾನೂನು ಅಥವಾ ಲಿಖಿತದಲ್ಲಿ ಒಳಗೊಂಡ ಅಂಥದೇ ಷರತ್ತುಗಳ ಬಗ್ಗೆ

ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಹಿಂದೆ ಹೇಳಿದಂಥ ವ್ಯವಸ್ಥೆಯ ಅನುಸರಣೆಯಲ್ಲಿ ಅಭಿವೃದ್ಧಿ ಬ್ಯಾಂಕು ನೇಮಕ ಮಾಡಿದ ಯಾರೇ ನಿರ್ದೇಶಕರಿಗೆ ಅನ್ವಯವಾಗತಕ್ಕುದಲ್ಲ.

(2) ಹಿಂದೆ ಹೇಳಿದಂತೆ ನೇಮಕಗೊಂಡ ಯಾವನೇ ನಿರ್ದೇಶಕನು,-

(ಎ) ಅಭಿವೃದ್ಧಿ ಬ್ಯಾಂಕಿನ ಇಷ್ಟಪರ್ಯಂತ ಪದಧಾರಣ ಮಾಡತಕ್ಕುದು ಮತ್ತು ಅವನನ್ನು ಅಭಿವೃದ್ಧಿ ಬ್ಯಾಂಕಿನ ಬರಹದಲ್ಲಿನ ಆದೇಶದ ಮೂಲಕ ತೆಗೆದುಹಾಕಬಹುದು, ಅಥವಾ ಯಾವನೇ ವ್ಯಕ್ತಿಯನ್ನು ಬದಲಾಗಿ ಸೇರಿಸಬಹುದು.

(ಬಿ) ಅವನು ನಿರ್ದೇಶಕನಾಗಿರುವ ಕಾರಣ ಮಾತ್ರದಿಂದಲೇ ನಿರ್ದೇಶಕನಾಗಿ ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡದೇ ಬಿಟ್ಟ ಯಾವುದೇ ಕಾರ್ಯಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ಕಾಗಿ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ವಹಿಸತಕ್ಕುದಲ್ಲ.

(ಸಿ) ಸರದಿಯ ಮೇಲೆ ನಿವೃತ್ತನಾಗಲು ಗುರಿಯಾಗತಕ್ಕುದಲ್ಲ ಮತ್ತು ಅಂಥ ನಿವೃತ್ತಿಗೆ ಗುರಿಯಾಗುವ ನಿರ್ದೇಶಕರ ಸಂಖ್ಯೆಯನ್ನು ಲೆಕ್ಕ ಹಾಕುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕುದಲ್ಲ.

**31. ನಿರ್ದೇಶಕರುಗಳ ನಷ್ಟ ಭರ್ತಿ .-** (1) ಅವನ ಬುದ್ಧಿಪೂರ್ವಕ ಕಾರ್ಯ ಅಥವಾ ತಪ್ಪಿತದ ಮೂಲಕ ಉಂಟಾದಂಥವುಗಳನ್ನು ಹೊರತುಪಡಿಸಿ, ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅವನು ವಹಿಸಿದ ಎಲ್ಲಾ ನಷ್ಟಗಳು ಮತ್ತು ವೆಚ್ಚಗಳ ಬಗ್ಗೆ ಅಭಿವೃದ್ಧಿ ಬ್ಯಾಂಕು ನಿರ್ದೇಶಕನಿಗೆ ನಷ್ಟಭರ್ತಿ ಮಾಡಿಕೊಡತಕ್ಕುದು.

(2) ನಿರ್ದೇಶಕನು, ಅಭಿವೃದ್ಧಿ ಬ್ಯಾಂಕಿನ ಯಾವನೇ ಇತರ ನಿರ್ದೇಶಕ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನೌಕರನಿಗಾಗಿ ಅಥವಾ ಅಭಿವೃದ್ಧಿ ಬ್ಯಾಂಕಿನ ಪರವಾಗಿ ಆರ್ಜಿಸಿದ ಅಥವಾ ತೆಗೆದುಕೊಂಡ ಯಾವುದೇ ಸ್ವತ್ತು ಅಥವಾ ಭದ್ರತೆಯ ಮೌಲ್ಯ ಅಥವಾ ಅದರ ಸ್ವಾಮ್ಯದ ಬಗೆಗಿನ ಸಾಕಷ್ಟು ಇರಾದೆಯಿರುವುದರಿಂದ ಅಥವಾ ಕೊರತೆಯಿಂದ ಅಥವಾ ಅಭಿವೃದ್ಧಿ ಬ್ಯಾಂಕಿಗೆ ಹೊಣೆಯಾಗಿರುವ ಯಾವನೇ ಋಣಿ ಅಥವಾ ಯಾವನೇ ವ್ಯಕ್ತಿಯ ದಿವಾಳಿ ಅಥವಾ ಅಕ್ರಮ ಕೃತ್ಯಕ್ಕಾಗಿ ಅಥವಾ ಅವನ ಪದದ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಕರ್ತವ್ಯಗಳ ನಿರ್ವಹಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯಕ್ಕಾಗಿ ಜವಾಬ್ದಾರನಾಗತಕ್ಕುದಲ್ಲ.

**32. ಈ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಕ್ರಮದ ಸಂರಕ್ಷಣೆ.-** ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನು ಅಥವಾ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ಉಪಬಂಧದ ಅನುಸರಣೆಯಲ್ಲಿ ಸದ್ಭಾವದಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟ ಅಥವಾ ಹಾನಿಗಾಗಿ ಅಭಿವೃದ್ಧಿ ಬ್ಯಾಂಕು ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವನೇ ನಿರ್ದೇಶಕ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನೌಕರನು ಅಥವಾ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಅಭಿವೃದ್ಧಿ ಬ್ಯಾಂಕು ಅಧಿಕೃತಗೊಳಿಸಿದ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**32ಎ. ಠೇವಣಿಗಳು, ಬಾಂಡುಗಳು, ಇತ್ಯಾದಿಗಳ ಸಂಬಂಧದಲ್ಲಿ ನಾಮನಿರ್ದೇಶನ.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ

ಠೇವಣಿಗಳು, ಬಾಂಡುಗಳು ಅಥವಾ ಇತರ ಭದ್ರತೆಗಳಿಗೆ ಸಂಬಂಧಿಸಿದಂತೆ, ನಿಯಮಿಸಲಾದ ರೀತಿಯಲ್ಲಿ ನಾಮನಿರ್ದೇಶನವನ್ನು ಮಾಡಲಾಗಿರುವಲ್ಲಿ, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳ ಮೇಲೆ ಬಾಕಿಯಿರುವ ಮೊತ್ತವು, ಅದರ ಠೇವಣಿದಾರನು ಅಥವಾ ಧಾರಕನು ಮೃತನಾದ ತರುವಾಯ ಯಾರೇ ಇತರ ವ್ಯಕ್ತಿಯ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಗೊಳಪಟ್ಟು, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳು ನಾಮನಿರ್ದೇಶಿತನಲ್ಲಿ ನಿಹಿತವಾಗತಕ್ಕದ್ದು, ಮತ್ತು ಅವನಿಗೆ ಸಂದಾಯವಾಗಬಹುದಾಗಿರತಕ್ಕದ್ದು.

(2) (1) ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಭಿವೃದ್ಧಿ ಬ್ಯಾಂಕಿನ ಯಾವುದೇ ಸಂದಾಯವು, ಅಂಥ ಠೇವಣಿಗಳು, ಬಾಂಡುಗಳು ಅಥವಾ ಭದ್ರತೆಗಳ ಸಂಬಂಧದಲ್ಲಿ ಅಭಿವೃದ್ಧಿ ಬ್ಯಾಂಕಿನ ಹೊಣೆಗಾರಿಕೆಯ ಪೂರ್ಣ ವಿಮೋಚನೆಯಾಗತಕ್ಕದ್ದು.

**33. ಅಭಿವೃದ್ಧಿ ಬ್ಯಾಂಕಿಗೆ ಸಂಬಂಧಪಟ್ಟಂತೆ 1891ರ ಅಧಿನಿಯಮ 18 ಅನ್ವಯವಾಗತಕ್ಕುದು.-** ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891 ಅಭಿವೃದ್ಧಿ ಬ್ಯಾಂಕಿಗೆ ಸಂಬಂಧಪಟ್ಟಂತೆ ಅದು ಈ ಅಧಿನಿಯಮದ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಬ್ಯಾಂಕು ಆಗಿದ್ದಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕುದು.

**34. ಅಧಿನಿಯಮ 1949ರ 10 ಇದು ಅಭಿವೃದ್ಧಿ ಬ್ಯಾಂಕಿಗೆ ಅನ್ವಯವಾಗದಿರುವುದು.-** ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ, 1949 ಇದರಲ್ಲಿ ಇರುವುದು ಯಾವುದೂ, ಅದರ 34ಎ ಪ್ರಕರಣ ಮತ್ತು 36 ಎಡಿ ಪ್ರಕರಣವನ್ನು ಹೊರತುಪಡಿಸಿ, ಅಭಿವೃದ್ಧಿ ಬ್ಯಾಂಕಿಗೆ ಅನ್ವಯವಾಗತಕ್ಕುದಲ್ಲ.

**35.** [ **ಬಿಟ್ಟು ಬಿಡಲಾಗಿದೆ** ]

**36. ಅಭಿವೃದ್ಧಿ ಬ್ಯಾಂಕಿನ ಸಮಾಪನ.-** ಕಂಪನಿಗಳನ್ನು ಅಥವಾ ನಿಗಮಗಳನ್ನು ಸಮಾಪನಗೊಳಿಸುವುದಕ್ಕೆ ಸಂಬಂಧಪಟ್ಟ ಕಾನೂನಿನ ಯಾವುದೇ ಉಪಬಂಧವು ಅಭಿವೃದ್ಧಿ ಬ್ಯಾಂಕಿಗೆ ಅನ್ವಯವಾಗತಕ್ಕುದಲ್ಲ ಮತ್ತು ಅಭಿವೃದ್ಧಿ ಬ್ಯಾಂಕನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕ ಮತ್ತು ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನಕ್ಕೆ ಒಳಪಡಿಸತಕ್ಕುದಲ್ಲ.

**37. ವಿನಿಯಮಗಳ ರಚನಾಧಿಕಾರ.-** (1) ಮಂಡಲಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮಕ್ಕೆ ಅಸಂಗತವಾಗುವ ವಿನಿಯಮಗಳನ್ನು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಯಾವ ವಿಷಯಗಳಿಗಾಗಿ ಉಪಬಂಧಿಸುವುದು ಅವಶ್ಯ ಅಥವಾ ವಿಹಿತವೋ ಆ ಎಲ್ಲ ವಿಷಯಗಳಿಗೆ ಉಪಬಂಧಿಸಬಹುದು.

(2) ಅಂಥ ವಿನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,-

(ಎ) ಈ ಅಧಿನಿಯಮದ ಮೇರೆಗೆ ರಚಿಸಿದ ಮಂಡಲಿ ಅಥವಾ ಯಾವುದೇ ಸಮಿತಿಯ ಸಭೆಗಳ ವೇಳೆಗಳು ಮತ್ತು ಸ್ಥಳಗಳು ಮತ್ತು ವ್ಯವಹಾರವನ್ನು ನಡೆಸುವುದಕ್ಕಾಗಿ ಅವಶ್ಯವಾದ ಕೋರಂನ್ನು ಒಳಗೊಂಡು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ನಿರ್ಣಯಗಳನ್ನು ಅಂಗೀಕರಿಸುವ ರೀತಿ;

(ಬಿ) ಕಾರ್ಯನಿರ್ವಾಹಕ ಸಮಿತಿಯ ಪ್ರಕಾರ್ಯಗಳು;

(ಸಿ) ಸಮಿತಿಯ ನಿರ್ದೇಶಕರು ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಫೀಜುಗಳು ಮತ್ತು ಭತ್ಯಗಳು;

(ಡಿ) ಸಾಲ ಅಥವಾ ಮುಂಗಡಗಳನ್ನು ಮಂಜೂರು ಮಾಡುವಾಗ ಅಥವಾ ಯಾವುದೇ ಇತರ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಅಭಿವೃದ್ಧಿ ಬ್ಯಾಂಕು ವಿಧಿಸಬಹುದಾದಂಥ ಷರತ್ತುಗಳು;

(ಡಿಎ) 9ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕೈಗಾರಿಕಾ ಸಂಸ್ಥೆಗಳೊಡನೆ ವ್ಯವಹಾರಗಳನ್ನು ಮಾಡಿಕೊಳ್ಳುವುದು
ಮತ್ತು ಅದರ ಬಗೆಗಿನ ಷರತ್ತುಗಳು ಮತ್ತು ಪರಿಮಿತಿಗಳು;

(ಡಿಬಿ) ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು ಷೇರುಗಳನ್ನು ಹೊಂದಬಹುದೋ ಮತ್ತು ವರ್ಗಾಯಿಸಬಹುದೋ ಆ ರೀತಿ ಮತ್ತು ಷರತ್ತುಗಳು;

(ಡಿಸಿ) ಷೇರುದಾರರ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳು;

(ಡಿಡಿ) ಷೇರು ರಿಜಿಸ್ಟರುಗಳ ನಿರ್ವಹಣೆ ಮತ್ತು ಅದರಲ್ಲಿ ನಮೂದಿಸಬೇಕಾದ ವಿವರಗಳು;

(ಡಿಇ) ಕಂಪ್ಯೂಟರ್ ಫ್ಲಾಪಿಗಳು ಅಥವಾ ಡಿಸ್ಕೆಟ್‌ಗಳ ಮೇಲೆ, ಷೇರುದಾರರ ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರುವಲ್ಲಿ ಪಾಲಿಸಬೇಕಾದ ಸಂರಕ್ಷಣೆ ಕ್ರಮಗಳು;

(ಡಿಎಫ್) ರಿಜಿಸ್ಟರುಗಳ ಪರಿಶೀಲನೆ ಮತ್ತು ಮುಕ್ತಾಯ ಮತ್ತು ಅದಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳು;

(ಡಿಜಿ) ಈ ಅಧಿನಿಯಮದ ಮೇರೆಗೆ ನಿರ್ದೇಶಕರ ಚುನಾವಣೆಗಳನ್ನು ನಡೆಸುವುದು ಮತ್ತು ನೆರವೇರಿಸುವುದು ಮತ್ತು ನಿರ್ದೇಶಕರ ಅರ್ಹತೆಗೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸುವುದು.

(ಡಿಹೆಚ್) ಸರ್ವ ಸದಸ್ಯರ ಸಭೆಗಳನ್ನು ಕರೆಯತಕ್ಕ ರೀತಿ, ಅದರಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ, ಮತದಾನದ ಹಕ್ಕುಗಳನ್ನು ಚಲಾಯಿಸಬಹುದಾದ ರೀತಿ, ಅಂಥ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳು ಮತ್ತು ನಡೆಸಿದ ಕಾರ್ಯ ಕಲಾಪಗಳು ಮತ್ತು ಸಭೆಗಳಿಗೆ ಸಂಬಂಧಿಸಿದ ಇನ್ನಿತರ ವಿಷಯಗಳು;

(ಡಿಐ) ಷೇರುದಾರರು ಅಥವಾ ಇತರ ವ್ಯಕ್ತಿಗಳ ಮೇಲೆ ನೋಟೀಸುಗಳನ್ನು ಜಾರಿಮಾಡಬಹುದಾದ ರೀತಿ;

(ಡಿಜೆ) 32ಎ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ನಾಮನಿರ್ದೇಶನವನ್ನು ಮಾಡಬಹುದಾದ ರೀತಿ;

(ಇ) ಅಭಿವೃದ್ಧಿ ಬ್ಯಾಂಕು ವಿನಿಮಯ ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳನ್ನು ಅಂಗೀಕರಿಸಬಹುದಾದ, ಮುಂಗಡವಾಗಿ ಮುರಿದುಕೊಳ್ಳಬಹುದಾದ ಅಥವಾ ಪುನಃ ಮುಂಗಡವಾಗಿ ಮುರಿದುಕೊಳ್ಳಬಹುದಾದ ಷರತ್ತುಗಳು;

(ಎಫ್) ವ್ಯವಹಾರವನ್ನು ನಡೆಸುವುದಕ್ಕಾಗಿ ತತ್ಕಾಲದಲ್ಲಿ ಅಗತ್ಯವಿಲ್ಲದ ಅಭಿವೃದ್ಧಿ ಸಹಾಯ ನಿಧಿ ಅಥವಾ ಸಾಮಾನ್ಯ ನಿಧಿಯಲ್ಲಿನ ಮೊಬಲಗುಗಳ (ಬ್ಯಾಂಕುಗಳಲ್ಲಿ ಠೇವಣಿಗಳ ಮೂಲಕವಾಗಿಯಾಗಲಿ ಅಥವಾ ಅನ್ಯಥಾವಾಗಿಯಾಗಲಿ) ಹೂಡಿಕೆ;

(ಜಿ) ಅಭಿವೃದ್ಧಿ ಸಹಾಯ ನಿಧಿ ಮತ್ತು ಅಭಿವೃದ್ಧಿ ಬ್ಯಾಂಕಿನ ಆಯವ್ಯಯ ಪಟ್ಟಿಗಳು ಮತ್ತು ಲೆಕ್ಕಪತ್ರಗಳನ್ನು ತಯಾರಿಸತಕ್ಕಂಥ ನಮೂನೆ ಮತ್ತು ರೀತಿ;

(ಹೆಚ್) ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಲಾದ ವಿವರಪಟ್ಟಿಕೆಗಳ ಮತ್ತು ವಿವರಪತ್ರಗಳ ನಮೂನೆಗಳು;

(ಐ) ಅಭಿವೃದ್ಧಿ ಬ್ಯಾಂಕಿನ ಅಧಿಕಾರಿಗಳು ಮತ್ತು ಇತರ ನೌಕರರ ಕರ್ತವ್ಯಗಳು ಮತ್ತು ನಡತೆ, ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಜೆ) ಅಭಿವೃದ್ಧಿ ಬ್ಯಾಂಕಿನ ಅಧಿಕಾರಿಗಳು ಮತ್ತು ಇತರ ನೌಕರರಿಗಾಗಿ ಅಥವಾ ಇತರ ಸಹಾಯ ನಿಧಿಗಳ ಸ್ಥಾಪನೆ ಮತ್ತು ಅವುಗಳನ್ನು ಇಟ್ಟುಕೊಂಡು ಬರುವುದು;

(ಕೆ) ಸಾಮಾನ್ಯವಾಗಿ ಅಭಿವೃದ್ಧಿ ಬ್ಯಾಂಕಿನ ವ್ಯವಹಾರಗಳ ದಕ್ಷ ನಿರ್ವಹಣೆ; ಮತ್ತು

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ

– ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಬಹುದಾದಂಥ ಯಾವುದೇ ವಿನಿಯಮವನ್ನು ಅಭಿವೃದ್ಧಿ ಬ್ಯಾಂಕು ಸ್ಥಾಪನೆಯಾದ ಮೂರು ತಿಂಗಳುಗಳೊಳಗೆ ರಿಸರ್ವ್ ಬ್ಯಾಂಕು ರಚಿಸಬಹುದು ಮತ್ತು ಹಾಗೆ ರಚಿಸಿದ ಯಾವುದೇ ವಿನಿಯಮವನ್ನು ಮಂಡಲಿಯು ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳನ್ನು ಚಲಾಯಿಸಿ ಬದಲಾಯಿಸಬಹುದು ಮತ್ತು ರದ್ದು ಮಾಡಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅಥವಾ ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ವಿನಿಯಮದಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ವಿನಿಯಮವನ್ನು ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ವಿನಿಯಮವು ಅಥವಾ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**38. ಕೆಲವು ಅಧಿನಿಯಮಿತಿಗಳ ತಿದ್ದುಪಡಿ.–** ಈ ಅಧಿನಿಯಮದ ಎರಡನೇ ಅನುಸೂಚಿಯ

i ರಿಂದ iv ರ ವರೆಗಿನ ಭಾಗಗಳಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳನ್ನು ಅದರ ಮೊದಲನೇ ಅಂಕಣದಲ್ಲಿ ನಿರ್ದೇಶಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕುದು ಮತ್ತು ಅಂಥ ತಿದ್ದುಪಡಿಗಳು ಆ ಅನುಸೂಚಿಯ ಎರಡನೇ ಕಲಮಿನಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕಗಳಂದು ಜಾರಿಗೆ ಬರತಕ್ಕುದು.

**39. ತೊಂದರೆಯನ್ನು ನಿವಾರಿಸಲು ಅಧಿಕಾರ.–** ಸಾರ್ವಜನಿಕ ಹಣಕಾಸು ಸಂಸ್ಥೆಗಳ ಕಾನೂನುಗಳು (ತಿದ್ದುಪಡಿ) ಅಧಿನಿಯಮ, 1975ರ ಮೂಲಕ ತಿದ್ದುಪಡಿಯಾದಂತೆ ಈ

ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಆದೇಶದ ಮೂಲಕ ಅಂಥ ಉಪಬಂಧಗಳಿಗೆ ಅಸಂಗತವಲ್ಲದ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಯಾವ ಕಾರ್ಯವನ್ನಾದರೂ ಮಾಡಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು ಸದರಿ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಮಾಡತಕ್ಕುದಲ್ಲ.

**ಮೊದಲನೇ ಅನುಸೂಚಿ**

[29(2)ನೇ ಪ್ರಕರಣವನ್ನು ನೋಡಿ]

**ನಂಬಿಕೆ ಮತ್ತು ರಹಸ್ಯದ ಬಗ್ಗೆ ಘೋಷಣೆ**

........................... ಆದ ನಾನು, ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ (ಸಂದರ್ಭಾನುಸಾರ) ನಿರ್ದೇಶಕ, .................. ಸಮಿತಿಯ ಸದಸ್ಯ, ಲೆಕ್ಕಪರಿಶೋಧಕ, ಅಧಿಕಾರಿ ಅಥವಾ ಇತರ ನೌಕರನಾಗಿ ಮತ್ತು ಸದರಿ ಅಭಿವೃದ್ಧಿ ಬ್ಯಾಂಕಿನಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಾನು ಧಾರಣ ಮಾಡಿದ ಪದ ಅಥವಾ ಸ್ಥಾನಕ್ಕೆ ಯುಕ್ತವಾಗಿ ಸಂಬಂಧಪಟ್ಟಂತೆ, ನಾನು ಮಾಡಬೇಕಾದ ಕರ್ತವ್ಯಗಳನ್ನು ನಿಷ್ಠಾಪೂರ್ವಕವಾಗಿ, ಸತ್ಯವಾಗಿ ಮತ್ತು ನನ್ನ ಕೌಶಲ್ಯ ಮತ್ತು ಸಾಮರ್ಥ್ಯವಿರುವಷ್ಟರ ಮಟ್ಟಿಗೆ ನಿರ್ವಹಿಸುವೆನು ಮತ್ತು ನೆರವೇರಿಸುವೆನೆಂದು ಈ ಮೂಲಕ ಘೋಷಿಸುತ್ತೇನೆ.

ನಾನು, ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ವ್ಯವಹಾರಗಳಿಗೆ ಅಥವಾ ಸದರಿ ಅಭಿವೃದ್ಧಿ ಬ್ಯಾಂಕಿನೊಡನೆ ಯಾವುದೇ ವ್ಯವಹಾರವನ್ನು ಹೊಂದಿರುವ ಯಾವನೇ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಅದಕ್ಕೆ ಕಾನೂನು ಸಮ್ಮತವಾಗಿ ಹಕ್ಕುಳ್ಳವನಾಗಿರದ ಯಾವನೇ ವ್ಯಕ್ತಿಗೆ ನಾನು ತಿಳಿಸುವುದಿಲ್ಲವೆಂದು ಅಥವಾ ತಿಳಿಸಲು ಅವಕಾಶ ಕೊಡುವುದಿಲ್ಲವೆಂದು ಮತ್ತು ಸದರಿ ಅಭಿವೃದ್ಧಿ ಬ್ಯಾಂಕಿಗೆ ಸೇರಿದ ಅಥವಾ ಅದರ ವಶದಲ್ಲಿರುವ ಮತ್ತು ಸದರಿ ಅಭಿವೃದ್ಧಿ ಬ್ಯಾಂಕಿನ ವ್ಯವಹಾರಕ್ಕೆ ಅಥವಾ ಸದರಿ ಅಭಿವೃದ್ಧಿ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರವನ್ನು ಹೊಂದಿರುವ ಯಾವನೇ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಲು ಅಥವಾ ನೋಡಲು ಅಂಥ ಯಾವನೇ ವ್ಯಕ್ತಿಗೆ ಅವಕಾಶ ಕೊಡುವುದಿಲ್ಲವೆಂದು ನಾನು ಮತ್ತೂ ಘೋಷಿಸುತ್ತೇನೆ.

(ರುಜು)

ನನ್ನ ಮುಂದೆ ರುಜು ಮಾಡಲಾಗಿದೆ.

**ಎರಡನೇ ಅನುಸೂಚಿ**

(38ನೇ ಪ್ರಕರಣವನ್ನು ನೋಡಿ)

**ಕೆಲವು ಅಧಿನಿಯಮಿತಿಗಳ ತಿದ್ದುಪಡಿ**

**ಭಾಗ - I**

***ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ತಿದ್ದುಪಡಿಗಳು (1934ರ 2)***

ತಿದ್ದುಪಡಿಗಳು | ತಿದ್ದುಪಡಿಗ

1. 2ನೇ ಪ್ರಕರಣದಲ್ಲಿ (ಬಿಬಿಬಿ) ಖಂಡದ ತರುವಾಯ ಕೆಳಕಂಡ ಖಂಡವನ್ನು ಸೇರಿಸಿ, ಎಂದರೆ:- ಅಭಿವೃದ್ಧಿ
‘(ಬಿಬಿಬಿಬಿ) "ಅಭಿವೃದ್ಧಿ ಬ್ಯಾಂಕು" ಎಂದರೆ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಅಧಿನಿಯಮ, 1964ರ ಮೇರೆಗೆ ಸ್ಥಾಪಿಸಲಾದ ಭಾರತ ಕೈಗಾರಿಕಾ ಬ್ಯಾಂಕು,.
2. 8ನೇ ಪ್ರಕರಣದಲ್ಲಿ,-
(ಎ) (1)ನೇ ಉಪಪ್ರಕರಣದಲ್ಲಿ,- ಅಭಿವೃದ್ಧಿ ಬ

(i) (ಎ) ಖಂಡದಲ್ಲಿ ‘ಮೂರು’ ಎಂಬ ಪದಕ್ಕೆ ಬದಲಾಗಿ ‘ನಾಲ್ಕಕ್ಕೆ ಹೆಚ್ಚಿಲ್ಲದ’ ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ii) (ಸಿ) ಖಂಡದಲ್ಲಿ ‘ಆರು’ ಎಂಬ ಪದಕ್ಕೆ ಬದಲಾಗಿ ‘ಹತ್ತು’ ಎಂಬ ಪದವನ್ನು ಪ್ರತ್ಯಾಯೋಜಿಸಿ;

(ಬಿ) (4)ನೇ ಉಪಪ್ರಕರಣದಲ್ಲಿ "(6)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು" ಎಂಬ ಪದಗಳನ್ನು ಆವರಣಗಳನ್ನು, ಮತ್ತು ಅಂಕಿಯನ್ನು ಲೋಪಿಸಿ;

(ಸಿ) (6)ನೇ ಉಪಪ್ರಕರಣವನ್ನು ಲೋಪಿಸಿ.

3. 13ನೇ ಪ್ರಕರಣದ (2) ನೇ ಉಪಪ್ರಕರಣದಲ್ಲಿ ‘ಮೂವರು ನಿರ್ದೇಶಕರು’ ಎಂಬ ಪದಗಳಿಗೆ ಬದಲಾಗಿ ‘ನಾಲ್ವರು ನಿರ್ದೇಶಕರು’ ಎಂಬ ಪದಗಳನ್ನು ಪ್ರತಿಯೋಜಿಸಿ. - ಅ
4. 17ನೇ ಪ್ರಕರಣದಲ್ಲಿ,-

(ಎ) (4ಎಫ್) ಖಂಡದ ತರುವಾಯ ಕೆಳಕಂಡವನ್ನು ಸೇರಿಸಿ, ಎಂದರೆ:- - ಅ

"(4ಜಿ) 46ಸಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು)

ನಿಧಿಯಿಂದ ಅಭಿವೃದ್ಧಿ ಬ್ಯಾಂಕಿಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ಕೊಡುವುದು ಮತ್ತು ಅದರ ಬಾಂಡುಗಳು

ಮತ್ತು ಡಿಬೆಂಚರುಗಳನ್ನು ಖರೀದಿಸುವುದು;

(4ಹೆಚ್) (ಎ) ತಗಾದೆಯ ಮೇಲೆ ಅಥವಾ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸ

ಧನವನ್ನು ಯಾವುದರಲ್ಲಿ ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ, ಆ ಯಾವುದೇ ಸ್ಟಾಕುಗಳು,

ನಿಧಿಗಳು ಮತ್ತು ಭದ್ರತೆಗಳ (ಸ್ಥಿರ ಸ್ವತ್ತನ್ನು ಹೊರತುಪಡಿಸಿ) ಇವುಗಳ ಭದ್ರತೆಯ ಮೇಲೆ ಕೊಡಲಾದ ಅಂಥ ಸಾಲ ಮತ್ತು

ಮುಂಗಡದ ದಿನಾಂಕದಿಂದ, ತೊಂಬತ್ತು ದಿವಸಗಳಿಗೆ ಮೀರದ ಅವಧಿಯ ಮುಕ್ತಾಯದ ತರುವಾಯ ಮರು ಸಂದಾಯ

ಮಾಡಬೇಕಾಗಿರುವ; ಅಥವಾ

(ಬಿ) ಎರಡು ಅಥವಾ ಹೆಚ್ಚಿನ ಮಾನ್ಯತೆ ಪಡೆದ ಸಹಿಗಳನ್ನು ಹೊಂದಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ

ದಿನಾಂಕದಿಂದ ಐದು ವರ್ಷಗಳೊಳಗೆ ಅವಧಿ ಪೂರ್ಣವಾಗುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ

ವ್ಯವಹಾರಗಳಿಂದ ಉದ್ಭವಿಸುವ ವಿನಿಮಯ ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳ ಭದ್ರತೆಯ ಮೇಲೆ,

- ಸಾಲ ಮತ್ತು ಮುಂಗಡಗಳನ್ನು ಅಭಿವೃದ್ಧಿ ಬ್ಯಾಂಕಿಗೆ ಕೊಡುವುದು";

(ಬಿ) (8ಎ) ಖಂಡದಲ್ಲಿ 'ಠೇವಣಿ ವಿಮಾ ನಿಗಮ' ಎಂಬ ಪದಗಳ ತರುವಾಯ 'ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು

ಸೇರಿಸಿ.

(5) 46ಬಿ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸಿ, ಎಂದರೆ:- ಅಭಿವೃದ್ಧಿ ಬಾ

ರಾಷ್ಟ್ರೀಯ ಕೈಗಾರಿಕಾ (ದೀರ್ಘಾವಧಿ ಕಾರ್ಯಾಚರಣೆಯ) ಸಾಲ ನಿಧಿ

" 46ಸಿ (1) ಬ್ಯಾಂಕು, ರಾಷ್ಟ್ರೀಯ ಕೈಗಾರಿಕಾ (ದೀರ್ಘಾವಧಿ ಕಾರ್ಯಾಚರಣೆಯ) ಸಾಲ ನಿಧಿ ಎಂದು ಕರೆಯಲಾಗುವ ಒಂದು

ನಿಧಿಯನ್ನು ಸ್ಥಾಪಿಸತಕ್ಕುದು ಮತ್ತು ಇಟ್ಟುಕೊಂಡು ಬರತಕ್ಕುದು ಮತ್ತು ಅದಕ್ಕೆ,-

(ಎ) ಬ್ಯಾಂಕು ಹತ್ತು ಕೋಟಿ ರೂ.ಗಳ ಪ್ರಾರಂಭಿಕ ಮೊತ್ತ;

(ಬಿ) ಬ್ಯಾಂಕು ಪ್ರತಿ ವರ್ಷ ವಂತಿಗೆ ಕೊಡಬಹುದಾದಂಥ ಇನ್ನೂ ಹೆಚ್ಚಿನ ಮೊತ್ತ ಜಮೆ ಮಾಡತಕ್ಕುದು:

ಪರಂತು, 1965ರ ಜೂನ್ 30ನೇ ದಿವಸದಂದು ಮುಕ್ತಾಯವಾಗುವ ವರ್ಷದಿಂದ ಪ್ರಾರಂಭವಾಗುವ ಐದು ವರ್ಷಗಳ

ಪ್ರತಿಯೊಂದರ ಅವಧಿಯಲ್ಲಿ ವಾರ್ಷಿಕ ವಂತಿಗೆಯು ಐದು ಕೋಟಿ ರೂ. ಗಳಿಗಿಂತ ಕಡಿಮೆಯಿರತಕ್ಕುದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಸಂದರ್ಭಗಳು ಹಾಗೆ ಅಗತ್ಯಪಡಿಸಿದರೆ ಯಾವುದೇ ವರ್ಷದಲ್ಲಿ ಐದು ಕೋಟಿ

ರೂಪಾಯಿಗಳ ಸದರಿ ಮೊತ್ತವನ್ನು ಕಡಿಮೆ ಮಾಡಲು ಬ್ಯಾಂಕನ್ನು ಅಧಿಕೃತಗೊಳಿಸಬಹುದು.

(2) ಸದರಿ ನಿಧಿಯಲ್ಲಿನ ಮೊಬಲಗನ್ನು ಬ್ಯಾಂಕು ಕೆಳಕಂಡ ಉದ್ದೇಶಗಳಿಗಾಗಿ ಮಾತ್ರ ವಿನಿಯೋಗಿಸತಕ್ಕುದು, ಎಂದರೆ:-

(ಎ) ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ, 1948ರ (1948ರ 15) ಮೇರೆಗೆ ಸ್ಥಾಪಿಸಲಾದ ಕೈಗಾರಿಕಾ ಹಣಕಾಸು ನಿಗಮ,

ರಾಜ್ಯ ಹಣಕಾಸು ನಿಗಮ ಅಧಿನಿಯಮ, 1951ರ (1951ರ 63) ಮೇರೆಗೆ ಸ್ಥಾಪಿಸಲಾದ ರಾಜ್ಯ ಹಣಕಾಸು ನಿಗಮ

ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಇತರ ಹಣಕಾಸು ನಿಗಮವು ಹೊರಡಿಸಿದ

ಸ್ಟಾಕುಗಳು, ಷೇರುಗಳು, ಬಾಂಡುಗಳು ಅಥವಾ ಡಿಬೆಂಚರುಗಳನ್ನು ಖರೀದಿ ಮಾಡುವ ಅಥವಾ ಅವುಗಳಿಗೆ ವಂತಿಗೆ

ನೀಡುವ ಉದ್ದೇಶಕ್ಕಾಗಿ ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವುದೇ ಇತರ ವ್ಯವಹಾರದ ಉದ್ದೇಶಕ್ಕಾಗಿ ಅಭಿವೃದ್ಧಿ

ಬ್ಯಾಂಕಿಗೆ ಸಾಲಗಳು ಅಥವಾ ಮುಂಗಡಗಳನ್ನು ಕೊಡುವುದು.

(ಬಿ) ಅಭಿವೃದ್ಧಿ ಬ್ಯಾಂಕು ಹೊರಡಿಸಿದ ಬಾಂಡುಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು."

## ಭಾಗ - II

### ಕೈಗಾರಿಕಾ ವಿವಾದಗಳ ಅಧಿನಿಯಮ, 1947ಕ್ಕೆ (1947ರ 14) ತಿದ್ದುಪಡಿಗಳು

<u>ತಿದ್ದುಪಡಿ</u> <u>ತಿದ್ದುಪಡಿಗ</u>

1

2ನೇ ಪ್ರಕರಣದಲ್ಲಿ (ಬಿಬಿ) ಖಂಡದಲ್ಲಿ "ಮತ್ತು ಒಳಗೊಳ್ಳುತ್ತದೆ", ಎಂಬ ಪದಗಳ ತರುವಾಯ "ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು"ಎಂಬ ಪದಗಳನ್ನು ಸೇರಿಸಿ. ಅಭಿವೃದ್ಧಿ

## ಭಾಗ - III

### *ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ, 1948ಕ್ಕೆ (1948ರ 5) ತಿದ್ದುಪಡಿಗಳು*

ತಿದ್ದುಪಡಿ ತಿದ್ದುಪಡಿಗಳ

1

1. 2ನೇ ಪ್ರಕರಣದಲ್ಲಿ (ಬಿ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸಿ, ಎಂದರೆ:- ಅಭಿವೃದ್ಧಿ

'(ಬಿಬಿ) "ಅಭಿವೃದ್ಧಿ ಬ್ಯಾಂಕು" ಎಂದರೆ, ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಅಧಿನಿಯಮ, 1964ರ ಮೇರೆಗೆ ಸ್ಥಾಪಿಸಲಾದ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು'

2. 4ನೇ ಪ್ರಕರಣದಲ್ಲಿ,-

(ಎ) (5) ಮತ್ತು (6)ನೇ ಉಪಪ್ರಕರಣವನ್ನು ಲೋಪಿಸಿ, ಮತ್ತು ಈ ಅಧಿನಿಯಮದ ಮೂಲಕ ಸೇರಿಸಲಾದಂತೆ,

(ಬಿ) (7) ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕ್" ಎಂಬ ಪದಗಳಿಗೆ ಬದಲಾಗಿ ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ, "ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿ 1948ರ 4ಎ ಪ್ರಕರಣದ(1)ನೇ ಉಪಪ್ರಕರಣದ ಗೊತ್ತುಪಡಿಸಿದ ದಿನಾಂಕ.

3. 4ನೇ ಪ್ರಕರಣದ ತರುವಾಯ ಕೆಳಕಂಡ ಪ್ರಕರಣವನ್ನು ಸೇರಿಸಿ, ಎಂದರೆ,- ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆಯ ದಿನಾಂಕ.

**ಷೇರುಗಳ ವರ್ಗಾವಣೆ ಮತ್ತು ಬಂಡವಾಳದ ಹೆಚ್ಚಳ:-**

"4ಎ (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು,

(ಎ) ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕು ಹೊಂದಿರುವ ನಿಗಮದ ಎಲ್ಲ ಷೇರುಗಳು ಅಭಿವೃದ್ಧಿ ಬ್ಯಾಂಕಿಗೆ ವರ್ಗಾವಣೆಗೊಳ್ಳ-

ತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕುದು ಮತ್ತು ಅದಕ್ಕಾಗಿನ ನಷ್ಟ ಪರಿಹಾರವಾಗಿ ಆ ಸರ್ಕಾರ ಮತ್ತು ಆ ಬ್ಯಾಂಕು ಹೊಂದಿದ್ದ

ಷೇರುಗಳ ಮುಖಬೆಲೆಯನ್ನು ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿಗೆ ಅಭಿವೃದ್ಧಿ ಬ್ಯಾಂಕು ಕ್ರಮವಾಗಿ ಅಭಿವೃದ್ಧಿ ಬ್ಯಾಂಕು

ಸಂದಾಯ ಮಾಡತಕ್ಕುದು;

(ಬಿ) ನಿಗಮವು ಹೊರಡಿಸಿದ ಬಂಡವಾಳವನ್ನು ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ಷೇರುಗಳಿಂದ

ಹೆಚ್ಚಿಸತಕ್ಕದ್ದು ಮತ್ತು ಅಂಥ ಎಲ್ಲ ಷೇರುಗಳು, ಅಭಿವೃದ್ಧಿ ಬ್ಯಾಂಕಿಗೆ ವರ್ಗಾವಣೆಯಾಗತಕ್ಕುದು ಮತ್ತು ಅಭಿವೃದ್ಧಿ ಬ್ಯಾಂಕು ವಂತಿಗೆ

ನೀಡತಕ್ಕುದು. ಆದಾಗ್ಯೂ, ಅಂಥ ಏರಿಕೆಯ ತರುವಾಯ, ಅಭಿವೃದ್ಧಿ ಬ್ಯಾಂಕು ನಿಗಮದ ಸಂದಾಯ ಮಾಡಿದ ಬಂಡವಾಳದ

ಶೇಕಡಾ ಐವತ್ತಕ್ಕೆ ಕಡಿಮೆಯಿಲ್ಲದಷ್ಟನ್ನು ಅಭಿವೃದ್ಧಿ ಬ್ಯಾಂಕು ಹೊಂದಿರಬೇಕು.

(2) ನಿಗಮದ ಬಂಡವಾಳದಲ್ಲಿ ಉಳಿದ ಷೇರುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಹೊರಡಿಸಿದರೆ ಮತ್ತು ಹೊರಡಿಸಿ ಹಾಗೆ

ಅಂಥ ಹೆಚ್ಚಿನ ನೀಡಿಕೆಯ ದಿನಾಂಕದಂದು ಆ ಷೇರುಗಳ ಮೇಲೆ ಸಂದಾಯ ಮಾಡಿದ ಬಂಡವಾಳಕ್ಕೆ ಸಂದರ್ಭಗಳು ಅವಕಾಶ

ಕೊಡುವ ಮಟ್ಟಿಗೆ ಪ್ರಮಾಣಾನುಸಾರ ನಿಗಮದ ಷೇರುಗಳ ಧಾರಕರಿಗೆ ಕೊಡಮಾಡತಕ್ಕುದು:

ಪರಂತು, ಅಂಥ ಷೇರುಗಳು ಯಾವುದೇ ಹಂಚಿಕೆಯಾಗದೆ ಉಳಿದರೆ, ಅಭಿವೃದ್ಧಿ ಬ್ಯಾಂಕು ಅವುಗಳಿಗೆ ವಂತಿಗೆ ಕೊಡತಕ್ಕುದು".

4. 6ನೇ ಪ್ರಕರಣದಲ್ಲಿ,–

(ಎ) (3)ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ" ಎಂಬ ಪದಗಳಿಗೆ ಬದಲಾಗಿ "ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ,

(ಬಿ) (4) ನೇ ಉಪಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪಪ್ರಕರಣವನ್ನು ಪ್ರತ್ಯಾಯೋಜಿಸಿ,

1948ರ ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮದ

ಎಂದರೆ,–

4ಎ ಪ್ರಕರಣದ (1)ನೇ ಉಪಪ್ರಕರಣದ

:

ಮೇರೆಗೆ ಕೇಂದ್ರ ಸರ್ಕಾರವು

"(4) ಒಂದು ಪ್ರಶ್ನೆ ನೀತಿಗೆ ಸಂಬಂಧಪಟ್ಟ ಪ್ರಶ್ನೆಯೇ ಅಥವಾ ಅಲ್ಲವೇ ಎಂಬುದರ ಬಗ್ಗೆ ಅಭಿವೃದ್ಧಿ ಬ್ಯಾಂಕು ಮತ್ತು ಮಂಡಲಿಯ ನಡುವೆ ಯಾವುದೇ ವಿವಾದ ಉದ್ಭವಿಸಿದರೆ, ಆ ವಿವಾದವನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕುದು, ಮತ್ತು ಅದರ ಮೇಲೆ ಅದರ ತೀರ್ಮಾನ ಅಂತಿಮವಾಗಿರತಕ್ಕುದು."

(ಸಿ) (5)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರವು ವಿಧಿಸಿದ" ಎಂಬ ಪದಗಳಿಗೆ ಬದಲಾಗಿ "ಅಭಿವೃದ್ಧಿ ಬ್ಯಾಂಕು ಕೊಟ್ಟ" ಎಂಬ ಪದಗಳನ್ನು ಪ್ರತ್ಯಾಯೋಜಿಸಿ.

5. 10ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣದಲ್ಲಿ,–

ಈ ಅಧಿನಿಯಮದ ಮೂಲಕ ಸೇರಿಸಲಾದಂತೆ,

(i) (ಎ) ಖಂಡದಲ್ಲಿ "ಮಂಡಲಿ" ಎಂಬ ಪದಕ್ಕೆ ಬದಲಾಗಿ "ಅಭಿವೃದ್ಧಿ ಬ್ಯಾಂಕು" ಎಂಬ

ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ,

ಪದಗಳನ್ನು ಪ್ರತ್ಯಾಯೋಜಿಸಿ;

1948ರ 4ಎ ಪ್ರಕರಣದ(1)ನೇ ಉಪಪ್ರಕರಣದ

ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

ಗೊತ್ತುಪಡಿಸಿದ ದಿನಾಂಕ.

(iii) (ಬಿ) ಖಂಡದಲ್ಲಿ "ರಿಸರ್ವ್ ಬ್ಯಾಂಕಿನ ಕೇಂದ್ರ ಮಂಡಲಿ" ಎಂಬ ಪದಗಳಿಗೆ "ಕೇಂದ್ರ ಸರ್ಕಾರ" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(iv)(ಡಿ) ಖಂಡದಲ್ಲಿ "ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕು" ಎಂಬ ಪದಗಳಿಗೆ ಬದಲಾಗಿ "ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ಬಿ) (1)ನೇ ಉಪಪ್ರಕರಣದ ತರುವಾಯ ಈ ಕೆಳಕಂಡ ಉಪಪ್ರಕರಣವನ್ನು ಸೇರಿಸಿ, ಎಂದರೆ:-

"(2)4ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು; ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ

(ಎಎ) ಖಂಡ ಅಥವಾ (ಬಿ) ಖಂಡದ ಮೇರೆಗೆ ಪದವನ್ನು ಧಾರಣ ಮಾಡಿರುವ ನಿರ್ದೇಶಕರು ಹಾಗೆಂದು ಅವರ ಪದಗಳನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕುದು".

6. 10ಎ ಪ್ರಕರಣದ (1) ನೇ ಉಪಪ್ರಕರಣದಲ್ಲಿ "ಮಂಡಲಿಯು" ಎಂಬ ಪದಗಳಿಗೆ ಬದಲಾಗಿ ಈ ಅಧಿನಿಯಮದ ಮೂಲಕ ಸೇರಿಸಲಾದಂತೆ "ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿದೆ.

ಕೈಗಾರಿಕಾದ್ಯಮಿ ಹಣಕಾಸು ನಿಗಮ ಅಧಿನಿಯಮ,

1948ರ4 ಎ ಪ್ರಕರಣದ (1)ನೇ ಉಪಪ್ರಕರಣದ

ಮೇರೆಗೆ ಕೇಂದ್ರ ಸರ್ಕಾರವು

7. 11ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ ಪರಂತುಕದ ಕೊನೆಯಲ್ಲಿ 'ಅಥವಾ ಅಭಿವೃದ್ಧಿ ಬ್ಯಾಂಕಿನ' ಎಂಬ ಪದಗಳನ್ನು ಸೇರಿಸಿ. - ಅದೇ -

8. 13ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರವು" ಎಂಬ ಪದಗಳ ತರುವಾಯ " ಅಭಿವೃದ್ಧಿ- ಬ್ಯಾಂಕಿನೊಡನೆ ಸಮಾಲೋಚಿಸಿದ ತರುವಾಯ" ಎಂಬ ಪದಗಳನ್ನು ಸೇರಿಸಿ. - ಅದೇ -

9. 13ಎ ಪ್ರಕರಣದಲ್ಲಿ 'ಮಂಡಲಿಯೊಡನೆ' ಎಂಬ ಪದಗಳಿಗೆ ಬದಲಾಗಿ 'ಅಭಿವೃದ್ಧಿ ಬ್ಯಾಂಕಿನೊಡನೆ' ಎಂಬ ಪದಗಳನ್ನು ಪ್ರತ್ಯಾಯೋಜಿಸಿ. - ಅದೇ -

10. 17ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ ಅಥವಾ ರಿಸರ್ವ್ ಬ್ಯಾಂಕ್" ಎಂಬ ಪದಗಳಿಗೆ ಬದಲಾಗಿ ಅಭಿವೃದ್ಧಿ ಬ್ಯಾಂಕು ಅಥವಾ ಕೇಂದ್ರ ಸರ್ಕಾರ ಎಂಬ ಪದಗಳನ್ನು ಪ್ರತ್ಯಾಯೋಜಿಸಿ.

11. 18ನೇ ಪ್ರಕರಣದಲ್ಲಿ 'ಕೇಂದ್ರ ಸರ್ಕಾರ' ಎಂಬ ಪದಗಳಿಗೆ ಬದಲಾಗಿ 'ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು ಪ್ರತ್ಯಾಯೋಜಿಸಿ. - ಅ

12. 21ನೇ ಪ್ರಕರಣದಲ್ಲಿ (4)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರದಿಂದ ಹಣ ಸಾಲ ಪಡೆಯುವುದು" ಎಂಬ ಪದಗಳ ತರುವಾಯ "ಅಥವಾ ಅಭಿವೃದ್ಧಿ ಬ್ಯಾಂಕಿನಿಂದ" ಎಂಬ ಪದಗಳನ್ನು ಮತ್ತು "ಕೇಂದ್ರ ಸರ್ಕಾರದಿಂದ ನಿಗಮವು ಸಾಲ ಪಡೆದ" ಎಂಬ ಪದಗಳ ತರುವಾಯ " ಮತ್ತು ಅಭಿವೃದ್ಧಿ ಬ್ಯಾಂಕಿನಿಂದ " ಎಂಬ ಪದಗಳನ್ನು ಸೇರಿಸತಕ್ಕುದು. - ಅದೇ -

13. 23ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(ಎ) (ಎಚ್) ಖಂಡದಲ್ಲಿ 'ಕೇಂದ್ರ ಸರ್ಕಾರ' ಎಂಬ ಪದಗಳಿಗೆ ಬದಲಾಗಿ 'ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು ಪ್ರತ್ಯಾಯೋಜಿಸಿ; - ಅದೇ

(ಬಿ) (ಐ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸಿ, ಎಂದರೆ:-

``(ii) ಅಭಿವೃದ್ಧಿ ಬ್ಯಾಂಕಿನ ಅನುಮೋದನೆಯೊಡನೆ ಯಾವುದರ ಮುಖ್ಯ ಉದ್ದೇಶವು ಭಾರತದಲ್ಲಿ ಉದ್ಯಮ ಸಂವರ್ಧನೆ ಅಥವಾ

ಅಭಿವೃದ್ಧಿ ಅಥವಾ ಅಂಥ ಸಂವರ್ಧನೆ ಅಥವಾ ಅಭಿವೃದ್ಧಿಗಾಗಿ ಹಣಕಾಸು ಸಹಾಯವನ್ನು ಮಂಜೂರು ಮಾಡುವುದು

ಆಗಿರುವುದು ಯಾವುದೇ ಸಂಸ್ಥೆಯ ವ್ಯವಹಾರದ ಹೊಣೆಗಾರಿಕೆಗಳನ್ನು ಒಳಗೊಂಡು ಉದ್ಯಮವನ್ನು ಆರ್ಜಿಸುವುದು".

14. 24ನೇ ಪ್ರಕರಣದಲ್ಲಿ,-

(i) "ಒಂದು ಕೋಟಿ" ಎಂಬ ಪದಗಳು ಬರುವಲ್ಲೆಲ್ಲ "ಎರಡು ಕೋಟಿ" ಎಂಬ ಪದಗಳನ್ನು ಪ್ರತ್ಯಾಯೋಜಿಸಿ; ಈ ಅಧಿನಿಯಮದ ಮೂಲಕ ಸೇರಿಸಲಾದಂತೆ

ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ,

1948ರ 4ಎ ಪ್ರಕರಣದ (1)ನೇ ಉಪಪ್ರಕರಣದ

(ii) 'ಕೇಂದ್ರ ಸರ್ಕಾರ' ಎಂಬ ಪದಗಳಿಗೆ ಬದಲಾಗಿ 'ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು ಪ್ರತ್ಯಾಯೋಜಿಸಿ. ಮೇರೆಗೆ

15. 32ಎ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಪ್ರಕರಣವನ್ನು ಪ್ರತ್ಯಾಯೋಜಿಸಿ, ಎಂದರೆ:- - ಅದೇ

"32ಎ. ವಿಶೇಷ ಮೀಸಲು ನಿಧಿ:- (1) ಯಾವುದೇ ಪೂರ್ಣಗೊಳಿಸಿದ ಲೆಕ್ಕ ಒಪ್ಪಿಸುವ ಅವಧಿಗೆ ಸಂಬಂಧಿಸಿದಂತೆ 4ಎ ಪ್ರಕರಣದ

(1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಕೇಂದ್ರ ಸರ್ಕಾರ ಮತ್ತು ರಿಸರ್ವ್

ಬ್ಯಾಂಕು ಧಾರಣ ಮಾಡಿದ ನಿಗಮದ ಷೇರುಗಳ ಮೇಲೆ ಒದಗಿ ಬಂದ ಎಲ್ಲಾ ಲಾಭಾಂಶಗಳನ್ನು ಘೋಷಿಸಿರಲಿ, ಅಥವಾ ಇಲ್ಲದಿರಲಿ

ವಿಶೇಷ ಮೀಸಲು ನಿಧಿಗೆ ಜಮಾ ಮಾಡತಕ್ಕುದು.

(2) ಅಭಿವೃದ್ಧಿ ಬ್ಯಾಂಕಿಗೆ ಒದಗಿಬಂದ ಎಲ್ಲಾ ಲಾಭಾಂಶಗಳನ್ನು ಅದಕ್ಕೆ ಸಂದಾಯ ಮಾಡುವುದಕ್ಕೆ ಬದಲು (1)ನೇ ಉಪಪ್ರಕರಣ ಮತ್ತು

ಈ ಉಪಪ್ರಕರಣದ ಮೇರೆಗೆ ಆ ನಿಧಿಗೆ ಜಮಾ ಮಾಡಲಾದ ಮೊತ್ತಗಳ ಒಟ್ಟು ಮೊತ್ತವು ಒಂದು ಕೋಟಿ ರೂಪಾಯಿಗಳನ್ನು

ಮೀರುವವರೆಗೆ ಸದರಿ ನಿಧಿಗೆ ಸಹ ಜಮಾ ಮಾಡತಕ್ಕುದು.

(3) ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕು ಮತ್ತು ಅಭಿವೃದ್ಧಿ ಬ್ಯಾಂಕುಗಳು ಮಾತ್ರ ಸದರಿ ನಿಧಿಗೆ ಕ್ಲೇಮುಗಳನ್ನು ಹೊಂದಿರತಕ್ಕುದು."

16. 34ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣದಲ್ಲಿ,-

(i) "ಕೇಂದ್ರ ಸರ್ಕಾರವು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನೊಂದಿಗೆ ಸಮಾಲೋಚಿಸಿ" ಎಂಬ ಪದಗಳಿಗೆ ಬದಲಾಗಿ
"ಅಭಿವೃದ್ಧಿ ಬ್ಯಾಂಕಿನೊಂದಿಗೆ" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ii) "ಕೇಂದ್ರ ಸರ್ಕಾರ" ಎಂಬ ಪದಗಳು ಅವು ಬರುವ ಎರಡನೆಯ ಬಾರಿಗೆ ಬರುವಲ್ಲೆಲ್ಲ ಅವುಗಳಿಗೆ ಬದಲಾಗಿ
"ಅಭಿವೃದ್ಧಿ ಬ್ಯಾಂಕು " ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ಬಿ) (4)ನೇ ಉಪಪ್ರಕರಣದಲ್ಲಿ "ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್" ಎಂಬ ಪದಗಳಿಗೆ ಬದಲಾಗಿ
"ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ಸಿ) (5)ನೇ ಉಪಪ್ರಕರಣವನ್ನು ಲೋಪಿಸಿ;

(ಡಿ) (6)ನೇ ಉಪಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪಪ್ರಕರಣವನ್ನು ಪ್ರತ್ಯಾಯೋಜಿಸಿ; ಎಂದರೆ:-

"(6) ಈ ಹಿಂದಿನ ಉಪಪ್ರಕರಣಗಳಲ್ಲಿ ಅಡಕವಾಗಿರುವ ಯಾವುದಕ್ಕೂ ಬಾಧಕವಾಗದಂತೆ ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ
ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನನ್ನು ಪರೀಕ್ಷಿಸಲು ಮತ್ತು ಅದರ ಬಗ್ಗೆ ವರದಿ ಮಾಡಲು ನೇಮಕ
ಮಾಡಬಹುದು. ಮತ್ತು ಅಂಥ ಪರೀಕ್ಷೆ ಮತ್ತು ವರದಿಗೆ ಸಂಬಂಧಿಸಿದಂತೆ ಅವನು ವಹಿಸಿದ ಯಾವುದೇ ವೆಚ್ಚವನ್ನು ನಿಗಮವು
ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನಿಗೆ ಸಂದಾಯ ಮಾಡತಕ್ಕುದು."

17. 35ನೇ ಪ್ರಕರಣದಲ್ಲಿ,-
(ಎ) (2)ನೇ ಉಪಪ್ರಕರಣದಲ್ಲಿ, 'ಕೇಂದ್ರ ಸರ್ಕಾರ' ಎಂಬ ಪದಗಳಿಗೆ ಬದಲಾಗಿ ಅವು ಈ ಅಧಿನಿಯಮದ ಮೂಲಕ ಸೇರಿಸಲಾದಂತೆ
ಸಂಭವಿಸುವ ಎರಡೂ ಕಡೆಗಳಲ್ಲೂ 'ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು ಪ್ರತ್ಯಾಯೋಜಿಸಿ; ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ,

1948ರ 4ಎ ಪ್ರಕರಣದ(1)ನೇ ಉಪಪ್ರಕರಣದ
(ಬಿ) (3)ನೇ ಉಪಪ್ರಕರಣದಲ್ಲಿ "ಮತ್ತು ರಿಸರ್ವ್ ಬ್ಯಾಂಕು" ಎಂಬ ಪದಗಳಿಗೆ ಬದಲಾಗಿ ಮೇರೆಗೆ ಕೇಂದ್ರ ಸರ್ಕಾರ
"ರಿಸರ್ವ್ ಬ್ಯಾಂಕು ಮತ್ತು ಅಭಿವೃದ್ಧಿ ಬ್ಯಾಂಕು" ಎಂಬ ಪದಗಳನ್ನು ಪ್ರತ್ಯಾಯೋಜಿಸಿ. ಗೊತ್ತುಪಡಿಸಲಾದ ದಿನಾಂಕ.

18. 36ನೇ ಪ್ರಕರಣಕ್ಕೆ ಅದರ (1)ನೇ ಉಪಪ್ರಕರಣವೆಂದು ಪುನರಂಕಿಸಿ; ಮತ್ತು

(ಎ) ಹಾಗೆ ಪುನರಂಕಿಸಲಾದ (1)ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕನ್ನು ಹೊರತುಪಡಿಸಿ" ಎಂಬ

ಪದಗಳಿಗೆ ಬದಲಾಗಿ "ಅಭಿವೃದ್ಧಿ ಬ್ಯಾಂಕನ್ನು ಹೊರತುಪಡಿಸಿ" ಎಂಬ ಪದಗಳನ್ನು ಪ್ರತ್ಯಾಯೋಜಿಸಿ;

(ಬಿ) ಹಾಗೆ ಪುನರಂಕಿಸಲಾದ (1)ನೇ ಉಪಪ್ರಕರಣದ ತರುವಾಯ ಈ ಕೆಳಕಂಡ ಉಪಪ್ರಕರಣಗಳನ್ನು ಸೇರಿಸಿ, ಎಂದರೆ:-

"(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದಂತೆ ಷೇರುಗಳನ್ನು ಆರ್ಜಿಸಿದ ತರುವಾಯ, ಕೇಂದ್ರ ಸರ್ಕಾರವು ಆ ಷೇರುಗಳನ್ನು
ಅಭಿವೃದ್ಧಿ ಬ್ಯಾಂಕಿಗೆ, ಅಂಥ ಆರ್ಜನೆಗಾಗಿ ಕೇಂದ್ರ ಸರ್ಕಾರವು ಸಂದಾಯ ಮಾಡಿದ ಮೊಬಲಗಿಗೆ ಸಮನಾದ ಮೊಬಲಗನ್ನು
ಆ ಬ್ಯಾಂಕು ಸಂದಾಯ ಮಾಡಿದ ಮೇಲೆ ವರ್ಗಾವಣೆ ಮಾಡತಕ್ಕುದು.

(3) (2)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಆ ಷೇರುಗಳನ್ನು ಅಭಿವೃದ್ಧಿ ಬ್ಯಾಂಕಿಗೆ ವರ್ಗಾಯಿಸಿದ ತರುವಾಯ ಕೇಂದ್ರ
ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ
ಜಾರಿಗೆ ಬರುವಂತೆ ಎಲ್ಲ ವ್ಯವಹಾರ, ಸ್ವತ್ತು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಹಕ್ಕುಗಳು ( ಈ ಅಧಿನಿಯಮದ ಉಪಬಂಧಗಳ
ಅನುಸರಣೆಯಲ್ಲಿ ನಿಗಮವು ಮಂಜೂರ್ಮಾಡಿದ ಸಾಲ ಮತ್ತು ಮುಂಗಡಗಳನ್ನು ವಸೂಲ್ಮಾಡುವ ಹಕ್ಕನ್ನು ಒಳಗೊಂಡು) ಹಿತಾಸಕ್ತಿಗಳು
ಯಾವುದೇ ಸ್ವರೂಪದ ವಿಶೇಷಾಧಿಕಾರಗಳು ಮತ್ತು ಬಾಧ್ಯತೆಗಳನ್ನು ಒಳಗೊಂಡು ನಿಗಮದ ಸಮಗ್ರ ಕೈಗಾರಿಕೆಯು ಅಭಿವೃದ್ಧಿ ಬ್ಯಾಂಕಿಗೆ
ವರ್ಗಾವಣೆಯಾಗತಕ್ಕುದು ಮತ್ತು ಅದರಲ್ಲಿ ನಿಹಿತವಾಗತಕ್ಕುದು.

(4) ಅಭಿವೃದ್ಧಿ ಬ್ಯಾಂಕಿಗೆ ನಿಗಮದ ಕೈಗಾರಿಕೆಯನ್ನು ವರ್ಗಾವಣೆ ಮಾಡುವುದನ್ನು ಜಾರಿಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು
ಬರಹದಲ್ಲಿನ ಆದೇಶದ ಮೂಲಕ ಯಾವುದಕ್ಕಾಗಿ ವ್ಯವಸ್ಥೆ ಮಾಡುವುದು ಅವಶ್ಯವೋ ಆ ಎಲ್ಲ ವಿಷಯಗಳಿಗಾಗಿ ಆ ಎಲ್ಲ
ವಿಷಯಗಳಿಗೆ ವ್ಯವಸ್ಥೆ ಮಾಡುವ ಯೋಜನೆಯನ್ನು ರೂಪಿಸತಕ್ಕುದು ಮತ್ತು ಹಾಗೆ ರೂಪಿಸಲಾದ ಯೋಜನೆಯು, ನಿಗಮ, ಅದಕ್ಕೆ
ಸಾಲ ಕೊಟ್ಟಿರುವವರು ಮತ್ತು ನಿಯೋಜಿತರ ಹಾಗೂ ಅಭಿವೃದ್ಧಿ ಬ್ಯಾಂಕಿನ ಮೇಲೆ ಬಂಧನಕಾರಿಯಾಗಿರತಕ್ಕುದು ಮತ್ತು ತತ್ಕಾಲದಲ್ಲಿ
ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರು ಅಥವಾ ಇತರ ಲಿಖಿತದಲ್ಲಿ ಅದಕ್ಕೆ ತದ್ವಿರುದ್ಧವಾದುದು
ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕುದು.

(5) ಈ ಪ್ರಕರಣದ ಉಪಬಂಧಗಳು, ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಅಧಿನಿಯಮದ
ಅಥವಾ ಇತರ ಕಾನೂನಿನ ಕಾರಣದಿಂದಾಗಿ ಜಾರಿಯಲ್ಲಿರುವ ಯಾವುದೇ ಲಿಖಿತದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪರಿಣಾಮವನ್ನು
ಹೊಂದಿರತಕ್ಕುದು".

19. 40ಎ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸಿ, ಎಂದರೆ:-
"40 ಬಿ ತೊಂದರೆಗಳ ನಿವಾರಣೆ:-

(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ
ಈ ಅಧಿನಿಯಮದ ಮೂಲಕ ಸೇರಿಸಲಾದಂತೆ

ಉದ್ಭವಿಸಿದರೆ, ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಯನ್ನು
ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ,

ನಿವಾರಿಸುವುದಕ್ಕಾಗಿ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಲ್ಲದಂಥ ಅವಶ್ಯ ಅಥವಾ
1948ರ 4ಎ ಪ್ರಕರಣದ (1)ನೇ ಉಪ ಪ್ರಕರಣದ

ನಿಹಿತವೆಂದು ಅದಕ್ಕೆ ತೋರಿದಂಥ ಉಪಬಂಧವನ್ನು ಮಾಡಬಹುದು.
ಮೇರೆಗೆ, ಕೇಂದ್ರ ಸರ್ಕಾರವು ಗೊತ್ತುಪಡಿಸಿದ

ದಿನಾಂಕ

(2) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು, 4ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಪರಿಣಾಮವನ್ನು ಹೊಂದಿರುವ ಹಾಗೆ ಮಾಡಬಹುದು." - ಅದೇ

20. 42ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ, " ಕೇಂದ್ರ ಸರ್ಕಾರವು" ಎಂಬ ಪದಗಳ ತರುವಾಯ "ಅಭಿವೃದ್ಧಿ ಬ್ಯಾಂಕಿನೊಡನೆ ಸಮಾಲೋಚಿಸಿ" ಎಂಬ ಪದಗಳನ್ನು ಸೇರಿಸಿ. - ಅದೇ

21. 43ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ "ರಿಸರ್ವ್ ಬ್ಯಾಂಕು" ಎಂಬ ಪದಗಳಿಗೆ ಬದಲಾಗಿ "ಅಭಿವೃದ್ಧಿ ಬ್ಯಾಂಕು " ಎಂಬ ಪದಗಳನ್ನು ಪ್ರತ್ಯಾಯೋಜಿಸಿ. - ಅದೇ

## ಭಾಗ - IV

### ಬ್ಯಾಂಕಿಂಗ್ ಕಂಪನಿಗಳ ಅಧಿನಿಯಮ, 1949 (1949ರ 10)ಇದಕ್ಕೆ ತಿದ್ದುಪಡಿ

ತಿದ್ದುಪಡಿ ತಿದ್ದುಪಡಿಗಳ

1

34ಎ ಪ್ರಕರಣದಲ್ಲಿ (3)ನೇ ಉಪಪ್ರಕರಣದಲ್ಲಿ 'ಒಳಗೊಳ್ಳುತ್ತದೆ' ಎಂಬ ಪದದ ತರುವಾಯ
ಅಭಿವೃದ್ಧಿ ಬ್ಯಾಂಕು ಸ್ಥಾಪನೆಯಾದ
'ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು' ಎಂಬ ಪದಗಳನ್ನು ಸೇರಿಸಿ. ದಿನಾಂಕ

* * *